ಮನುಷ್ಯ ಜಾತಿ
ತಾನೊಂದೆ ವಲಂ

# ಕಾಯಕ ನಿರತ

ದಿನಾಂಕ ೩-೩-೨೦೧೬ ರಿಂದ ೫-೧-೨೦೨೦ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡ ಹೊಸ ಯೋಜನೆಗಳು ಹಾಗೂ ಮುಂದುವರಿದ ಕಾರ್ಯಚಟುವಟಿಕೆಗಳ ವಿವರ

ಪ್ರಧಾನ ಸಂಪಾದಕರು
ನಾಡೋಜ ಡಾ. ಮನು ಬಳಿಗಾರ್

ಸಂಪಾದಕರು
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

# ಮನುಷ್ಯ ಜಾತಿ ತಾನೊಂದೆ ವಲಂ

# ಕಾಯಕ ನಿರತ

ದಿನಾಂಕ ೩-೩-೨೦೧೬ ರಿಂದ ೫-೧-೨೦೨೦ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡ

ಹೊಸ ಯೋಜನೆಗಳು ಹಾಗೂ ಮುಂದುವರಿದ ಕಾರ್ಯಚಟುವಟಿಕೆಗಳ ವಿವರ


ಪ್ರಧಾನ ಸಂಪಾದಕರು

ನಾಡೋಜ ಡಾ. ಮನು ಬಳಿಗಾರ್

ಸಂಪಾದಕರು

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್



ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,

ಬೆಂಗಳೂರು - ೫೬೦ ೦೧೮.


## ಕಾಯಕ ನಿರತ


ಪ್ರಧಾನ ಸಂಪಾದಕರು

ನಾಡೋಜ ಡಾ. ಮನು ಬಳಿಗಾರ್

**ಅಧ್ಯಕ್ಷರು**

ಕನ್ನಡ ಸಾಹಿತ್ಯ ಪರಿಷತ್ತು

**ಸಂಪಾದಕರು**

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು

KAYAKA NIRATA – New and ongoing Projects and Works of Kannada Sahitya Parishat: Chief Editor : Nadoja Dr. Manu Baligar, Editor. Dr. D.K. Chittaiah Poojar, Published by : Kannada Sahitya Parishattu, Pampa Mahakavi Road, Chamarajapete, Bengaluru – 560018 Pages : 168

ಪ್ರಥಮ ಮುದ್ರಣ : ೨೦೧೯

ಪ್ರತಿಗಳು : ೧೫೦೦೦

© ಹಕ್ಕುಗಳನ್ನು ಕಾಯ್ದಿರಿಸಿದೆ.

## ಪ್ರಕಟಣಾ ಸಮಿತಿ

ನಾಡೋಜ ಡಾ. ಮನು ಬಳಿಗಾರ್

**ಅಧ್ಯಕ್ಷರು**

ಸಮ್ಮೇಳನಾಧ್ಯಕ್ಷರು - ಡಾ. ಚಂದ್ರಶೇಖರ ಕಂಬಾರ

ಅಳನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ -ಡಾ. ಪದ್ಮರಾಜ ದಂಡಾವತಿ

**ಸದಸ್ಯರು**

ಶ್ರೀ ಜರಗನಹಳ್ಳಿ ಶಿವಶಂಕರ್

ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ಪ್ರೊ, ಧರಣೇಂದ್ರ ಕುರಕುರಿ

ಶ್ರೀ ರಂಜಾನ್ ದರ್ಗಾ

ಡಾ. ಬಿ.ಕೆ. ರವಿ

ಡಾ. ತಮಿಳ್ ಸೆಲ್ವಿ

ಡಾ. ದೊಡ್ಡಮಲ್ಲಯ್ಯ

ಡಾ. ಎಚ್.ಎಲ್. ಪುಷ್ಪ

ಶ್ರೀ ಎ.ಆರ್. ಉಜ್ಜನಪ್ಪ

ಶ್ರೀ ಸಂಜಯ ಅಡಿಗ

ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

**ಗೌರವ ಕಾರ್ಯದರ್ಶಿಗಳು**

ಡಾ. ರಾಜಶೇಖರ ಹತಗುಂದಿ

ಶ್ರೀ ವ.ಚ. ಚನ್ನೇಗೌಡ

**ಗೌರವ ಕೋಶಾಧ್ಯಕ್ಷರು**

**ನಿರ್ದೇಶಕರು**

ಶ್ರೀ ಪಿ.ಮಲ್ಲಿಕಾರ್ಜುನಪ್ಪ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುಖಪುಟ ಕಲಾವಿನ್ಯಾಸ : ಚಂದ್ರಕಾಂತ ಪಟ್ಟಣ್

**ಮುದ್ರಣ : ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು**

## ಅಧ್ಯಕ್ಷರ ಮಾತು

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಹೆಮ್ಮೆಯ ಸಂಸ್ಥೆ. ಇದು ಸದಾ ಕ್ರಿಯಾಶೀಲವಾಗಿ **"ನವನವೋನ್ಮೇಶ ಶಾಲಿನಿಯಾಗಿ"** ಕಾರ್ಯನಿರ್ವಹಿಸುತ್ತಿದೆ. ಕನ್ನಡ, ಕನ್ನಡಿಗ, ಕರ್ನಾಟಕ'ಕ್ಕೆ ಸಂಬಂಧಿಸಿದಂತೆ ಹಲವಾರು ಯೋಜನೆಗಳನ್ನು ಹಾಕಿಕೊಂಡು ಕನ್ನಡಿಗನ ಸಾಂಸ್ಕೃತಿಕ ಬದುಕಿನ ಶ್ರೀಮಂತಿಕೆಗೆ ದುಡಿಯುತ್ತಿದೆ. ಈ ಹಿಂದೆಯೂ ಮುಂದೆಯೂ ಕಸಾಪ ಕನ್ನಡಿಗರ ಸಾಂಸ್ಕೃತಿಕ 'ಜೀವನದಿ'.

೦೩-೦೩-೨೦೧೬ ರಿಂದ ನಾನು ಇಂಥ ಪ್ರತಿಷ್ಠಿತ ಸಂಸ್ಥೆಯ ಅಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಂಡಿರುತ್ತೇನೆ. ಅಂದಿನಿಂದ ಇಂದಿನವರೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪರಿಷತ್ತಿನ ಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸಲು ಪ್ರಯತ್ನಿಸಿರುತ್ತೇನೆ. ಪರಿಷತ್ತು ಇದುವರೆಗೆ ಹಮ್ಮಿಕೊಂಡು ಬರುತ್ತಿದ್ದ ಕಾರ್ಯಕ್ರಮಗಳು ಹಾಗೂ ಕಾರ್ಯಯೋಜನೆಗಳನ್ನು ಮುಂದುವರೆಸುತ್ತಾ ಅದರ ಜೊತೆ ಜೊತೆಯಲ್ಲಿಯೇ ಹಲವಾರು ಹೊಸ ಹೊಸ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ಇಂಥ ಕಾರ್ಯ ಯೋಜನೆಗಳಿಂದ ಪರಿಷತ್ತು ಇನ್ನಷ್ಟು ಜನಮುಖಿಯಾಗಿದೆ ಎಂಬುದರ ಸಂಕೇತವಾಗಿ ನಾಡಿನ ಸಾಹಿತಿಗಳು, ಕಲಾವಿದರು, ಕನ್ನಡಪರ ಹೋರಾಟಗಾರರು, ಸಂಸ್ಕೃತಿ ಚಿಂತಕರು, ಗಡಿನಾಡ ಕನ್ನಡಿಗರು, ಹೊರನಾಡ/ಹೊರದೇಶ ಕನ್ನಡಿಗರು, ರೈತರು, ಕಾರ್ಮಿಕರು, ಜನಸಾಮಾನ್ಯರೂ ಸಹ ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಇದೀಗ 'ಕಾಯಕ ನಿರತ' ಎನ್ನುವ ಕೃತಿ ನಿಮ್ಮ ಕೈಯಲ್ಲಿದೆ. ಈ ಹಿಂದೆ ನೀಡಿದ್ದ 'ಕಾಯಕ ಪಥ'ದಲ್ಲಿ ದಿನಾಂಕ ೦೩-೦೩೨೦೧೬ ರಿಂದ ३೧-೧೦-೨೦೧೭ರವರೆಗೆ ಸಾಹಿತ್ಯ ಪರಿಷತ್ತು

ಮಾಡಿದ ಸಾಧನೆಗಳ ಮಾಹಿತಿ ಇದೆ. ಮುಂದುವರೆದಂತೆ ಇದೀಗ ಇಲ್ಲಿ 'ಕಾಯಕ ನಿರತ'ದಲ್ಲಿ ದಿನಾಂಕ ೧-೧೧-೨೦೧೭ ರಿಂದ ೯-೯-೨೦೧೯ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಹಾಕಿಕೊಂಡು ಅನುಷ್ಠಾನಗೊಳಿಸಿದ ಕಾರ್ಯ ಯೋಜನೆಗಳ ವಿವರ ನೀಡಲಾಗಿದೆ. **ದಿನಾಂಕ ೦೩-೦೩-೨೦೧೬ ರಿಂದ ೩೧-೧೦-೨೦೧೭ರವರೆಗೆ**

ದೆಹಲಿಯ ಹೊರನಾಡು ಕನ್ನಡಿಗರ ಪ್ರಥಮ ರಾಷ್ಟ್ರೀಯ ಸಮಾವೇಶ, ಮಹಾರಾಷ್ಟ್ರದಲ್ಲಿ ಪ್ರಥಮ ರಾಜ್ಯಮಟ್ಟದ ಕನ್ನಡಿಗರ ಸಾಹಿತ್ಯ ಸಮ್ಮೇಳನ, ಶತಮಾನೋತ್ಸವ ಭವನದ ನಿರ್ಮಾಣ, ಶಾಸ್ತ್ರೀಯ ಭಾಷಾ ಕಾರ್ಯಕ್ರಮಗಳು, ರಾಜ್ಯಾದ್ಯಂತ ಕನ್ನಡ ಭವನ ನಿರ್ಮಾಣ, ಸಾಧಕರೊಡನೆ ಸಂವಾದ, ೩೫ ಲಕ್ಷ ರೂ.ಗಳಿಗೂ ಹೆಚ್ಚಿನ ದತ್ತಿ ಸಂಗ್ರಹ, 'ಭಾರತವಾಣಿ' 'ಪೋರ್ಟಲ್' ಕನ್ನಡ ಏಕೀಕರಣ ವಜ್ರಮಹೋತ್ಸವ, ಕೃಷಿ, ಸಹಕಾರ ಸಾಹಿತ್ಯ ಸಮಾವೇಶ, ಸಾಹಿತಿಗಳ ಶತಮಾನೋತ್ಸವ ಕಾರ್ಯಕ್ರಮ, ಸಂಶೋಧನಾ ವಿಭಾಗಗಳಲ್ಲಿ ಹಲವಾರು ಹೊಸ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. ಹಾಗೆಯೇ ಹೊಸ ಸಲಹಾ ಸಮಿತಿಗಳನ್ನು ನೇಮಿಸಿ ಅವುಗಳ ಮೂಲಕ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎನ್ನುವ ಮಾಹಿತಿಯನ್ನು (ದಿನಾಂಕ ೦೩-೦೩-೨೦೧೬ ರಿಂದ ೩೧-೧೦-೨೦೧೭ರ ವರೆಗಿನ ಕಾರ್ಯ ಯೋಜನೆಗಳು) 'ಕಾಯಕ ಪಥ' ಕೃತಿಯ ಮೂಲಕ ಈ ಹಿಂದೆಯೇ ನಿಮ್ಮ ಕೈಗಿಟ್ಟಿರುತ್ತೇನೆ. ಅದನ್ನು ಓದಿ ಮೆಚ್ಚಿದ ಅನೇಕರು ನೀಡಿದ ಸಲಹೆ, ಪ್ರೋತ್ಸಾಹವನ್ನು ನಾನು ಮರೆಯಲಾರೆ. ಅದೇ ಜೀವಶಕ್ತಿಯಾಗಿ ಇನ್ನಷ್ಟು ಕಾರ್ಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಶಕ್ತಿ ನೀಡಿತು. ಅದರ ಫಲವೇ ಈ 'ಕಾಯಕ ನಿರತ' ಕೃತಿ.

**ದಿನಾಂಕ ೧-೧೧-೨೦೧೭ ರಿಂದ ೫-೧೦-೨೦೧೯ರ ವರೆಗೆ :**

ಮುಂಬೈಯಲ್ಲಿ ನಡೆದ ದ್ವಿತೀಯ ಹೊರನಾಡ ಕನ್ನಡಿಗರ ಸಮಾವೇಶ, ಶ್ರವಣಬೆಳಗೊಳದಲ್ಲಿ ನಡೆದ ಅಖಿಲ ಭಾರತ ಪ್ರಥಮ ಹಳಗನ್ನಡ ಸಾಹಿತ್ಯ ಸಮ್ಮೇಳನ, ಬಹರೇನ್‌ನಲ್ಲಿ ನಡೆದ ಪ್ರಥಮ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನ, ಧಾರವಾಡದಲ್ಲಿ ನಡೆದ ೮೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಚಿಕ್ಕಮಗಳೂರಿನಲ್ಲಿ ನೆರವೇರಿದ ರಾಜ್ಯಮಟ್ಟದ ಪ್ರಥಮ ಮಹಿಳಾ ಸಾಹಿತ್ಯ ಸಮ್ಮೇಳನ, ಹಲವಾರು ಸಾಹಿತಿಗಳ ಜನ್ಮ ಶತಮಾನೋತ್ಸವಗಳು, ಚಾರಿತ್ರಿಕ ದಾಖಲೆಯಾಗುವ ಕೋಲಾರದಲ್ಲಿ ಇತ್ತೀಚೆಗೆ ನಡೆದ

ರಾಜ್ಯಮಟ್ಟದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನ, ಶಾಸ್ತ್ರೀಯ ಭಾಷಾ ಕಮ್ಮಟಗಳು, ಮಹತ್ವಾಕಾಂಕ್ಷೆಯ ಕನ್ನಡ - ನೇಪಾಳಿ ಪರಸ್ಪರ ಸಾಹಿತ್ಯ ಸಂಸ್ಕೃತಿ ಪ್ರಚಾರದ ಪ್ರಥಮ ಅಂತರರಾಷ್ಟ್ರೀಯ ಮಟ್ಟದ ಕೃತಿಗಳ ಬಿಡುಗಡೆ, ಹತ್ತು ದಲಿತ ಸಾಹಿತ್ಯ ಸಂಪುಟಗಳ ಪ್ರಕಟಣೆ, ರಾಯಶಕ್ತಿ, 'ಹಳತು-ಹೊನ್ನು' ಭಾರತ್ ಶಾಶ್ವತ್ ಆವಾಜ್, ಆಧುನಿಕ ನೇಪಾಳಿ ಕವಿತೆಗಳು ಮುಂತಾದ ಮಹತ್ವದ ಕೃತಿಗಳ ಬಿಡುಗಡೆ, ಕನ್ನಡ ಭವನಗಳ ನಿರ್ಮಾಣ, ಸಂಶೋಧನಾ ವಿಭಾಗದ ಕಾರ್ಯಗಳು, ಕ.ಸಾ.ಪ. ಉದ್ಯೋಗ ಪೋರ್ಟಲ್ ಕಾರ್ಯಸಾಧನೆ, ಆಜೀವ ಸದಸ್ಯರ ಸಂಖ್ಯೆಯ ಹೆಚ್ಚಳ, ಅಪಾರವಾಗಿ ಏರುತ್ತಿರುವ ದತ್ತಿ ಸಂಗ್ರಹ ಮುಂತಾದ ಹಲವು ಕಾರ್ಯಗಳನ್ನು ಕುರಿತಂತೆ ಈ ಹೊತ್ತಿಗೆಯಲ್ಲಿ ಮಾಹಿತಿ ನೀಡಲಾಗಿದೆ.

ಕ.ಸಾ.ಪ. ಇತಿಹಾಸದಲ್ಲಿಯೇ ಅತ್ಯಂತ ಹೆಚ್ಚು ಮತ ನೀಡಿ ನನ್ನನ್ನು ಆಯ್ಕೆ ಮಾಡಿ ಕಳುಹಿಸಿದ ಕನ್ನಡಿಗರಿಗೆ ಈ ಎಲ್ಲಾ ಕಾರ್ಯಕ್ರಮಗಳ ಮಾಹಿತಿಯನ್ನು ನೀಡುವುದು ನನ್ನ ಆದ್ಯ ಕರ್ತವ್ಯವೆಂದು ಭಾವಿಸಿರುತ್ತೇನೆ; ಕಾರಣ ಈ ಪುಸ್ತಿಕೆ ನಿಮ್ಮ ಕೈಯಲ್ಲಿದೆ.

ಈ ನಿಟ್ಟಿನಲ್ಲಿ ನನ್ನೊಂದಿಗೆ ದುಡಿದ ಪರಿಷತ್ತಿನ ಪದಾಧಿಕಾರಿಗಳಿಗೆ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಿಗೆ, ವಿವಿಧ ಸಲಹಾ ಸಮಿತಿಯ ಸಂಚಾಲಕರು ಹಾಗು ಸದಸ್ಯರುಗಳಿಗೆ, ಪರಿಷತ್ತಿನ ಸಿಬ್ಬಂದಿ ವರ್ಗಕ್ಕೆ, ಪ್ರೋತ್ಸಾಹಿಸಿದ ಎಲ್ಲರಿಗೂ ಧನ್ಯವಾದಗಳನ್ನು ಹೇಳಬಯಸುತ್ತೇನೆ.

ಈ ಕೃತಿಯನ್ನು ಸಕಾಲಕ್ಕೆ ಸಿದ್ಧಪಡಿಸಿ ಕೊಟ್ಟ ಡಾ. ಡಿ. ಕೆ. ಚಿತ್ತಯ್ಯ ಪೂಜಾರ್, ಮಾಹಿತಿ ಸಂಗ್ರಹಿಸಿಕೊಟ್ಟ ಕೆ.ಎನ್, ಅವಿನಾಶ್, ಡಿ.ಟಿ.ಪಿ. ಮಾಡಿದ ಶ್ರೀಮತಿ ಪೂರ್ಣಿಮಾ, ಮುಖಪುಟ ವಿನ್ಯಾಸ ಮಾಡಿದ ಚಂದ್ರಕಾಂತ ಪಟ್ಟಣ್ ಹಾಗೂ ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ ಅಚ್ಚುಕೂಟದ ಸಿಬ್ಬಂದಿ ವರ್ಗಕ್ಕೂ ನನ್ನ ನೆನಕೆಗಳು ಸಲ್ಲುತ್ತವೆ.

(ಡಾ.ಮನು ಬಳಿಗಾರ್)

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು

# ಸಂಪಾದಕರ ಮಾತು

“**ಕಾಯಕ ನಿರತ'** ಎನ್ನುವ ಈ ಕೃತಿಯ ಶೀರ್ಷಿಕೆ ನಿರಂತರ ಕಾರ್ಯ ಯೋಜನೆಗಳ ಕಾಯಕ ನಿಷ್ಠೆ ಎನ್ನುವ ಕೇಂದ್ರ ಕಾಳಜಿ. ಮಾತುಗಳು ಕೇವಲ ಮಾತುಗಳಾಗಿ ಉಳಿಯದೇ ಸಾಕಾರಗೊಂಡು ಆಚರಣೆಯಾಗಿ ಜನರಿಗೆ ತಲುಪಬೇಕೆಂಬುದು ಇದರ ಉದ್ದೇಶ. ನಾಡೋಜ ಡಾ. ಮನು ಬಳಿಗಾರ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿ ಬಂದ ಮೇಲೆ ಅನೇಕ ಅಭೂತಪೂರ್ವವಾದ ಹಾಗೂ ಮಹತ್ತರವಾದ ಕಾರ್ಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದ್ದಾರೆ. ಅವರು ಹೊಸ ಯೋಜನೆಗಳನ್ನು ರೂಪಿಸುವುದರಲ್ಲಿ ಹಾಗೂ ಅವುಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಸುಪ್ರಸಿದ್ಧರು. ಯಾವಾಗಲೂ ಪ್ರಥಮಗಳನ್ನೇ ಸಾಧಿಸಿ ತೋರಿಸುವ ಛಲವುಳ್ಳವರು. ಅಂತಹ ಯೋಜನೆಗಳಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕದ ಏಳಿಗೆ ಮುಖ್ಯವಾದದ್ದು. ಇಂತಹ ಬಹುಮುಖ ಬೆಳವಣಿಗೆಯಲ್ಲಿ ಪ್ರತಿಭಾ ನ್ಯಾಯ, ಸಾಮಾಜಿಕ ನ್ಯಾಯ, ಪ್ರಾದೇಶಿಕ ನ್ಯಾಯ ಎಂಬ ಸಿದ್ಧಾಂತಗಳು ಮುಪ್ಪುರಿಗೊಂಡಿವೆ. ಎಲ್ಲೆಡೆ ಪ್ರಾಮಾಣಿಕತೆ, ಪಾರದರ್ಶಕತೆಗಳನ್ನು ವ್ರತದಂತೆ ಪಾಲಿಸಲಾಗಿದೆ.

ಮೂರು ಲಕ್ಷದ ಇಪ್ಪತ್ತೊಂಬತ್ತು ಸಾವಿರ ಆಜೀವ ಸದಸ್ಯರುಗಳನ್ನು ಒಳಗೊಂಡ ಹಾಗೂ ಆರೂ ಮುಕ್ಕಾಲು ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಈ ಪರಿಷತ್ತು. ಇದರ ಸ್ವಾಭಿಮಾನಕ್ಕೆ ಧಕ್ಕೆ ಬಾರದಂತೆ, ಪರಿಷತ್ತಿನ ಹಿರಿಮೆ - ಗರಿಮೆಗಳು ಮುಕ್ಕಾಗದಂತೆ ನೋಡಿಕೊಂಡು ಕೆಲಸ ಮಾಡುವುದು ಈ ಸಂಸ್ಥೆಯ ಅಧ್ಯಕ್ಷರ ಜವಾಬ್ದಾರಿಯಾಗಿರುತ್ತದೆ. ಅಂದರೆ ಇದೊಂದು ತಂತಿಯ ಮೇಲಿನ ನಡಿಗೆಯೇ ಸರಿ. ಅಂತಹದ್ದೊಂದು ಕಠಿಣ ಜವಾಬ್ದಾರಿಯನ್ನು ಪರಿಷತ್ತಿನವರು ಹೇಗೆ ನಿರ್ವಹಿಸಿದ್ದಾರೆ ಎಂಬುದರ ಕೈಗನ್ನಡಿಯೇ ಈ **'ಕಾಯಕ ನಿರತ'** ಎನ್ನುವ ಕೃತಿ.

ದಿನಾಂಕ ೦೧-೧೧-೨೦೧೭ ರಿಂದ ೯-೯-೨೦೧೯ರ ವರೆಗೆ ಪರಿಷತ್ತಿನಲ್ಲಿ ನಿರ್ವಹಿಸಿದ ಜವಾಬ್ದಾರಿಗಳು, ಹಾಕಿಕೊಂಡ ಮಹತ್ತರ ಯೋಜನೆಗಳು ಹಾಗೂ ಅನುಷ್ಠಾನಗೊಳಿಸಿದ ಯೋಜನೆಗಳ ಮಾಹಿತಿಗಳನ್ನು, ಘನಕಾರ್ಯಗಳನ್ನು, ಅವುಗಳ ಮಹತ್ವವನ್ನು ಈ ಕೃತಿಯ ಮೂಲಕ ಗೌರವಪೂರ್ವಕವಾಗಿ ಕನ್ನಡಿಗರಿಗೆ ತಿಳಿಸುವ ಉದ್ದೇಶವೇ ಈ **'ಕಾಯಕ ನಿರತ'** ಕೃತಿ.

ಈಗಾಗಲೇ **‘ಕಾಯಕ ಪಥ'** ಎನ್ನುವ ಕೃತಿಯ ಮೂಲಕ ದಿನಾಂಕ ೦೩-೦೩-೨೦೧೬ ರಿಂದ ೩೦-೧೦-೨೦೧೭ರವರೆಗೆ ಕ.ಸಾ.ಪ. ಕೈಗೊಂಡ ಹೊಸ ಯೋಜನೆಗಳು ಹಾಗೂ

ಅನುಷ್ಠಾನವಾದ ಯೋಜನೆಗಳನ್ನು ಕನ್ನಡಿಗರ ಕೈಗಿಡಲಾಗಿತ್ತು. **'ಕಾಯಕ ಪಥ'**ವನ್ನು ಓದಿ ಪರಿಶೀಲಿಸಿದ ಅನೇಕ ವಿದ್ವಾಂಸರು, ಸಂಸ್ಕೃತಿ ಚಿಂತಕರು, ಕಲಾವಿದರು, ವಿಮರ್ಶಕರು, ಸಾಹಿತಿಗಳು, ಕನ್ನಡಪರ ಹೋರಾಟಗಾರರು, ಚಳುವಳಿಗಾರರು ಅವುಗಳನ್ನು ಮೆಚ್ಚಿ ಶ್ಲಾಘಿಸಿದ್ದರು. ಅವರ ಸಲಹೆ, ಸೂಚನೆಗಳನ್ನೊಳಗೊಂಡಂತೆ ಪರಿಷತ್ತು ತದನಂತರ ಹಲವಾರು ಯೋಜನೆಗಳನ್ನು ಹಾಕಿಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನ ಹಾಗೂ ಕನ್ನಡ, ಕನ್ನಡಿಗ, ಕರ್ನಾಟಕದ ಬಹುಮುಖಿ ಬೆಳವಣಿಗೆಗೆ ಶ್ರಮಿಸಿದೆ. ಹಲವಾರು ಯೋಜನೆಗಳು ಅನುಷ್ಠಾನಗೊಂಡು ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿವೆ.

**'ಕಾಯಕ ನಿರತ'** ಕೃತಿ ಇದೀಗ ನಿಮ್ಮ ಕೈಯಲ್ಲಿದೆ.

ಎಂದಿನಂತೆ ನನ್ನ ಮೇಲೆ ವಿಶ್ವಾಸವಿಟ್ಟು ಇಂತಹದ್ದೊಂದು ಬಹುಮುಖ್ಯ ಕೆಲಸವನ್ನು ಮಾಡಿಕೊಡಲು ಅವಕಾಶ ನೀಡಿದ ಕ.ಸಾ.ಪ.ದ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರಿಗೆ ನಾನು ಋಣಿಯಾಗಿದ್ದೇನೆ. ಹಾಗೆಯೇ ವ್ಯವಸ್ಥಾಪಕರಾದ ಶ್ರೀ ಎನ್. ಶಿವಣ್ಣ, ಶ್ರೀಮತಿ ಕೆ. ನಾಗರತ್ನಮ್ಮ, ಶ್ರೀಮತಿ ಬಿ.ಎಂ. ನಾಗರತ್ನ, ಶ್ರೀಮತಿ ಕೆ.ಆರ್. ಶಾಂತಕುಮಾರಿ, ಶ್ರೀ ಕೆ.ಎನ್. ಅವಿನಾಶ್ ಅವರು ಗಳಿಗೂ, ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿಕೊಟ್ಟ ಶ್ರೀಮತಿ ಪೂರ್ಣಿಮಾ ಅವರಿಗೂ, ಮುಖಪುಟ ವಿನ್ಯಾಸ ಮಾಡಿಕೊಟ್ಟ ಕಲಾವಿದ ಶ್ರೀ ಚಂದ್ರಕಾಂತ ಪಟ್ಟಣ್ ಅವರಿಗೂ ಹಾಗೂ ಪರಿಷತ್ತಿನ ಪದಾಧಿಕಾರಿಗಳಾದ ಶ್ರೀ ವ.ಚ. ಚನ್ನೇಗೌಡ, ಡಾ. ರಾಜಶೇಖರ ಹತಗುಂದಿ, ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಪ್ರಕಟಣಾ ವಿಭಾಗದ ರಾಜ್ಯ ಸಂಚಾಲಕರಾದ ಡಾ. ಪದ್ಮರಾಜ ದಂಡಾವತಿ ಅವರಿಗೂ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ.

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್
ಸಂಯೋಜಕರು, ಸಂಶೋಧನಾ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು

# ಕಾಯಕ ಪಥ

ದಿನಾಂಕ ೦೩-೦೩-೨೦೧೬ ರಿಂದ ೩೦-೧೦-೨೦೧೭ರವರೆಗೆ

ಕಸಾಪ ಕೈಗೊಂಡ ಹೊಸ ಯೋಜನೆಗಳು ಹಾಗೂ ಮುಂದುವರಿದ ಕಾರ್ಯಚಟುವಟಿಕೆಗಳ ವಿವರ

## ♦ ಕನ್ನಡ ಸಾಹಿತ್ಯ ಪರಿಷತ್ತಿನ ೨೫ನೇ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡದ್ದು

೨೦೧೬ರ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿ ದಿನಾಂಕ ೦೩-೦೩-೨೦೧೬ ರಂದು ಡಾ. ಮನು ಬಳಿಗಾರ್ ಅವರು ೨೫ನೆಯ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡರು. ಸಾಹಿತಿ ಹಾಗೂ ಪತ್ರಕರ್ತರಾದ ಡಾ. ರಾಜಶೇಖರ ಹತಗುಂದಿ, ಕನ್ನಡಪರ ಹೋರಾಟಗಾರ ಹಾಗೂ ಕೆ.ಎಸ್.ಆರ್.ಟಿ.ಸಿ. ಕನ್ನಡ ಕ್ರಿಯಾಸಮಿತಿಯ ರಾಜ್ಯಾಧ್ಯಕ್ಷರಾದ ಶ್ರೀ ವ.ಚ. ಚನ್ನೇಗೌಡ ಅವರುಗಳನ್ನು ಗೌರವ ಕಾರ್ಯದರ್ಶಿಗಳನ್ನಾಗಿ ಮತ್ತು ಸಾಹಿತಿಗಳು, ನಿವೃತ್ತ ಹಿರಿಯ ಲೆಕ್ಕ ಅಧಿಕಾರಿಗಳಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ ಅವರನ್ನು ಗೌರವ ಕೋಶಾಧ್ಯಕ್ಷರನ್ನಾಗಿ ಸಾಹಿತ್ಯ ಪರಿಷತ್ತಿಗೆ ನೇಮಿಸಿಕೊಂಡರು. ಕಸಾಪದ ಸಂಶೋಧನಾ ವಿಭಾಗಕ್ಕೆ ಡಾ. ಡಿ.ಕೆ. ಚಿತ್ತಯ್ಯ ಪೂಜಾರ್ ಅವರನ್ನು ಸಂಯೋಜಕರನ್ನಾಗಿ ನೇಮಕ ಮಾಡಲಾಯಿತು.

## ♦ ಉದ್ಘಾಟನೆಗೆ ಸಿದ್ಧವಾಗಿರುವ ಶತಮಾನೋತ್ಸವ ಭವನ

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಭವನ ನಿರ್ಮಾಣಕ್ಕೆ ಡಾ. ಮನು ಬಳಿಗಾರ್ ಅಧ್ಯಕ್ಷತೆಯಲ್ಲಿ ಶ್ರೀ ಪುಂಡಲೀಕ ಹಾಲಂಬಿ ಹಾಗೂ ಕರ್ನಾಟಕ ಗೃಹಮಂಡಳಿ ಅಧ್ಯಕ್ಷ ಶ್ರೀ ಎಸ್. ಜಿ. ನಂಜಯ್ಯನಮಠ ಅವರು ದಿನಾಂಕ ಮಾರ್ಚ್ ೧೪, ೨೦೧೬ ರಂದು ಗುದ್ದಲಿಪೂಜೆ ನೆರವೇರಿಸಿ ಚಾಲನೆ ನೀಡಿದ್ದರು. ಮೂರು ಅಂತಸ್ತಿನ ಈ ಕಟ್ಟಡ ಇದೀಗ ೨೦೧೭ರ ಅಕ್ಟೋಬರ್ ತಿಂಗಳಲ್ಲಿ ಪೂರ್ಣಗೊಂಡಿದ್ದು, ಸುಸಜ್ಜಿತ ಗ್ರಂಥಾಲಯ, ಅತಿಥಿ ಗೃಹ, ತರಗತಿ ಕೊಠಡಿಗಳು, ವಿಶಾಲ ಸಭಾಂಗಣಗಳನ್ನು ಹೊಂದಿರುತ್ತದೆ. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ನವರಿಗೆ ಉದ್ಘಾಟಿಸಬೇಕೆಂದು ಪತ್ರ ಬರೆದು ಕೋರಲಾಗಿದೆ. ಕಸಾಪ ಚರಿತ್ರೆಯಲ್ಲಿ ಇದೊಂದು ಅವಿಸ್ಮರಣೀಯ ಸಂಗತಿಯೆಂದೇ ಹೇಳಬೇಕು.

ಡಾ. ಮನು ಬಳಿಗಾರ್ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡ ಹತ್ತೇ ದಿನಗಳಲ್ಲಿ ಈ ಐತಿಹಾಸಿಕ ಭವನಕ್ಕೆ ಗುದ್ದಲಿಪೂಜೆ ನೆರವೇರಿಸಿದ್ದು ವಿಶೇಷ.

### ♦ ಕನ್ನಡ ಶಾಸ್ತ್ರೀಯ ಭಾಷೆ ಅಧ್ಯಯನ ತರಬೇತಿ ಶಿಬಿರ ಆಯೋಜಿಸುವ ಬಗ್ಗೆ ಒಪ್ಪಂದ ಹಾಗೂ ಅನುಷ್ಠಾನ

ಕರ್ನಾಟಕವು ಏಕೀಕರಣಗೊಂಡು ೬೦ ವರ್ಷಗಳು ತುಂಬಿದ ನೆನಪಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಮೈಸೂರಿನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಭಾಷಾ ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಆ ಕೇಂದ್ರದ ನಿರ್ದೇಶಕರಾದ ಪ್ರೊ ಪಿ.ಕೆ. ಖಂಡೋಬಾ ಅವರೊಂದಿಗೆ ಚರ್ಚಿಸಿ, ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ತರಬೇತಿ ಶಿಬಿರಗಳನ್ನು ಆಯೋಜಿಸುವ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಅದರ ಅನ್ವಯ :

### ♦ "ಶಾಸ್ತ್ರೀಯ ಪಠ್ಯಗಳ ಓದು - ಅಧ್ಯಯನ" ತರಬೇತಿ ಶಿಬಿರ ಹಮ್ಮಿಕೊಂಡಿರುವ ಬಗ್ಗೆ :

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಮೈಸೂರು ಮತ್ತು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವುಗಳು ಜಂಟಿಯಾಗಿ ೨೦೧೬-೧೭ನೇ ಸಾಲಿನಲ್ಲಿ "ಶಾಸ್ತ್ರೀಯ ಪಠ್ಯಗಳ ಓದು-ಅಧ್ಯಯನ" ಎಂಬ ವಿಷಯದಲ್ಲಿ ತರಬೇತಿ ಶಿಬಿರಗಳನ್ನು ರಾಜ್ಯಾದ್ಯಂತ ಆಯೋಜಿಸಲು ನಿರ್ಧರಿಸಲಾಯಿತು. ಈ ತರಬೇತಿ ಶಿಬಿರದಲ್ಲಿ ಆಯಾ ಜಿಲ್ಲೆಯ ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯ ಮಟ್ಟದ ೪೦ ರಿಂದ ೫೦ ಮಂದಿ ಶಿಬಿರಾರ್ಥಿಗಳನ್ನು ಆಯ್ಕೆಮಾಡಿ ೫ (ಐದು) ದಿನಗಳ ತರಬೇತಿ ನಡೆಸಬೇಕಾಗುತ್ತದೆ. ಈ ಶಿಬಿರ / ತರಬೇತಿಯನ್ನು ಪ್ರತಿ ತಿಂಗಳು ಆಯೋಜಿಸಬೇಕಾಗುತ್ತದೆ. ನಂತರದ ದಿನಗಳಲ್ಲಿ ಎಲ್ಲ ಜಿಲ್ಲೆ ಹಾಗೂ ೪ ಗಡಿನಾಡ ಘಟಕಗಳಲ್ಲಿಯೂ ಶಿಬಿರ ನಡೆಸಲು ತೀರ್ಮಾನಿಸಲಾಗಿದೆ.

ಅದರಂತೆ :

| | |
|---|---|
| ಮೈಸೂರು | ೨೦೧೬ ಜುಲೈ ೨೫ ರಿಂದ ೨೯ರವರೆಗೆ |
| ಕಲಬುರಗಿ | ೨೦೧೬ ಆಗಸ್ಟ್ ೧೮ ರಿಂದ ೨೨ರವರೆಗೆ |

| | |
|---|---|
| ಬೆಳಗಾವಿ | ೨೦೧೭ ಸೆಪ್ಟೆಂಬರ್ ೧೯ ರಿಂದ ೨೩ರವರೆಗೆ |
| ಉಡುಪಿ | ೨೦೧೭ ನವೆಂಬರ್ ೧೯ ರಿಂದ ೨೩ರವರೆಗೆ |
| ಚಿಕ್ಕಬಳ್ಳಾಪುರ | ೨೦೧೮ ಜನವರಿ ೨೩ ರಿಂದ ೨೮ರವರೆಗೆ |
| ಚಾಮರಾಜನಗರ | ೨೦೧೮ ಫೆಬ್ರವರಿ ೧೭ ರಿಂದ ೨೦ರವರೆಗೆ |
| ಕೋಲಾರದ | ೨೦೧೮ ಆಗಸ್ಟ್ ೨೯ ರಿಂದ ಸೆಪ್ಟೆಂಬರ್ ೨ರವರೆಗೆ |
| ಚಿತ್ರದುರ್ಗ | ೨೦೧೮ ಸೆಪ್ಟೆಂಬರ್ ೭ ರಿಂದ ೧೦ರವರೆಗೆ |
| ಬೀದರ್ | ೨೦೧೮ ಸೆಪ್ಟೆಂಬರ್ ೯ ರಿಂದ ೧೩ರವರೆಗೆ |

ಮೇಲ್ಕಂಡ ಜಿಲ್ಲೆಗಳಲ್ಲಿ ಅಭಿಜಾತ ಕನ್ನಡ ಪಠ್ಯವಾಚನ ಮತ್ತು ಅಧ್ಯಯನ ಶಿಬಿರಗಳನ್ನು ನಡೆಸಲಾಗಿದೆ.

## ♦ ನೂತನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ತರಬೇತಿ ಶಿಬಿರ ಆಯೋಜನೆ

ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಜಿಲ್ಲಾ / ಗಡಿನಾಡ ಘಟಕಗಳ ಅಧ್ಯಕ್ಷರುಗಳಿಗೆ ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ತರಬೇತಿ ಶಿಬಿರವನ್ನು ದಿನಾಂಕ ೩೦-೦೫-೨೦೧೭ರ ಸೋಮವಾರ ಆಯೋಜಿಸಲಾಗಿತ್ತು. ಹಿರಿಯ ಸಾಹಿತಿಗಳು, ಮಾಜಿ ಮುಖ್ಯಮಂತ್ರಿಗಳು, ಸರಸ್ವತಿ ಸಮ್ಮಾನ್ ಹಾಗೂ ಮೂರ್ತಿದೇವಿ ಪ್ರಶಸ್ತಿ ಪುರಸ್ಕೃತರೂ ಆದ ಮಾನ್ಯ ಡಾ. ಎಂ. ವೀರಪ್ಪ ಮೊಯಿಲಿ ಅವರು ಶಿಬಿರದ ಉದ್ಘಾಟನೆಯನ್ನು ನೆರವೇರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಡಾ. ಗೊ.ರು. ಚನ್ನಬಸಪ್ಪ ಅವರು ಆಶಯ ನುಡಿಗಳನ್ನಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷರುಗಳಿಗೆ ತರಬೇತಿ ಶಿಬಿರವನ್ನು ಆಯೋಜಿಸಿದ್ದು ಪರಿಷತ್ತಿನ ಇತಿಹಾಸದಲ್ಲಿ ಇದೇ ಮೊದಲು.

ಇದಕ್ಕೆ ಉತ್ತಮ ಪ್ರತಿಕ್ರಿಯೆಯೂ ಬಂತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷರ ಜವಾಬ್ದಾರಿ, ಸ್ಥಳೀಯ ಸಾಹಿತಿಗಳು, ಚುನಾಯಿತ ಜನಪ್ರತಿನಿಧಿಗಳು, ಜನ ಸಾಮಾನ್ಯರು, ಕನ್ನಡ ಪರ ಸಂಘಟನೆಗಳು, ವಿವಿಧ ಸಂಘ ಸಂಸ್ಥೆಗಳು... ಮುಂತಾದವರುಗಳೊಂದಿಗೆ ಕಸಾಪ ಹೇಗೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಹೋಗಬೇಕೆಂಬುದನ್ನು ಮನವರಿಕೆ ಮಾಡಿಕೊಡಲಾಯಿತು. ಕೇಂದ್ರ ಕಸಾಪದ ಅನುದಾನಗಳ ಬಳಕೆ, ಲೆಕ್ಕಪತ್ರ ನಿರ್ವಹಣೆ, ಸಮ್ಮೇಳನಗಳು, ವಿಚಾರ

ಸಂಕಿರಣಗಳು, ಭಾಷೆ, ಸಾಹಿತ್ಯ, ಸಂಸ್ಕೃತಿ ಕುರಿತ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಸಂಘಟಿಸುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತನ್ನು ಇನ್ನಷ್ಟು ಬೆಳಸಬೇಕೆಂದು ತಿಳಿಸಲಾಯಿತು.

## ♦ ಸಾಧಕರೊಡನೆ ಸಂವಾದ - ವಿನೂತನ ಕಾರ್ಯಕ್ರಮ ಆಯೋಜನೆ.

ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ಲೇಖಕಿಯರ ಸಂಘದ ಸಹಯೋಗದೊಂದಿಗೆ 'ಸಾಧಕರೊಡನೆ ಸಂವಾದ' ಎಂಬ ವಿನೂತನ ಕಾರ್ಯಕ್ರಮವನ್ನು ೨೦೧೬ರ ಜೂನ್ ತಿಂಗಳಿನಿಂದ ಪ್ರಾರಂಭಿಸಿತು. ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಸುಧಾ ಮೂರ್ತಿಯವರು ಈ ಪ್ರಪ್ರಥಮ ಕಾರ್ಯಕ್ರಮದ ಉದ್ಘಾಟನೆಯನ್ನು ನೇರವೇರಿಸಿದರು. ಮಾಜಿ ಸಚಿವರು ಹಾಗೂ ಸಂಸ್ಕೃತಿ ಚಿಂತಕರು ಆದ ಡಾ. ಲೀಲಾದೇವಿ ಆರ್. ಪ್ರಸಾದ್ ಅವರು ಈ ಕಾರ್ಯಕ್ರಮದ ಪ್ರಥಮ ಸಾಧಕರಾಗಿ ಸಂವಾದದಲ್ಲಿ ಪಾಲ್ಗೊಂಡರು.

ಕನ್ನಡ ನಾಡಿನಲ್ಲಿ ಸಾಹಿತ್ಯ, ಸಂಗೀತ, ಕಲೆ, ಕನ್ನಡಪರ ಹೋರಾಟ, ಶಿಕ್ಷಣ, ವೈದ್ಯಕೀಯ, ಸಿನೆಮಾ, ಸಮಾಜಸೇವೆ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಆಹ್ವಾನಿಸಿ ಅವರೊಂದಿಗೆ ಅರ್ಥಪೂರ್ಣ ಸಂವಾದ ನಡೆಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಸಾಧಕರನ್ನು ಗೌರವಿಸುವುದರ ಜೊತೆಗೆ ಇಂದಿನ ಯುವ ಪೀಳಿಗೆಯನ್ನು ಇನ್ನಷ್ಟು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳುವಂತೆ ಮಾಡುವುದು ಮತ್ತೊಂದು ಉದ್ದೇಶ. ಪ್ರತಿ ತಿಂಗಳು ನಾಲ್ಕನೇ ಶನಿವಾರ ಸಂಜೆ ಈ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬರಲಾಗುತ್ತಿದೆ.

ಇದುವರೆಗೆ ಸಾಧಕರಾಗಿ ಪಾಲ್ಗೊಂಡವರ ವಿವರ ಈ ಕೆಳಕಂಡಂತಿದೆ.

**೨೦೧೬ನೇ ಸಾಲಿನಲ್ಲಿ**

೧. ಡಾ. ಲೀಲಾದೇವಿ ಆರ್. ಪ್ರಸಾದ್ - ಜೂನ್

೨. ಪ್ರೊ. ಜಿ. ವೆಂಕಟಸುಬ್ಬಯ್ಯ - ಜುಲೈ

೩. ಡಾ. ವೈದೇಹಿ - ಆಗಸ್ಟ್

೪. ಡಾ. ಸಿ.ಎನ್. ಮಂಜುನಾಥ್ - ಸೆಪ್ಟೆಂಬರ್

೫. ಡಾ. ಶ್ಯಾಮಲಾ ಜಿ. ಭಾವೆ - ಅಕ್ಟೋಬರ್

೬. ಡಾ. ಎಚ್.ಎಸ್. ದೊರೆಸ್ವಾಮಿ - ನವೆಂಬರ್

೭ ಶ್ರೀಮತಿ ಕನಕಾಮೂರ್ತಿ - ಡಿಸೆಂಬರ್

**೨೦೧೭ನೇ ಸಾಲಿನಲ್ಲಿ**

೮. ನಾಡೋಜ ಡಾ. ಪಾಟೀಲ ಪುಟ್ಟಪ್ಪ - ಜನವರಿ

೯. ಡಾ. ಕಮಲಾ ಹಂಪನಾ - ಫೆಬ್ರವರಿ

೧೦. ಡಾ. ಮುಖ್ಯಮಂತ್ರಿ ಚಂದ್ರು - ಮಾರ್ಚ್

೧೧. ಡಾ. ಲೀಲಾವತಿ (ಹಿರಿಯ ಚಿತ್ರ ನಟಿ)- ಏಪ್ರಿಲ್

೧೨. ಡಾ. ಕೆ.ಎಸ್. ನಿಸಾರ್ ಅಹಮದ್ - ಮೇ

೧೩. ಶ್ರೀಮತಿ ಚೆನ್ನಮ್ಮ ಹಳ್ಳಿಕೇರಿ - ಜೂನ್

೧೪. ಡಾ. ಮಲ್ಲೇಪುರಂ ಜಿ. ವೆಂಕಟೇಶ್ - ಜುಲೈ

೧೫. ಡಾ. ಜಯಂತಿ - ಆಗಸ್ಟ್

೧೬ ಡಾ. ಜಯಂತ್ ಕಾಯ್ಕಿಣಿ - ಸೆಪ್ಟೆಂಬರ್

೧೭. ಶ್ರೀಮತಿ ಬಿ.ಎಸ್. ಶೈಲಜಾ - ಅಕ್ಟೋಬರ್

- ಇದು ಹೀಗೆ ಮುಂದುವರೆಯುತ್ತದೆ.

## ♦ ರಾಜ್ಯಾದ್ಯಂತ ಕನ್ನಡ/ಸಾಂಸ್ಕೃತಿಕ ಭವನ ನಿರ್ಮಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಯಿಂದ ಅನುದಾನ ಮಂಜೂರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಎಚ್.ಕೆ. ಪಾಟೀಲ್ ಅವರನ್ನು ಡಾ. ಮನು ಬಳಿಗಾರ್ ಅವರು ದಿನಾಂಕ ೧೪-೦೪-೨೦೧೬ ರಂದು ಭೇಟಿಯಾಗಿ ರಾಜ್ಯಾದ್ಯಂತ ಕನ್ನಡ / ಸಾಂಸ್ಕೃತಿಕ ಭವನಗಳ ಕಟ್ಟಡ ನಿರ್ಮಾಣ ಮಾಡಲು ಆ ಇಲಾಖೆ ವತಿಯಿಂದ ಪೂರಕ ಅನುದಾನವನ್ನು ನೀಡುವ ಕುರಿತು ವಿಸ್ತ್ರತವಾಗಿ ಚರ್ಚಿಸಿ, ಇಂತಹ ಒಂದು ಭವನಕ್ಕಾಗಿ ೧೦ ರಿಂದ ೨೦ ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಕೊಡಲು ತಾತ್ವಿಕವಾಗಿ ಒಪ್ಪಿಗೆಯನ್ನು ಪಡೆದುಕೊಂಡು ಬಂದಿದ್ದರು. ಇದೂ ಸಹ ಕಸಾಪ ಚರಿತ್ರೆಯಲ್ಲಿ ದಾಖಲಾರ್ಹ ಸಂಗತಿಯಾಗಿದೆ. ಈ ಯೋಜನೆಯಿಂದ ಗ್ರಾಮ ಪಂಚಾಯಿತಿ ಮಟ್ಟದಿಂದಲೇ

ನಾಡುನುಡಿಯ ಸಂಸ್ಕೃತಿಯನ್ನು ಇನ್ನಷ್ಟು ಗಟ್ಟಿಗೊಳಿಸುವ ಕೆಲಸ ಆಗುತ್ತದೆ ಎಂಬ ಆಶಯ ಪರಿಷತ್ತಿನದು.

ಅದರಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಜಿಲ್ಲಾ ಘಟಕಗಳ ಅಧ್ಯಕ್ಷರುಗಳಿಗೆ ಅವರವರ ಜಿಲ್ಲೆಯಲ್ಲಿ ಮಹತ್ವದ ಸಾಹಿತಿಗಳು / ಕಲಾವಿದರುಗಳು ನೆಲೆಸಿದ್ದ / ಹುಟ್ಟಿದ್ದ ಗ್ರಾಮಗಳಿದ್ದಲ್ಲಿ ಕನ್ನಡ / ಸಂಸ್ಕೃತಿ ಭವನ ನಿರ್ಮಾಣಕ್ಕೆ ಪ್ರಸ್ತಾವನೆಗಳನ್ನು ಕಳಿಸಿಕೊಡಬೇಕೆಂದು ತಿಳಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಘೋಡಗೇರಿ ಗ್ರಾಮದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರರ ಹೆಸರಿನ ಭವನ ನಿರ್ಮಾಣಕ್ಕಾಗಿ ರೂ೧೦,೦೦,೦೦೦-೦೦ ಮಂಜೂರಾಗಿ ಈಗಾಗಲೇ ಇದಕ್ಕಾಗಿ ಅನುದಾನ ನೀಡಲಾಗಿದೆ.

**ಇಲ್ಲಿಯವರೆಗೆ ಭವನ ನಿರ್ಮಾಣಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳ ವಿವರಗಳು:**

೧. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಧಡೇರ ಕೊಪ್ಪ ಗ್ರಾಮದಲ್ಲಿ ಸಂಸ್ಕೃತಿ ಚಿಂತಕರೂ, ಸಂಶೋಧಕರೂ

ಆದ ದಿ. ಡಾ. ಶಂ.ಬಾ. ಜೋಶಿ ಅವರ ಸ್ಮರಣಾರ್ಥ ಕನ್ನಡ ಭವನ ನಿರ್ಮಾಣಕ್ಕಾಗಿ ರೂ. ೧೫,೦೦,೦೦೦-೦೦.

೨. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಹಿರೇಕೊಪ್ಪ ಗ್ರಾಮದಲ್ಲಿ ಡಾ. ಡಿ. ಎಸ್. ಕರ್ಕಿ ಅವರ

ಹೆಸರಿನಲ್ಲಿ ಸಾಹಿತ್ಯ ಭವನ ನಿರ್ಮಾಣಕ್ಕಾಗಿ ರೂ೨೦,೦೦,೦೦೦-೦೦.

೩. ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಇಟಗಿ ಗ್ರಾಮದಲ್ಲಿ ದಿ. ಗುರುಸಿದ್ಧ ಗೋಣಿ ಅವರ ಹೆಸರಿನಲ್ಲಿ

ಕನ್ನಡ ಸಾಹಿತ್ಯ ಭವನ ನಿರ್ಮಾಣಕ್ಕಾಗಿ ರೂ.೧೫,೦೦,೦೦೦-೦೦.

೪. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹನುಮಸಾಗರದಲ್ಲಿ ಕನ್ನಡ ಸಾಹಿತ್ಯ ಭವನ ನಿರ್ಮಾಣಕ್ಕಾಗಿ

ರೂ.೧೫,೦೦,೦೦೦-೦೦ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಅತಿ ಶೀಘ್ರದಲ್ಲಿ ಇವುಗಳಿಗೆ ಸರ್ಕಾರದ ಮಂಜೂರಾತಿ ಈ ಪಡೆಯಲಾಗುವುದು.

- ಈವರೆಗೆ ಸೇರ್ಪಡೆಯಾದ ಹೊಸ ದತ್ತಿಗಳು

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮೊದಲಿನಿಂದ ಇಲ್ಲಿಯವರೆಗೆ ೧೮೨೦ ದತ್ತಿಗಳನ್ನು ನೋಂದಾಯಿಸಲಾಗಿದೆ.

ಪರಿಷತ್ತು, ದತ್ತಿ ಕಾರ್ಯಕ್ರಮಗಳನ್ನು ನಡೆಸಲು ರಾಜ್ಯದ ಎಲ್ಲಾ ಜಿಲ್ಲಾ ಸಮಿತಿಗಳಿಗೆ ಮತ್ತು ಕೇರಳ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಗಡಿನಾಡ ಘಟಕಗಳಿಗೆ ಅವಕಾಶ ನೀಡಿದೆ. ಅದರಂತೆ ಕಾರ್ಯಕ್ರಮಗಳು ನಡೆಯುತ್ತಿವೆ.

೩-೦೩-೨೦೧೬ ರಲ್ಲಿದ್ದ ಒಟ್ಟು ದತ್ತಿಗಳು ೧೭೮೬

ಡಾ. ಮನು ಬಳಿಗಾರ್ ಅಧ್ಯಕ್ಷರಾದ ಮೇಲೆ ೩-೩-೨೦೧೬ ರಿಂದ ೩೧-೩-೨೦೧೭ರ ಪೂರ್ತ ಸಂಗ್ರಹವಾಗಿರುವ ಹೊಸ ದತ್ತಿಗಳು ೩೪

**ಒಟ್ಟು ಸಂಗ್ರಹವಾಗಿರುವ ಹೊಸ ದತ್ತಿಗಳ ಸಂಖ್ಯೆ - ೧೮೨೦**

೩೧-೩-೨೦೧೬ಕ್ಕಿಂತ ಮುಂಚೆ ಇದ್ದ ಒಟ್ಟು ದತ್ತಿಯ ಹಣ

**ರೂ. ೨,೯೨,೧೮,೨೪೧-00**

೧-೪-೨೦೧೬ ರಿಂದ ೩೧-೫-೨೦೧೭ರವರೆಗೆ ಸಂಗ್ರಹವಾದ ಹೊಸ ದತ್ತಿ ಹಣ ರೂ. ೩೫,೧೫,೦೦೧-೦೦

**ಒಟ್ಟು ಮೊತ್ತ ರೂ. ೩,೨೭,೩೩,೨೪೨**

ಡಾ. ಮನು ಬಳಿಗಾರ್ ಕಸಾಪ ಅಧ್ಯಕ್ಷರಾಗಿ ಬಂದ ಮೇಲೆ ಜನರು ಪರಿಷತ್ತಿನ ಮೇಲಿನ ಅಭಿಮಾನದಿಂದ ರೂ. ೩೫,೧೫,೦೦೧ (ಮೂವತ್ತೈದು ಲಕ್ಷಕ್ಕೂ) ಹೆಚ್ಚು ಹಣವನ್ನು ಪರಿಷತ್ತಿನಲ್ಲಿ ದತ್ತಿಯಾಗಿಟ್ಟಿರುತ್ತಾರೆ. ಮುಂದಿನ ದಿನಗಳಲ್ಲಿ ಇದು ಇನ್ನೂ ಹೆಚ್ಚು ಆಗುವ ಸಾಧ್ಯತೆ ಇದೆ. ಹೊಸದಾಗಿ ಸಂಗ್ರಹವಾದ ದತ್ತಿಗಳ ವಿವರ ಈ ಕೆಳಗಿನಂತೆ ಇದೆ.

೦೧. ೨ನೇ ಕಳಸ ಹೋಬಳಿ ಸಾಹಿತ್ಯ ಸಮ್ಮೇಳನ ೨೦೧೫ರ ದತ್ತಿ, ಚಿಕ್ಕಮಗಳೂರು
೧,೨೫,೦೦೦-೦೦

೦೨. ದಿ. ಯಲ್ಲಪ್ಪ ಮತ್ತು ಮಲ್ಲವ್ವ ಸಿದ್ನಾಳ ಸ್ಮರಣಾರ್ಥ ದತ್ತಿ, ಧಾರವಾಡ
೨೫,೦೦೦-೦೦

೦೩. ಡಾ. ಬಿ.ಎಸ್. ತುಳಪುಳೆ ದತ್ತಿ, ದಕ್ಷಿಣ ಕನ್ನಡ ಜಿಲ್ಲೆ
೫೦,೦೦೦-೦೦

೦೪. ಲಿಂ. ಶ್ರೀಮತಿ ನೀಲವತ್ತಿ ಲಿಂ. ಶ್ರೀ ಬಿ. ಬಸವಲಿಂಗಯ್ಯ

ನ್ಯಾಯವಾದಿಗಳ ಬಿಸಲೇಹಳ್ಳಿ ದತ್ತಿ ಚಿಕ್ಕಮಗಳೂರು

೧೫,೦೦೦-೦೦

೦೫. ದಿ. ಯಲ್ಲಮ್ಮಗೌಡ ಪರಸಪ್ಪ ಪಂಚಮ್ ದತ್ತಿ, ಕೊಪ್ಪಳ

೨೫,೦೦೦-೦೦

೦೬. ಶ್ರೀಮತಿ ಗಂಗಮ್ಮ ಶ್ರೀ ಬಿ. ಶಿವಣ್ಣ ದತ್ತಿ, ಬೆಂಗಳೂರು

೧,೦೦,೦೦೦-೦೦

೦೭. ದೋತ್ರ ಖಂಡಿ ನಾಗಮ್ಮ ಬೆನಕಪ್ಪ ಇವರ ಸ್ಮಾರಕ ದತ್ತಿ ಉಪನ್ಯಾಸ

ರಾಯಚೂರು ೧೫,೦೦೦-೦೦

೦೮. ಹನುಮಂತಪ್ಪ ಮಲ್ಲಪ್ಪ ದೇವಗಿರಿ ದತ್ತಿ, ಗದಗ ೨೫,೦೦೦-೦೦

೦೯. ದಿ. ಶ್ರೀ ಅಂದಾನಪ್ಪ ತಂದೆ ಸಾಂತಪ್ಪ ಅಗಸಿ ಮುಂದಿನ ದತ್ತಿ, ಕೊಪ್ಪಳ

೨೫,೦೦೦-೦೦

೧೦. ಶ್ರೀ ಬಿ.ಸಿ. ಪಾಟೀಲ ದತ್ತಿ ಬೆಂಗಳೂರು ೨೫,೦೦೦-೦೦

೧೧. ಶ್ರೀಮತಿ ಶಾಂತಾದೇವಿ ಮಹಾಲಿಂಗಪ್ಪಾ ಬಣಕಾರ ದತ್ತಿ, ಬೆಳಗಾವಿ

೫೦,೦೦೦-೦೦

೧೨. ಶ್ರೀ ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿ ಬೆಂಗಳೂರು ೨,೫೦,೦೦೦-೦೦

೧೩. ಎಸ್. ಎಸ್. ವಿದ್ವಾನ್ ಮತ್ತು ಎಸ್. ಗುರುಕುಮಾರ್ ದತ್ತಿ ಧಾರವಾಡ

೨೫,೦೦೦-೦೦

೧೪. ಪ್ರೊ ಸಿ.ಎಚ್. ಮರಿದೇವರು ಪ್ರತಿಷ್ಠಾನ ದತ್ತಿ, ತುಮಕೂರು ೨೦,೦೦,೦೦೦-೦೦

೧೫. ದಿ. ಮಲ್ಲೇಶಪ್ಪ ಅಶೋಕ ಕುಮಾರ ಗಂಜ್ಯಾಳ ದತ್ತಿ, ವಿಜಯಪುರ ೧೫,೦೦೦-೦೦

೧೬. ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆ ಕನ್ನಡ ಸಂಘ ಬೆಂಗಳೂರು

೫೦,೦೦೦-೦೦

೧೭. ಶ್ರೀಮತಿ ಮಲ್ಲಮ್ಮ ಗದಿಗೆಪ್ಪ ಮೂಲಿಮನಿ ದತ್ತಿ, ಧಾರವಾಡ ೨೫,೦೦೦-೦೦

೧೮. ರೋಟರಿ ಕ್ಲಬ್ ಕಡೂರು ರೋಟರಿ ಜಿಲ್ಲಾ ೩೧೮೨ ದತ್ತಿ ಚಿಕ್ಕಮಗಳೂರು

೨೫,೦೦೦-೦೦

೧೯. ಪೂಜ್ಯಶ್ರೀ ಮ.ನಿ.ಪ್ರ ವಿರಕ್ತ ಮಹಾಸ್ವಾಮಿಗಳ ಖಾಸ್ಗತೇಶ್ವರ ಮಠ

ವಿಜಯಪುರ ೧೫,೦೦೦-೦೦

೨೦. ದಿ. ಶ್ರೀ ಗಂಗಣ್ಣ ಶಿದ್ದಣ್ಣ ಕೋಳೂರ ದತ್ತಿ, ವಿಜಯಪುರ

೧೫,೦೦೦-೦೦

೨೧. ಕು. ಸ್ಮಿತಾ ಸಂಗನಗೌಡ ಪಾಟೀಲ ದತ್ತಿ, ವಿಜಯಪುರ ೧೫,೦೦೦-೦೦

೨೨. ಕಾಶಿರಾಯ ಈರಪ್ಪ ಮಣೂರ ದತ್ತಿ, ವಿಜಯಪುರ

೧೫,೦೦೦-೦೦

೨೩. ಚಂದಪ್ಪ ರಾಮಲಿಂಗಪ್ಪ ದೇಸಾಯಿ ದತ್ತಿ, ವಿಜಯಪುರ

೧೫,೦೦೦-೦೦

೨೪. ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ, ಬೆಂಗಳೂರು

೩೦೦,೦೦೦-೦೦

೨೫. ಭೂಪಾಳಂ ಆರ್. ಚಂದ್ರಶೇಖರಯ್ಯ ದತ್ತಿ, ಬೆಂಗಳೂರು

೧,೦೦,೦೦೦-೦೦

೨೬. ಶ್ರೀ ರಾಹುಲ್ ರಾಜಶೇಖರಯ್ಯ ದತ್ತಿ, ಹಾವೇರಿ

೨೫,೦೦೦-೦೦

೨೭. ಶ್ರೀಮತಿ ಕೆಂಚಮ್ಮ ಮತ್ತು ಶ್ರೀಗೌಡರ ಹನುಮಂತಪ್ಪ ಕುಂದೂರು ದತ್ತಿ,

ದಾವಣಗೆರೆ ೧೫,೦೦೦-೦೦

೨೮. ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಮರಿಲಿಂಗಪ್ಪ ದೊಡ್ಡಮನೇರ ದತ್ತಿ,

ದಾವಣಗೆರೆ ೧೦,೦೦೧-೦೦

೨೯. ಅಭಿನಯ ಭಾರತಿ (ರಿ.) ದತ್ತಿನಿಧಿ, ಧಾರವಾಡ ೨೫,೦೦೦-೦೦

೩೦. ಶ್ರೀ ಡಿ.ಎಸ್. ಕೃಷ್ಣಪ್ಪಗೌಡ ಸ್ಮಾರಕ ದತ್ತಿ, ಚಿಕ್ಕಮಗಳೂರು ೨೫,೦೦೦-೦೦

೩೧. ಶ್ರೀ ಹಳಸೇ ಬೈರೇಗೌಡ ಸ್ಮಾರಕ ದತ್ತಿ, ಚಿಕ್ಕಮಗಳೂರು ೨೫,೦೦೦-೦೦

೩೧. ಕೊಡಗನೂರು ಶ್ರೀಮತಿ ಸಾವಿತ್ರಮ್ಮ ಮತ್ತು ಶ್ರೀ ಅಂಗಡಿ
ನಂಜುಂಡಪ್ಪ ಸ್ಮರಣಾರ್ಥ ದತ್ತಿ, ದಾವಣಗೆರೆ ೧೫,೦೦೦-೦೦

೩೩ ದಾವಣಗೆರೆ ತಾಲ್ಲೂಕು ೭ನೇ ಕ.ಸಾ. ಸಮ್ಮೇಳನ ಹದಡಿ ೨೦೧೭ರ
ಸವಿ ನೆನಪಿನ ದತ್ತಿ, ದಾವಣಗೆರೆ ೧೫,೦೦೦-೦೦

೩೪. ಕೊಡಗನೂರು ಶ್ರೀ ಎಸ್. ಚನ್ನವೀರಪ್ಪ ಮಾಸ್ಟರ್ ಶ್ರೀಮತಿ ಎಸ್.
ವೀರಮ್ಮ ಸ್ಮರಣಾರ್ಥ ದತ್ತಿ, ದಾವಣಗೆರೆ ೧೫,೦೦೦-೦೦

ಒಟ್ಟು ೩೫,೧೫,೦೦೧-೦೦

- **"ಸರ್ವೋಚ್ಚ ನ್ಯಾಯಾಲಯ ನೀಡಿರುವ ಶಿಕ್ಷಣ ಮಾಧ್ಯಮ ತೀರ್ಪಿನ" ಬಗ್ಗೆ ಮುಂದೆ ಕೈಗೊಳ್ಳಬೇಕಾದ ಕ್ರಮದ ಕುರಿತು ತಜ್ಞರ ಸಭೆ ಆಯೋಜನೆ.**

ಶಿಕ್ಷಣ ಮಾಧ್ಯಮ ಕುರಿತಾಗಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಬಗ್ಗೆ ಮುಂದೆ ಕೈಗೊಳ್ಳಬೇಕಾದ ಕ್ರಮದ ಕುರಿತು ನ್ಯಾಯ ಶಾಸ್ತ್ರಜ್ಞರ, ಶಿಕ್ಷಣ ತಜ್ಞರ, ಪರಿಷತ್ತಿನ ಹಿಂದಿನ ಅಧ್ಯಕ್ಷರುಗಳ, ಸಾಹಿತ್ಯ ಸಮ್ಮೇಳನಾಧ್ಯಕ್ಷರುಗಳ, ಗಣ್ಯ ಸಾಹಿತಿಗಳ, ಅಕಾಡೆಮಿ/ ಪ್ರಾಧಿಕಾರಗಳ ಅಧ್ಯಕ್ಷರುಗಳ, ಕನ್ನಡಪರ ಹೋರಾಟಗಾರರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಲಹೆ ಸೂಚನೆಗಳನ್ನು ಪಡೆಯಲು ದಿನಾಂಕ ೧೫-೦೬-೨೦೧೬ ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಮಾಜಿ ರಾಜ್ಯಪಾಲರು ಹಾಗೂ ನಿವೃತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾದ ನ್ಯಾ. ಎಂ. ರಾಮಾಜೋಯಿಸ್, ನಿವೃತ್ತ ಹೈಕೋರ್ಟ್‌ನ ನ್ಯಾಯಮೂರ್ತಿಗಳಾದ ನ್ಯಾ. ನಾಗಮೋಹನದಾಸ್, ನ್ಯಾ. ಎ.ಜೆ. ಸದಾಶಿವ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರುಗಳಾದ ಪ್ರೊ ಜಿ.ಎಸ್. ಸಿದ್ದಲಿಂಗಯ್ಯ, ಪ್ರೊ. ಚಂದ್ರಶೇಖರ ಪಾಟೀಲ, ಮಾಜಿ ಮಂತ್ರಿಗಳಾದ ಡಾ. ಲೀಲಾದೇವಿ ಆರ್. ಪ್ರಸಾದ್, ಡಾ. ಬಿ.ಟಿ. ಲಲಿತಾ ನಾಯಕ್, ಶ್ರೀ ಪಿ.ಜಿ.ಆರ್. ಸಿಂಧ್ಯ, ಹಿರಿಯ ಪತ್ರಕರ್ತರಾದ ಶ್ರೀ ಶೈಲೇಶ್‌ಚಂದ್ರ ಗುಪ್ತ, ಕನ್ನಡ ಅಭಿವೃದ್ಧಿ

ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಮುಖ್ಯಮಂತ್ರಿ ಚಂದ್ರು, ಸಾಹಿತಿಗಳಾದ ಪ್ರೊ. ಎಂ.ಹೆಚ್. ಕೃಷ್ಣಯ್ಯ, ಡಾ. ದೊಡ್ಡರಂಗೇಗೌಡ, ಡಾ. ಪಿ.ವಿ. ನಾರಾಯಣ, ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ, ಡಾ. ಸಿದ್ದಲಿಂಗಯ್ಯ, ಡಾ. ಎಲ್. ಹನುಮಂತಯ್ಯ, ಡಾ. ಕುಂ. ವೀರಭದ್ರಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಮಲ್ಲಿಕಾ ಘಂಟಿ, ಉಪನ್ಯಾಸಕರಾದ ಪ್ರೊ. ಅಬ್ದುಲ್ ರೆಹಮಾನ್ ಪಾಷ, ಹಿರಿಯ ಸಂಶೋಧಕರಾದ ಡಾ. ಎಂ. ಚಿದಾನಂದ ಮೂರ್ತಿ, ನ್ಯಾಯವಾದಿಗಳಾದ ಶ್ರೀಮತಿ ಹೇಮಲತಾ ಮಹಿಷಿ, ಕನ್ನಡಪರ ಹೋರಾಟಗಾರರಾದ ಶ್ರೀ ರಾಮಣ್ಣ ಕೋಡಿಹೊಸಹಳ್ಳಿ, ಶ್ರೀ ಗುರುದೇವ ನಾರಾಯಣಕುಮಾರ್, ಶಿಕ್ಷಣ ತಜ್ಞರಾದ ಡಾ. ಪಿ.ವಿ. ನಿರಂಜನಾರಾಧ್ಯ, ಶಿಕ್ಷಣ ಇಲಾಖೆಯ ನಿವೃತ್ತ ಆಯುಕ್ತರಾದ ಶ್ರೀ ವೆಂಕಟೇಶ ಮಾಚಕನೂರ, ಸಿ.ಪಿ.ಐ. ಪ್ರಧಾನ ಕಾರ್ಯದರ್ಶಿ ಡಾ. ಸಿದ್ಧನಗೌಡ ಪಾಟೀಲ - ಇವರುಗಳು ಸಭೆಯಲ್ಲಿ ಹಾಜರಿದ್ದರು. "ಸರ್ವೋಚ್ಚ ನ್ಯಾಯಾಲಯ ನೀಡಿರುವ ಶಿಕ್ಷಣ ಮಾಧ್ಯಮ ತೀರ್ಪಿನ" ಬಗ್ಗೆ ಮುಂದೆ ಕೈಗೊಳ್ಳಬೇಕಾದ ಕ್ರಮದ ಕುರಿತು ಸಭೆ ಈ ಕೆಳಕಂಡಂತೆ ಪ್ರಮುಖ ನಿರ್ಣಯಗಳನ್ನು ಕೈಗೊಂಡಿತು. ಅದರಂತೆ ಕೆಲವು ನಿರ್ಣಯಗಳು ಈಗಾಗಲೇ ಪ್ರಗತಿಯಲ್ಲಿವೆ. ಮಾಹಿತಿ ಈ ಕೆಳಕಂಡಂತಿದೆ -

೧) ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಹೆಚ್ಚು ನ್ಯಾಯಾಧೀಶರಿರುವ ಬೆಂಚಿಗೆ ಈ ಪ್ರಕರಣ ಕುರಿತು ಪುನರ್‌ಪರಿಶೀಲನೆಗೆ ಒತ್ತಾಯಿಸುವುದು.

೨) ಮಾನ್ಯ ಪ್ರಧಾನ ಮಂತ್ರಿಗಳು, ಕೇಂದ್ರ ಸಚಿವರು, ಸಂಸದರು ಹಾಗೂ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಈ ವಿಷಯ ಕುರಿತು ಒತ್ತಡ ಹೇರುವುದು.

೩) ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಹಿಂದೆ ದೆಹಲಿಗೆ ನಿಯೋಗವನ್ನು ತೆಗೆದುಕೊಂಡು ಹೋದಂತೆ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಒಂದು ನಿಯೋಗ ರಚಿಸಿ, ಆ ತಜ್ಞರ ನಿಯೋಗವನ್ನು ಪುನಃ ದೆಹಲಿಗೆ ತೆಗೆದುಕೊಂಡು ಹೋಗುವುದು.

**ಪ್ರಗತಿ** : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಬರೆದಿದ್ದು, ಕಾರ್ಯ ಪ್ರಗತಿಯಲ್ಲಿದೆ.

೪) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೇಲೆ ಒತ್ತಡ - ತರಲು ಜನಾಂದೋಲನ ಮಾಡುವ ಬಗ್ಗೆ ಪರಿಷತ್ತಿನಲ್ಲಿ ತೀರ್ಮಾನ ಕೈಗೊಳ್ಳಬೇಕು.

೫) ಗುಣಾತ್ಮಕ ಶಿಕ್ಷಣದ ಬಗ್ಗೆ, ಆರ್‌ಟಿಇ ಕಾಯ್ದೆ ತಿದ್ದುಪಡಿ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಯತ್ನ ಮಾಡಬೇಕು.

**ಪ್ರಗತಿ :** ಈ ಕುರಿತು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಶಿಕ್ಷಣ ಮಂತ್ರಿಗಳಿಗೆ ಪತ್ರ ಬರೆದಿದ್ದು, ಈ ಕಾರ್ಯವು ಸಹ ಪ್ರಗತಿಯಲ್ಲಿದೆ.

೬) ಇಂದಿನ ಸಭೆಯ ಮಾದರಿಯಲ್ಲಿ ಬೇರೆ ಬೇರೆ ರಾಜ್ಯಗಳ ಸಂಘ-ಸಂಸ್ಥೆಗಳ ಪ್ರತಿನಿಧಿಗಳನ್ನು ಇಲ್ಲಿಗೆ ಕರೆದು ಸಭೆಗಳನ್ನು ನಡೆಸಬೇಕು.

೭) ಮಾತೃಭಾಷೆ, ರಾಜ್ಯಭಾಷೆ, ನಾಡಭಾಷೆ ಬಗ್ಗೆ ಡಾ. ವಿ.ಪಿ. ನಿರಂಜನಾರಾಧ್ಯ ಅವರು ನೀಡಿರುವ ಕರಡನ್ನು ಸಂಬಂಧಪಟ್ಟ ಇಲಾಖೆಗೆ ನೀಡಿ ಸೂಕ್ತ ಕ್ರಮಕೈಗೊಳ್ಳುವಂತೆ ಕೋರುವುದು.

೮) ೨೦೧೭ ಜುಲೈ ೪ರಂದು ನಡೆಯುವ ವಿಧಾನ ಮಂಡಲ ಅಧಿವೇಶನದಲ್ಲಿ ವಿಧಾನ ಪರಿಷತ್ತಿನ ಸಭಾಪತಿಗಳಿಗೆ, ವಿಧಾನಸಭೆಯ ಅಧ್ಯಕ್ಷರಿಗೆ ಕನ್ನಡ ಸಾಹಿತ್ಯ ಪರಿಷತಿನ ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ನೀಡಿ ಶಾಸನ ಸಭೆ / ಅಧಿವೇಶನಗಳಲ್ಲಿ ಮಂಡಿಸುವಂತೆ ಕೋರಬೇಕು.

೯) ಅನ್ನದಭಾಷೆಯಾಗಿ ಕನ್ನಡ - ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು,

**ಪ್ರಗತಿ** : ನಿರ್ಣಯ ೭, ೮, ೯ ಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದು, ಇದರನ್ವಯ ಫಲಿತಾಂಶ ಹೊರಬಿದ್ದಿದೆ. (ಹೆಚ್ಚಿನ ಮಾಹಿತಿಗೆ ಪುಟ ೬೪ ಸರಕಾರದ ಸ್ಪಂದನ ಭಾಗವನ್ನು ನೋಡಬಹುದು).

೧೦) ಕನ್ನಡ ಶಾಲೆಗಳಲ್ಲಿ ಇಂಗ್ಲಿಷ್, ಇಂಗ್ಲಿಷ್ ಶಾಲೆಗಳಲ್ಲಿ ಕನ್ನಡ ಭಾಷೆ ಕಡ್ಡಾಯದ ಬಗ್ಗೆ ಕ್ರಮಕೈಗೊಳ್ಳುವಂತೆ ಸರ್ಕಾರಕ್ಕೆ ಒತ್ತಡ ಹೇರುವುದು.

೧೧) ಸಂವಿಧಾನದ ತಿದ್ದುಪಡಿಯ ಸಂಬಂಧ ರಾಜ್ಯದ ಎಲ್ಲಾ ಸಂಸದರ ಸಭೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕರೆಯುವುದು.

೧೨) ಕನ್ನಡ ಶಾಲೆಗಳನ್ನು ವಿಲೀನಗೊಳಿಸದಂತೆ ಹಾಗೂ ಅಲ್ಲಿಯ ಶಾಲಾ ಶಿಕ್ಷಕರನ್ನು ವರ್ಗಾವಣೆ ಮಾಡದಂತೆ ಸರ್ಕಾರಕ್ಕೆ ಮನವಿ ಸಲ್ಲಿಸುವುದು.

ಮೇಲ್ಕಂಡ ನಿರ್ಣಯಗಳ ಅನುಷ್ಠಾನ ಸಂಬಂಧ ಕನ್ನಡ ಶಿಕ್ಷಣ ಮಾಧ್ಯಮ ಕುರಿತು ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ವಿವರವಾದ ಚರ್ಚೆಗೆ ಅವಕಾಶ

ಕಲ್ಪಿಸಿಕೊಟ್ಟು, ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಲು ಸಂವಿಧಾನ ತಿದ್ದುಪಡಿಗೆ ಮತ್ತೊಮ್ಮೆ ಒತ್ತಾಯಿಸಿ ಸರ್ವಾನುಮತದ ನಿರ್ಣಯ ಅಂಗೀಕರಿಸಿ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಡಬೇಕೆಂದು ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷರಿಗೆ ಹಾಗೂ ಸಭಾಪತಿಗಳಿಗೆ ದಿನಾಂಕ ೧೮-೦೭-೨೦೧೯ ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಖುದ್ದು ಭೇಟಿ ಮಾಡಿ ಮನವಿ ಸಲ್ಲಿಸಿದರು. ಇದಲ್ಲದೆ ಈ ಎಲ್ಲಾ ಅಂಶಗಳ ಅನುಷ್ಠಾನಕ್ಕಾಗಿ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷರಾದ ಡಾ. ಜಿ.ಪರಮೇಶ್ವರ್, ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಬಿ.ಎಸ್. ಯಡಿಯೂರಪ್ಪ ಹಾಗೂ ಜನತಾದಳ (ಜಾತ್ಯತೀತ) ಪಕ್ಷದ ರಾಷ್ಟ್ರಾಧ್ಯಕ್ಷರಾದ ಶ್ರೀ ಹೆಚ್.ಡಿ. ದೇವೇಗೌಡ ಅವರುಗಳನ್ನು ಭೇಟಿ ಮಾಡಿ ಮನವಿ ಮಾಡಿಕೊಳ್ಳಲಾಗಿದೆ.

- **೨೦೧೯ರ ಅಕ್ಟೋಬರ್ ೮ ಹಾಗೂ ೯ ರಂದು ದೆಹಲಿಯಲ್ಲಿ ಹೊರನಾಡ ಕನ್ನಡಿಗರ ಪ್ರಥಮ ರಾಷ್ಟ್ರೀಯ ಸಮಾವೇಶವನ್ನು ಯಶಸ್ವಿಯಾಗಿ ಆಚರಿಸಲಾಯಿತು.**

ಕನ್ನಡ ಸಾಹಿತ್ಯ ಪರಿಷತ್ತು ತನ್ನ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ದೆಹಲಿಯಲ್ಲಿ ೨೦೧೯ರ ಅಕ್ಟೋಬರ್ ೮ ಹಾಗೂ ೯ ರಂದು "ಹೊರನಾಡ ಕನ್ನಡಿಗರ ಪ್ರಥಮ ರಾಷ್ಟ್ರೀಯ ಸಮಾವೇಶ"ವನ್ನು ಹಮ್ಮಿಕೊಂಡಿತ್ತು. ದೆಹಲಿ ಕರ್ನಾಟಕ ಸಂಘ ಹಾಗೂ ಮಧ್ಯಪ್ರದೇಶದ ಅಮರಕಂಟಕದಲ್ಲಿರುವ ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಸಹಯೋಗ-ಸಹಕಾರದೊಂದಿಗೆ ಈ ಸಮಾವೇಶವನ್ನು ನಡೆಸಲಾಯಿತು. ಮಧ್ಯಪ್ರದೇಶದ ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿಗಳಾದ **ಡಾ. ತೇಜಸ್ವಿ ಕಟ್ಟಿಮನಿ**ಯವರ ಸಹಕಾರ ಮರೆಯುವಂತಿಲ್ಲ. ಈ ಸಮಾವೇಶದ ಆಶಯವೆಂದರೆ ಕರ್ನಾಟಕದಾಚೆಗಿನ ಕನ್ನಡಿಗರೊಂದಿಗೆ ಮುಖಾಮುಖಿಯಾಗುವುದು, ಅವರ ಅಸ್ಮಿತೆ ಕುರಿತು ಚರ್ಚೆ, ಆ ಜನರು ತಮ್ಮ ತಮ್ಮ ರಾಜ್ಯಗಳಲ್ಲಿ ಸಾಮರಸ್ಯದೊಂದಿಗೆ ಇತರರೊಂದಿಗೆ ಬದುಕುವ ಬಗೆ - ಇವೇ ಮುಂತಾದ ವಿಚಾರಗಳ ಕುರಿತು ಚಿಂತನ-ಮಂಥನ ಮಾಡುವುದಾಗಿದೆ. ಹಲವಾರು ವೈವಿಧ್ಯಮಯ ಹಾಗೂ ವಿಚಾರಪೂರಿತ ಗೋಷ್ಠಿಗಳನ್ನು ನಡೆಸಿ ಅವುಗಳಿಂದಾಗುವ ಉತ್ತಮ ಫಲಿತಾಂಶವನ್ನು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಗಮನಕ್ಕೆ ತಂದುಕೊಂಡು ಎಲ್ಲಾ ಕನ್ನಡಿಗರನ್ನೂ ಭಾವನಾತ್ಮಕವಾಗಿ

ಒಂದುಮಾಡುವತ್ತ ದಿಟ್ಟ ಹೆಜ್ಜೆ ಇಡಬಯಸುತ್ತದೆ. ಈ ನಿಟ್ಟಿನಲ್ಲಿ ಕನ್ನಡಿಗರೆಲ್ಲರ ಆಸೆ ಆಶಯಗಳಿಗೆ ಅನುಗುಣವಾಗಿ ಗುಣಾತ್ಮಕವಾಗಿ ಕಾರ್ಯನಿರ್ವಹಿಸಲು ಬದ್ಧವಾಗಿದೆ.

ಸಮಾವೇಶದಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಗಡಿ ಸಮಸ್ಯೆ, ಹೊರನಾಡ ಕನ್ನಡಿಗರ ಸಮಸ್ಯೆ, ಶಿಕ್ಷಣ ಮಾಧ್ಯಮ ಕುರಿತಾಗಿ ಕೇಂದ್ರ ಸರ್ಕಾರದ ಗಮನ ಸೆಳೆಯುವಂತಹ ಪ್ರಮುಖ ವಿಷಯಗಳನ್ನು ಕುರಿತು ವಿದ್ವತ್ಪೂರ್ಣ ವಿಚಾರ ಸಂಕಿರಣಗಳನ್ನು ನಡೆಸಲಾಯಿತು. ಇದರೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಸಹ ಹಮ್ಮಿಕೊಂಡಿತ್ತು. ಭಾರತದ ಬೇರೆ ಬೇರೆ ರಾಜ್ಯಗಳಿಂದ ಸುಮಾರು ೩೦೦ ಮಂದಿ ಪ್ರತಿನಿಧಿಗಳು, ಗಣ್ಯರು, ಉಪನ್ಯಾಸ ನೀಡಲು ವಿದ್ವಾಂಸರು, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಹಾಗೂ ೪ ಗಡಿನಾಡ ಘಟಕಗಳಿಂದ ಚುನಾಯಿತರಾದ ಕಾರ್ಯಕಾರಿ ಸಮಿತಿ ಸದಸ್ಯರು, ದೆಹಲಿಯ ಸ್ಥಳೀಯ ಕನ್ನಡಿಗರೂ ಸೇರಿದಂತೆ ಒಟ್ಟು ೬೦೦-೭೦೦ ಮಂದಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ದೆಹಲಿಯ ಹೊರನಾಡ ಕನ್ನಡಿಗರ ಪ್ರಥಮ ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಿದ ರಾಜ್ಯದ ೩೦ಕ್ಕೂ ಹೆಚ್ಚು ಸಾಹಿತಿ-ಕಲಾವಿದರಿಗೆ ಮೊದಲ ಬಾರಿಗೆ '**ರಾಜ್ಯ ಅತಿಥಿ'** ಎಂದು ಪರಿಗಣಿಸಿ ಆತಿಥ್ಯ ಕಲ್ಪಿಸಲಾಗಿತ್ತು. 'ರಾಜ್ಯ ಅತಿಥಿ' ಎಂದು ಪರಿಗಣಿಸಿ ವಿಶೇಷ ಆತಿಥ್ಯ ಕಲ್ಪಿಸುವಲ್ಲಿ ರಾಜ್ಯ ಸರಕಾರದ ದೆಹಲಿ ಪ್ರತಿನಿಧಿ ಶ್ರೀ ಸಿ.ಎಸ್. (ಅಪ್ಪಾಜಿ) ನಾಡಗೌಡರ ಪಾತ್ರ ಸ್ತುತ್ಯಾರ್ಹವಾದುದು.

ಈ ಸಮಾವೇಶದ ಉದ್ಘಾಟನೆಯನ್ನು ಕೇಂದ್ರ ಸಚಿವರಾದ **ಶ್ರೀ ಅನಂತಕುಮಾರ್** ಅವರು ನೆರವೇರಿಸಿಕೊಟ್ಟರು. ಮುಖ್ಯ ಅತಿಥಿಯಾಗಿ ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿಯಾದ ಶ್ರೀ ಸಿ.ಎಸ್. (ಅಪ್ಪಾಜಿ) ನಾಡಗೌಡ ಅವರು ಭಾಗವಹಿಸಿದ್ದರು.

ಈ ಸಮಾವೇಶದಲ್ಲಿ ವಿದ್ವತ್‌ಪೂರ್ಣ ಹಾಗೂ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂಥ ವಿಷಯಗಳ ಮೇಲೆ ಪ್ರಸಿದ್ಧ ವಿದ್ವಾಂಸರಿಂದ ವಿಷಯ ಮಂಡನೆ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಗಡಿ ವಿಷಯಕ್ಕೆ ಸಂಬಂಧಪಟ್ಟಂತೆ **ಭಾಷಾವಾರು ಪ್ರಾಂತ ರಚನೆ : ಕರ್ನಾಟಕ ಗಡಿ ಪ್ರದೇಶಗಳ ಸ್ಥಿತಿಗತಿ, ಶಿಕ್ಷಣ ಮಾಧ್ಯಮ ಮತ್ತು ನ್ಯಾಯಾಲಯದ ತೀರ್ಪುಗಳು** ಕುರಿತಾಗಿ ಗೋಷ್ಠಿ, ಕರ್ನಾಟಕ ನೀರಾವರಿ ಸಮಸ್ಯೆಗಳು-ಮಾರ್ಗೋಪಾಯಗಳು ವಿಷಯ ಕುರಿತು ವಿಶೇಷ ಉಪನ್ಯಾಸ, ಹೊರನಾಡ ಕನ್ನಡಿಗರ ಸಮಸ್ಯೆಗಳು ಕುರಿತಾಗಿ ಗೋಷ್ಠಿ, ರಾಷ್ಟ್ರೀಯ

ಉದ್ಯೋಗ ನೀತಿ ವಿಷಯದಡಿ ಉದ್ಯೋಗ ಅವಕಾಶಗಳು, ನಿರುದ್ಯೋಗ ಸಮಸ್ಯೆ ಕುರಿತು ವಿಷಯ ಮಂಡನೆ, **ವರ್ತಮಾನದ ತಲ್ಲಣಗಳು** ಕುರಿತು ಗೋಷ್ಠಿಗಳನ್ನು ಆಯೋಜಿಸಲಾಗಿತ್ತು.

ಈ ಮೇಲ್ಕಂಡ ಐದು ವಿದ್ವತ್ಪೂರ್ಣ ಪ್ರಬಂಧ ಮಂಡನೆಗಳ ಗೋಷ್ಠಿಗಳೊಂದಿಗೆ ನಾಡಿನ, ಹೊರನಾಡಿನ ಪ್ರಸಿದ್ಧ ಕವಿಗಳಿಂದ ಕವಿಗೋಷ್ಠಿಯನ್ನು ಏರ್ಪಡಿಸಿ, ಕಾವ್ಯಾಸಕ್ತರ ಮೆಚ್ಚುಗೆಯನ್ನು ಪಡೆಯಲಾಯಿತು.

ಎರಡು ದಿನಗಳ ಕಾಲ ಅರ್ಥಪೂರ್ಣವಾಗಿ ಆಯೋಜಿಸಿದ್ದ ಸಮಾವೇಶದ ಅಂತಿಮ ಘಟ್ಟ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಸರಕಾರದ ಮಾನ್ಯ ರಾಜ್ಯಖಾತೆ ಸಚಿವರಾದ **ಶ್ರೀ ರಮೇಶ ಜಿಗಜಿಣಗಿ** ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಖ್ಯಾತ ಸಾಹಿತಿಗಳು ಹಾಗೂ ಚಿಂತಕರಾದ **ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ** ಅವರು ಸಮಾರೋಪ ನುಡಿಗಳನ್ನಾಡಿದರು. ಈ ಎರಡು ದಿನದ ಕಾರ್ಯಕ್ರಮದ ಅಧ್ಯಕ್ಷತೆಯನ್ನು **ಡಾ. ಮನು ಬಳಿಗಾರ್** ಅವರು ವಹಿಸಿಕೊಂಡು ಅತ್ಯಂತ ಅರ್ಥಪೂರ್ಣವಾಗಿ ಸಮಾವೇಶ ಜರುಗುವಲ್ಲಿ ಪ್ರಮುಖ ಪಾತ್ರವಹಿಸಿದರು. ಈ ಸಮಾವೇಶದಲ್ಲಿ ಮಂಡಿಸಿರುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ತಂದು ಕನ್ನಡಿಗರಿಗೆ ತಲುಪಿಸುವ ಕೆಲಸವನ್ನು ಪರಿಷತ್ತು ಈಗಾಗಲೇ ಮಾಡಿದ್ದು, **ಮಂಡಿತವಾದ ಪ್ರಬಂಧಗಳ ಸಂಕಲನ 'ಸಮಾಲೋಕ' ಗ್ರಂಥ ಇದೀಗ ಮೈಸೂರಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ** ಬಿಡುಗಡೆಗೊಳ್ಳಲಿದೆ.

ಕನ್ನಡ ಸಾಹಿತ್ಯ ಪರಿಷತ್ತು ಫೆಬ್ರವರಿ ೧೦, ೧೧, ೨೦೧೮ ರಂದು ಮುಂಬೈನಲ್ಲಿ ಎರಡು ದಿನಗಳ ಕಾಲ ಹೊರನಾಡು ಕನ್ನಡಿಗರ ಸಾಹಿತ್ಯ ಸಮಾವೇಶವನ್ನು ಆಯೋಜಿಸಲು ಸಿದ್ಧತೆ ನಡೆಸಿದೆ.

ಈ ಸಮಾವೇಶದಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಗಡಿ ಸಮಸ್ಯೆ, ಗಡಿನಾಡ ಮತ್ತು ಹೊರನಾಡ ಕನ್ನಡಿಗರ ಸಮಸ್ಯೆ, ಶಿಕ್ಷಣ ಮಾಧ್ಯಮ ಇತ್ಯಾದಿ ಗಮನ ಸೆಳೆಯುವಂತಹ ಪ್ರಮುಖ ವಿಷಯಗಳ ಕುರಿತು ವಿದ್ವತ್ಪೂರ್ಣ ವಿಚಾರ ಸಂಕಿರಣಗಳನ್ನು ನಡೆಸಲಾಗುವುದು. ಇದರೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಸಹ ನಡೆಸಲಾಗುತ್ತದೆ. ಸಮಾವೇಶದಲ್ಲಿ ಆಯ್ದ ಸುಮಾರು ೫೦೦ ರಿಂದ ೬೦೦ ಮಂದಿ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ.

♦ **ಗಡಿನಾಡ ಸಾಹಿತ್ಯ ಸಮಾವೇಶಗಳ ಆಯೋಜನೆ**

ಈ ಯೋಜನೆಯಡಿ ಈಗಾಗಲೇ ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ರಾಜ್ಯಮಟ್ಟದ ಪ್ರಥಮ ಸಾಹಿತ್ಯ ಸಮಾವೇಶವನ್ನು ಜುಲೈ ೮, ೯-೨೦೧೭ರಂದು ಯಶಸ್ವಿಯಾಗಿ ನಡೆಸಲಾಗಿದೆ. ಹಾಗೆಯೇ ತಮಿಳುನಾಡಿನ ಚೆನ್ನೈ, ಕೇರಳದ ಕಾಸರಗೋಡುಗಳಲ್ಲಿಯೂ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿವೆ

♦ **ಸಹಕಾರ ಮತ್ತು ಕೃಷಿ ವಿಷಯದ ಕುರಿತು ರಾಜ್ಯದಾದ್ಯಂತ ಕಾರ್ಯಕ್ರಮ ಆಯೋಜನೆ.**

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ಸಹಯೋಗದಲ್ಲಿ ರಾಜ್ಯದಾದ್ಯಂತ ಆಯ್ದ ೧೦ ಜಿಲ್ಲೆಗಳು ಮತ್ತು ರಾಜ್ಯಮಟ್ಟದಲ್ಲಿ ಒಂದು ಕಡೆ - ಹೀಗೆ ಒಟ್ಟು ೧೧ ಕಡೆ ಕಾರ್ಯಕ್ರಮಗಳನ್ನು / ಸಾಹಿತ್ಯ ಸಮಾವೇಶಗಳನ್ನು, ಸಹಕಾರ, ಕೃಷಿ, ತೋಟಗಾರಿಕೆ, ನೀರಾವರಿ, ಬ್ಯಾಂಕಿಂಗ್, ಇತ್ಯಾದಿ... ವಿಷಯಗಳ ಸಾಹಿತ್ಯ ಕುರಿತು ಸಮಾವೇಶ ಆಯೋಜಿಸಿದೆ. ಈಗಾಗಲೇ ಈ ಸಮಾವೇಶಗಳನ್ನು ಚಿತ್ರದುರ್ಗ, ಬಳ್ಳಾರಿ, ಶಿಕಾರಿಪುರ, ಶಿಡ್ಲಘಟ್ಟ, ಬೀದರ್, ಕುಶಾಲನಗರ - ಇಲ್ಲಿ ಯಶಸ್ವಿಯಾಗಿ ಆಯೋಜಿಸಲಾಗಿದ್ದು. ಎಲ್ಲಾ ಕಡೆಯಿಂದ ಬಹಳ ಮೆಚ್ಚುಗೆ ವ್ಯಕ್ತವಾಗಿದೆ. ಇದೂ ಕೂಡ ಕಸಾಪದ ಇತಿಹಾಸದಲ್ಲಿ ಮೊದಲ ಪ್ರಯತ್ನವೆನಿಸಿದೆ.

♦ **ಸರ್ಕಾರಿ ಕನ್ನಡ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನುತೆರೆಯುವ ಬಗ್ಗೆ ಒತ್ತಾಯ**

ಸರ್ಕಾರಿ ಕನ್ನಡ ಶಾಲೆಗಳಲ್ಲಿ ಸದ್ಯ ೧ನೆಯ ತರಗತಿಗೆ ಸೇರಲು ಮಕ್ಕಳಿಗೆ ೫ ವರ್ಷ ೧೦ ತಿಂಗಳವರೆಗೂ ಕಾಯುವ ಸ್ಥಿತಿ ಇದೆ. ಆದರೆ ೧ ನೇ ವಯಸ್ಸಿನಿಂದ ೫ನೇ ವಯಸ್ಸಿನ ನಡುವೆ ಆಂಗ್ಲ ಮಾಧ್ಯಮದ ಎಲ್‌ಕೆಜಿ, ಯುಕೆಜಿಯಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಇದೆ. ಇದೇ ಮಾದರಿಯಲ್ಲಿ ಸರ್ಕಾರಿ ಕನ್ನಡ ಶಾಲೆಗಳಲ್ಲೂ ಕೂಡಾ ಕನ್ನಡ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆದರೆ ಕನ್ನಡ ಶಾಲೆಗಳನ್ನು ಮುಚ್ಚುವುದನ್ನು ತಡೆಯಬಹುದು. ಇದರ ಬಗ್ಗೆ ಕೂಡಲೇ ಪರಿಶೀಲಿಸಿ, ಪೂರ್ವ ಪ್ರಾಥಮಿಕ ಕನ್ನಡ ಶಾಲೆಗಳನ್ನು ತೆರೆಯಲು ಕ್ರಮಕೈಗೊಳ್ಳಬೇಕೆಂದು ಪ್ರಾಥಮಿಕ ಶಿಕ್ಷಣ

ಸಚಿವರಿಗೆ, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ, ಆಯುಕ್ತರಿಗೆ ಪತ್ರ ಬರೆದು ಒತ್ತಾಯಿಸಲಾಗಿದೆ.

- **ವಿಶ್ವನಾಥ ನಾಗೇನಹಳ್ಳಿಯ ಕನ್ನಡ ಕ್ರೈಸ್ತರ ದೇವಾಲಯ ಪ್ರವೇಶದ ಸಮಸ್ಯೆಯ ಪರಿಹಾರ**

ವಿಶ್ವನಾಥ ನಾಗೇನಹಳ್ಳಿಯ ಕನ್ನಡ ಕ್ರೈಸ್ತರ ದೇವಾಲಯ ಪ್ರವೇಶದ ಸಮಸ್ಯೆ ಕುರಿತಂತೆ ಸನ್ಮಾನ್ಯ ಶ್ರೀ ಹೆಚ್.ಎಸ್.ದೊರೆಸ್ವಾಮಿ ಅವರ ಜೊತೆಗೂಡಿ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಪರಿಹರಿಸುವಂತೆ ಮನವಿ ಸಲ್ಲಿಸಲಾಗಿತ್ತು. ನಮ್ಮ ಮನವಿಗೆ ಸ್ಪಂದಿಸಿದ ಸರ್ಕಾರ ಸಮಸ್ಯೆಯನ್ನು ಪರಿಹರಿಸಿತು.

- **"ಭಾರತವಾಣಿ" ಪೋರ್ಟಲ್‌ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ೧೫೦ಕ್ಕೂ ಹೆಚ್ಚು ಪ್ರಕಟಣೆಗಳನ್ನು ಪ್ರಕಟಿಸುವ ಯೋಜನೆಗೆ ಒಪ್ಪಂದ ಹಾಗೂ ಅನುಷ್ಠಾನ**

ಕೇಂದ್ರ ಸರ್ಕಾರ ಸ್ವಾಮ್ಯದ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನವು ಜ್ಞಾನ ಭಂಡಾರವನ್ನು ಬಹುಮಾಧ್ಯಮ ಸ್ವರೂಪಗಳಲ್ಲಿ 'ಭಾರತವಾಣಿ ಪೋರ್ಟಲ್' ಮೂಲಕ ಡಿಜಿಟಲೈಜೇಶನ್ ಮಾಡಿ ಎಲ್ಲರಿಗೂ ಅಂತರ್ಜಾಲ ತಾಣದಲ್ಲಿ ಸುಲಭವಾಗಿ ಸಿಗುವಂತೆ ಕಾರ್ಯ ನಿರ್ವಹಿಸುತ್ತಿದೆ. ಶಬ್ದಕೋಶ, ಜ್ಞಾನಕೋಶ ಹಾಗೂ ಭಾಷಾ ಕೋಶ - ಹೀಗೆ ಮೂರು ವಿಭಾಗಗಳಲ್ಲಿ ನಮ್ಮ ಕನ್ನಡ ಭಾಷೆಯಲ್ಲಿನ ವಿಷಯಗಳನ್ನು ಸೇರಿಸಿ ಎಲ್ಲ ಭಾಷೆಗಳಿಗೂ ಅದನ್ನು ಅನುವಾದ ಮಾಡಿಸಿ ಎಲ್ಲರಿಗೂ ತಿಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಮಹತ್ವದ ಯೋಜನೆಯಾಗಿದೆ. ಶ್ರೀ ಬೇಳೂರು ಸುದರ್ಶನ ಅವರ ನೇತೃತ್ವದ ಭಾರತವಾಣಿಯ ಪೋರ್ಟಲ್‌ನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಹಕ್ಕುಸ್ವಾಮ್ಯದಲ್ಲಿರುವ ಪ್ರಕಟಣೆಗಳನ್ನು ಪ್ರಕಟಿಸಲು ಒಪ್ಪಂದ ಮಾಡಿಕೊಳ್ಳಲಾಯಿತು. ಸಂಕ್ಷಿಪ್ತ ಕನ್ನಡ ನಿಘಂಟು ಹಾಗೂ ಇನ್ನಿತರೆ ಪರಿಷತ್ತಿನ ಪ್ರಕಟಣೆಗಳನ್ನು ನೀಡಲಾಗಿದ್ದು, ಕನ್ನಡ - ಕನ್ನಡ ನಿಘಂಟಿನ ಎಂಟು ಬೃಹತ್ ಸಂಪುಟಗಳು ಹಾಗೂ ೧೫೦ಕ್ಕೂ ಹೆಚ್ಚು ಪ್ರಮುಖ ಕೃತಿಗಳನ್ನು ಭಾರತವಾಣಿ ಪೋರ್ಟಲ್‌ನಲ್ಲಿ ಅಳವಡಿಸಲಾಗುತ್ತಿದೆ. ಇನ್ನಾರು ತಿಂಗಳಲ್ಲಿ ಈ ಕಾರ್ಯ ಪೂರ್ಣಗೊಳ್ಳಲಿದೆ. ಇಂತಹ ಮಹತ್ವಾಕಾಂಕ್ಷೆಯ ಕೆಲಸ ಆಗುತ್ತಿರುವುದು ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಇದೇ ಮೊದಲು. ವಿಶೇಷವೆಂದರೆ ಮೊಬೈಲ್‌ನಲ್ಲೂ ಇದರ ಉಪಯೋಗ ಪಡೆದು ಕೊಳ್ಳಬಹುದು.

♦ **ಕರ್ನಾಟಕ ಏಕೀಕರಣದ ೬೦ನೇ ವರ್ಷದ ಅಂಗವಾಗಿ ರಾಜ್ಯದಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುದಾನ ಬಿಡುಗಡೆ**

ಕರ್ನಾಟಕ ಏಕೀಕರಣವಾಗಿ ೬೦ ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಹಾಗೂ ಗಡಿನಾಡ ಘಟಕ ಕನ್ನಡ ಸಾಹಿತ್ಯ ಪರಿಷತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಗಿತ್ತು. ಈ ಕಾರ್ಯಕ್ರಮದ ಆಯೋಜನೆಗೆ ಅನುದಾನವಾಗಿ ಗಡಿನಾಡ ಘಟಕಗಳಿಗೆ ರೂ. ೫೦,೦೦೦-೦೦, ಜಿಲ್ಲಾ ಘಟಕಗಳಿಗೆ ರೂ. ೧೫,೦೦೦-೦೦ ಹಾಗೂ ತಾಲ್ಲೂಕು ಘಟಕಗಳಿಗೆ ರೂ. ೧೦,೦೦೦-೦೦ ಗಳನ್ನು ನೀಡಲಾಗಿದೆ.

ಕರ್ನಾಟಕದ ಎಲ್ಲಾ ಜಿಲ್ಲೆಗಳು ಮತ್ತು ತಾಲ್ಲೂಕುಗಳಲ್ಲಿ ಈ ಯೋಜನೆ ಯಶಸ್ವಿಯಾಗಿ ಈಗಾಗಲೇ ಪೂರ್ಣ ಗೊಂಡಿದೆ.

♦ **ತೀವ್ರವಾಗಿ ಹೆಚ್ಚಳವಾದ ಕಸಾಪ ಆಜೀವ ಸದಸ್ಯರ ಸಂಖ್ಯೆ**

ಈ ಮೊದಲು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಹಾಗೂ ಒಟ್ಟು ಭಾರತದಲ್ಲಿ ಹಾಗೂ ವಿದೇಶವನ್ನೂ ಒಳಗೊಂಡಂತೆ ಇದ್ದ ಆಜೀವ ಸದಸ್ಯರ ಸಂಖ್ಯೆ (೩-೩೨೦೧೬ರವರೆಗೆ) = ೨,೨೨,೨೩೬ ಸದಸ್ಯರು

**ಡಾ. ಮನು ಬಳಿಗಾರ್ ಅಧ್ಯಕ್ಷರಾದ ಮೇಲೆ ಸೇರ್ಪಡೆ ಆದ ಆಜೀವ ಸದಸ್ಯರ ಸಂಖ್ಯೆ** (೭-೧೧-೨೦೧೭ರವರೆಗೆ) **=೭೭,೪೭೭ ಸದಸ್ಯರು**

**ಈಗ ಕಸಾಪದ ಒಟ್ಟು ಆಜೀವ ಸದಸ್ಯರ ಸಂಖ್ಯೆ = ೨೯೯೭೧೩ ಸದಸ್ಯರು**

ಅಂದರೆ ಕೇವಲ ಒಂದೂವರೆ ವರ್ಷದಲ್ಲಿ ೭೭,೪೭೭ ಸದಸ್ಯರ ಸಂಖ್ಯೆ ಹೆಚ್ಚಾಗಿರುವುದು ಸಹ ಒಂದು ದಾಖಲೆಯೇ ಆಗಿದೆ. ಹಾಗಾಗಿ ಇದನ್ನು ಪರಿಷತ್ತು ಕನ್ನಡಿಗರನ್ನು ಹೆಚ್ಚು ಹೆಚ್ಚು ಒಳಗೊಳ್ಳುತ್ತಿರುವುದರ ದ್ಯೋತಕವೆಂದೇ ಭಾವಿಸಲಾಗಿದೆ.

♦ **ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಥಮ ಬಾರಿಗೆ ರಾಷ್ಟ್ರೀಯ ಹಬ್ಬಗಳ ಆಚರಣೆ**

೨೦೧೬ನೇ ಸಾಲಿನಿಂದ ಮೊದಲ ಬಾರಿಗೆ ಕನ್ನಡ ಸಾಹಿತ್ಯ ಪರಿಷತ್ತು ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಮಹಾತ್ಮ ಗಾಂಧಿ ಜಯಂತಿ ಜೊತೆಗೆ ಕನ್ನಡ ರಾಜ್ಯೋತ್ಸವಗಳಂತಹ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ ಮೂಲಕ ಹೊಸ ಪರಂಪರೆಗೆ ನಾಂದಿ ಹಾಡಿದೆ.

♦ **ಬುಡಕಟ್ಟು ಅಧ್ಯಯನ ಸಮ್ಮೇಳನದ ಆಶಯ ಭಾಷಣ ಮಾಡಲು ಮಧ್ಯಪ್ರದೇಶ ಪ್ರವಾಸ**

ದಕ್ಷಿಣ ಏಶಿಯಾದಲ್ಲಿನ ಏಕೈಕ ಬುಡಕಟ್ಟು ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಮಧ್ಯಪ್ರದೇಶದ ಅಮರಕಂಟಕದಲ್ಲಿರುವ ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯವು ಕೇಂದ್ರೀಯ ವಿಶ್ವವಿದ್ಯಾಲಯವಾಗಿದ್ದು ಅಖಿಲ ಭಾರತ ಮಟ್ಟದ ವ್ಯಾಪ್ತಿ ಹೊಂದಿದೆ. ಈ ವಿಶ್ವವಿದ್ಯಾನಿಲಯದ ವತಿಯಿಂದ ೦೨ ಮತ್ತು ೦೩ ಸೆಪ್ಟೆಂಬರ್ ೨೦೧೬ ರಂದು "ಬುಡಕಟ್ಟು ಅಧ್ಯಯನ ಸಮ್ಮೇಳನ'ವನ್ನು ಆಯೋಜಿಸಲಾಗಿತ್ತು. ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ಮಾನ್ಯ ಅಧ್ಯಕ್ಷರು ಈ ಸಮ್ಮೇಳನದಲ್ಲಿ ಆಶಯ ಭಾಷಣ ಮಾಡಿರುತ್ತಾರೆ. ಇಂಥ ಕಾರ್ಯಕ್ರಮಕ್ಕೆ ಪರಿಷತ್ತಿನ ಅಧ್ಯಕ್ಷರನ್ನು ಆಹ್ವಾನಿಸಿರುವುದು ಇದೇ ಮೊದಲು. ಇದರ ಖರ್ಚು - ವೆಚ್ಚವನ್ನು ವಿಶ್ವವಿದ್ಯಾಲಯವೇ ಭರಿಸಿರುತ್ತದೆ.

♦ **ಕಾವೇರಿ ನೀರಿನ ವಿಚಾರವಾಗಿ ಕರ್ನಾಟಕ ಬಂದ್‌ಗೆ ಕಸಾಪ ಸಂಪೂರ್ಣ ಬೆಂಬಲ**

ತಮಿಳುನಾಡು ರಾಜ್ಯಕ್ಕೆ ನೀರು ಬಿಡುವಂತೆ ಕರ್ನಾಟಕಕ್ಕೆ ಆದೇಶಿಸಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ವಿರೋಧಿಸಿ, ನಾಡಿನ ರೈತರು, ಕನ್ನಡಪರ ಸಂಘಟನೆಗಳನ್ನು ಬೆಂಬಲಿಸಿ ದಿನಾಂಕ ೯-೯-೨೦೧೬ ರಂದು ಕರ್ನಾಟಕ ಬಂದ್‌ಗೆ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ಕಸಾಪ ಆವರಣದಲ್ಲಿ ಹಾಗೂ ಮಂಡ್ಯದಲ್ಲಿ ಪ್ರತಿಭಟನೆ ಮಾಡಿತು.

♦ **ಕಾವೇರಿ ನೀರು ಹಂಚಿಕೆ - ಮಂಡ್ಯ ಜಿಲ್ಲಾ ಹೋರಾಟಗಾರರ ಧರಣಿಗೆ ಕನ್ನಡ ಸಾಹಿತ್ಯ ಪರಿಷತ್ತು ಬೆಂಬಲ**

ಕಾವೇರಿ ನೀರು ಹಂಚಿಕೆಯ ಸಂಬಂಧ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ವಿರುದ್ಧ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷರಾದ ಶ್ರೀ ಜಿ. ಮಾದೇಗೌಡ ಅವರ ನೇತೃತ್ವದಲ್ಲಿ ನಡೆಯುತ್ತಿದ್ದ ಧರಣಿಯಲ್ಲಿ ದಿನಾಂಕ ೧೬-೦೯-೨೦೧೬ ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಭಾಗವಹಿಸಿ, ಬೆಂಬಲವನ್ನು ವ್ಯಕ್ತಪಡಿಸಿದ್ದರು.

♦ **ಕರ್ನಾಟಕ ಏಕೀಕರಣ ವಜ್ರಮಹೋತ್ಸವವನ್ನು ಬೆಂಗಳೂರಿನ ಕಸಾಪದಲ್ಲಿ ಯಶಸ್ವಿಯಾಗಿ ಆಚರಿಸಲಾಯಿತು.**

ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ಏಕೀಕರಣಗೊಂಡು ೬೦ ವರ್ಷ ತುಂಬಿದ ಹಿನ್ನೆಲೆಯಲ್ಲಿ ಒಂದು ಅರ್ಥಪೂರ್ಣ ಸಮಾರಂಭವನ್ನು ೨೦೧೭ರ ಏಪ್ರಿಲ್ ೩ ಮತ್ತು ೪ ರಂದು ಎರಡು ದಿನಗಳ ಕಾಲ ಆಯೋಜಿಸಿತ್ತು. ದಿನಾಂಕ ೦೩-೦೪-೨೦೧೭ ರ ಸಂಜೆ ೪.೩೦ ಗಂಟೆಗೆ ಉದ್ಘಾಟನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್.ಕೆ. ಪಾಟೀಲರವರು ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ ಎಸ್.ಜಿ. ಸಿದ್ದರಾಮಯ್ಯನವರು ಆಶಯ ನುಡಿಗಳನ್ನಾಡಿದರು.

ದಿನಾಂಕ ೦೪-೦೪-೨೦೧೭ ರಂದು ಬೆಳಗ್ಗೆ ೧೧.೦೦ ಕ್ಕೆ ಹಿರಿಯ ಕವಿಗಳಾದ ಪ್ರೊ. ಜಿ.ಎಸ್. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ : ಒಂದು ಅವಲೋಕನ ಗೋಷ್ಠಿಯಲ್ಲಿ ಏಕೀಕರಣ ಕುರಿತಾಗಿ ನಾಡಿನ ಪ್ರಸಿದ್ಧ ವಿದ್ವಾಂಸರಿಂದ ವಿಚಾರ ಮಂಡನೆಯಾಯಿತು. ಅಪರಾಹ್ನ ೨.೦೦ ರಿಂದ ಕನ್ನಡ ನಾಡು ನುಡಿ ಕುರಿತಾಗಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿಯವರ ಅಧ್ಯಕ್ಷತೆಯಲ್ಲಿ ಹಾಗೂ ಪ್ರೊ. ಎಲ್.ಎನ್. ಮುಕುಂದರಾಜ್ ಅವರ ಆಶಯನುಡಿಯೊಂದಿಗೆ ಕವಿಗೋಷ್ಠಿ ಆಯೋಜಿಸಲಾಗಿತ್ತು. ಈ ಕವಿಗೋಷ್ಠಿಯಲ್ಲಿ ನಾಡಿನ ಹೆಸರಾಂತ ಹಿರಿಯ, ಕಿರಿಯ ಕವಿಗಳು ಕವನ ವಾಚಿಸಿದರು.

♦ **ಕನ್ನಡ / ಸಾಂಸ್ಕೃತಿಕ ಭವನಗಳಿಗೆ ಅಪೆಕ್ಸ್ ಬ್ಯಾಂಕ್‌ವತಿಯಿಂದ ೧ ಕೋಟಿ ರೂಪಾಯಿ ಆರ್ಥಿಕ ಸಹಾಯ ಪಡೆಯಲಾಗಿದೆ.**

ರಾಜ್ಯದಾದ್ಯಂತ ಕನ್ನಡ ಸಾಹಿತ್ಯ ಪರಿಷತ್ತಿನ ಸಹಾಯದಿಂದ ನಿರ್ಮಾಣವಾಗುತ್ತಿರುವ ಹಾಗೂ ಆಗಲಿರುವ ಕನ್ನಡ / ಸಾಂಸ್ಕೃತಿಕ ಭವನಗಳಿಗೆ ನೆರವು ನೀಡುವ ಸದುದ್ದೇಶದಿಂದ ಕರ್ನಾಟಕ ರಾಜ್ಯ ಕೋ-ಆಪರೇಟಿವ್ ಅಪೆಕ್ಸ್ ಬ್ಯಾಂಕ್ ೧ ಕೋಟಿ ರೂಪಾಯಿಯ ಆರ್ಥಿಕ ಸಹಾಯ ನೀಡಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್. ರಾಜಣ್ಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರಿಗೆ ೧ ಕೋಟಿ ರೂಪಾಯಿಗಳ ಚೆಕ್ ಅನ್ನು ನೀಡಿದರು. ಈ ಅನುದಾನದಲ್ಲಿ ತುಮಕೂರು ಜಿಲ್ಲೆಯಲ್ಲಿನ ತುಮಕೂರು ನಗರಕ್ಕೆ ೫೦ ಲಕ್ಷ ಅನುದಾನ

ನೀಡಲಾಗಿದ್ದು, ಇನ್ನೆರಡು ತಿಂಗಳಲ್ಲಿ ಈ ಭವನ ಲೋಕಾರ್ಪಣೆಗೊಳ್ಳಲಿದೆ. ಮಧುಗಿರಿಗೆ ೫೦ ಲಕ್ಷ ರೂ.ಗಳ ಪ್ರಸ್ತಾವನೆ ಬಂದಿದ್ದು, ಕನ್ನಡ ಭವನಗಳ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ. ಇಂತಹ ಯಶಸ್ವಿ ಪ್ರಯತ್ನವು ಇದೇ ಮೊದಲನೆಯದಾಗಿದೆ.

**♦ ಕನ್ನಡ - ನೇಪಾಳಿ ಪರಸ್ಪರ ಸಾಹಿತ್ಯ ಸಂಸ್ಕೃತಿ ಪ್ರಚಾರ : ಮಹತ್ವದ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಕ.ಸಾ.ಪ. ಸಹಿ**

ಕನ್ನಡ ಮತ್ತು ನೇಪಾಳಿ ಸಾಹಿತ್ಯ, ಸಂಸ್ಕೃತಿ ಪ್ರಚಾರದ ಮೂಲಕ ಶಾಂತಿ ಹಾಗೂ ಮಾನವತೆಯನ್ನು ಬಲಪಡಿಸುವ ಸದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು, ನೆರೆ ರಾಷ್ಟ್ರವಾದ ನೇಪಾಳದಲ್ಲಿರುವ ನೇಪಾಳಿ ಕಲಾ ಡಾಟ್ ಕಾಂ ಪ್ರತಿಷ್ಠಾನ - ಇವರೊಂದಿಗೆ ಅಂತರರಾಷ್ಟ್ರೀಯ ಮಹತ್ವದ ಒಪ್ಪಂದಕ್ಕೆ ದಿನಾಂಕ ೦೪-೦೫-೨೦೧೭ ರಂದು ಸಹಿ ಹಾಕಿತು. ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಹಾಗೂ ನೇಪಾಳಿ ಕಲಾ ಡಾಟ್ ಕಾಂ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಮತಿ ಮೊಮಿಲ ಜೋಶಿ ಅವರು ಈ ಒಡಂಬಡಿಕೆಗೆ ಸಹಿ ಮಾಡಿದರು.

ಈ ಒಪ್ಪಂದದ ಪ್ರಕಾರ ಕನ್ನಡದ ೫೦ ಕವಿಗಳ ೫೦ ಕವನಗಳನ್ನು ನೇಪಾಳಿ ಭಾಷೆಗೆ ಭಾಷಾಂತರಗೊಳಿಸಿ ಕನ್ನಡ ನಾಡುನುಡಿ, ಸಂಸ್ಕೃತಿಯ ಬಗ್ಗೆ ನೇಪಾಳದಲ್ಲಿ ಕನ್ನಡ ಸಂಸ್ಕೃತಿ ಪಸರಿಸುವಂತೆ ಮಾಡುವುದು, ಹಾಗೆಯೇ ನೇಪಾಳಿ ಭಾಷೆಯಲ್ಲಿನ ೫೦ ಕವಿತೆಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಸಂಕಲನಗಳನ್ನು ಪ್ರಕಟಿಸುವುದಾಗಿದೆ.

ಭಾಷಾ ಬೆಳವಣಿಗೆಗೆ ಹಾಗೂ ಸಾಹಿತ್ಯ, ಸಂಸ್ಕೃತಿಯನ್ನು ಜಗತ್ತಿನಾದ್ಯಂತ ಪ್ರಚಾರ ಮಾಡುವ ಈ ಘನೋದ್ದೇಶಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಪ್ರಥಮವಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಒಪ್ಪಂದಕ್ಕೆ ಸಹಿ ಮಾಡಿರುವುದು ಮತ್ತೊಂದು ದಾಖಲೆಯಾಗಿದೆ.

**♦ ಡಾ. ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವ ಆಚರಣೆ**

ಖ್ಯಾತ ಕವಿಗಳಾದ ಡಾ. ಗೋಪಾಲಕೃಷ್ಣ ಅಡಿಗರ ಜನ್ಮ ಶತಮಾನೋತ್ಸವ ಆಚರಣೆಯನ್ನು ದಿನಾಂಕ ೧೮-೦೨-೨೦೧೭ರಂದು ಕಸಾಪ ಹಮ್ಮಿಕೊಂಡಿತ್ತು. ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ

ನಡೆದ ಈ ಕಾರ್ಯಕ್ರಮವನ್ನು ನಾಡೋಜ ಡಾ. ಕೆ. ಎಸ್. ನಿಸಾರ್ ಅಹಮದ್ ಅವರು ನೆರವೇರಿಸಿದರೆ, ಡಾ. ಎನ್. ಎಸ್. ಲಕ್ಷ್ಮೀ ನಾರಾಯಣ ಭಟ್ಟರು ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಡಾ. ಮನು ಬಳಿಗಾರ್ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ.ವಿ. ಕೆದಿಲಾಯ ಬರೆದಿರುವ 'ಗೋಪಾಲಕೃಷ್ಣ ಅಡಿಗ ಕವಿ - ಕಾವ್ಯ ಪರಿಚಯ' ಎನ್ನುವ ಕೃತಿಯನ್ನು ಡಾ. ಚಂದ್ರಶೇಖರ ನಂಗಲಿ ಲೋಕಾರ್ಪಣೆ ಮಾಡಿದರು.

ಅಡಿಗರ ಗದ್ಯ ಸಾಹಿತ್ಯವನ್ನು ಕುರಿತಂತೆ, ಡಾ. ಸುಮತೀಂದ್ರ ನಾಡಿಗ ಅವರ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯಲ್ಲಿ ಡಾ. ಎಚ್. ದಂಡಪ್ಪ, ಶ್ರೀ ಎಸ್. ದಿವಾಕರ, ಡಾ. ಎಚ್. ಎಸ್. ಎಂ. ಪ್ರಕಾಶ, ಶ್ರೀ ಕೆ. ಸತ್ಯನಾರಾಯಣ ಪ್ರಬಂಧ ಮಂಡಿಸಿದರು. ಅಡಿಗರ ಕಾವ್ಯ ಕುರಿತಂತೆ ಡಾ. ಜಿ. ಸಿದ್ದಲಿಂಗ ಪಟ್ಟಣಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಗೋಷ್ಠಿಯಲ್ಲಿ ಪ್ರೊ ಜಿ. ಅಬ್ದುಲ್ ಬಷೀರ್, ಡಾ. ಎಂ. ಎಸ್. ಆಶಾದೇವಿ, ಶ್ರೀ ವಿಕ್ರಮ್ ಹತ್ವಾರ್, ಡಾ. ಡಿ.ಕೆ. ಚಿತ್ತಯ್ಯ ಪೂಜಾರ್ ಪ್ರಬಂಧ ಮಂಡಿಸಿದರು.

## ♦ ಶ್ರೀಮತಿ ಎಂ.ಕೆ. ಇಂದಿರಾ ಹಾಗೂ ವಾಣಿಯವರ ಜನ್ಮಶತಮಾನೋತ್ಸವ ಆಚರಣೆ

ಕನ್ನಡ ಸಾರಸ್ವತ ಲೋಕಕ್ಕೆ ಅದ್ವಿತೀಯ ಕಾಣಿಕೆ ನೀಡಿರುವ ಶ್ರೀಮತಿ ಎಂ.ಕೆ. ಇಂದಿರಾ ಹಾಗೂ ವಾಣಿಯವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಈ ಇಬ್ಬರು ಸಾಹಿತಿಗಳ ಸಾಹಿತ್ಯ ಕುರಿತು ಚಿಂತನ-ಮಂಥನ ನಡೆಸುವ ಉದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಲೇಖಕಿಯರ ಸಂಘದ ಜೊತೆಗೂಡಿ ೨೦೧೭ರ ಮೇ ೧೩ ರಂದು ಬೆಳಗ್ಗೆ ೧೦ ಗಂಟೆಯಿಂದ ಸಂಜೆ ೪ ರವರೆಗೆ ಜನ್ಮಶತಮಾನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಯಾಗಿ ಆಚರಿಸಿತು.

## ♦ ಶ್ರೀ ಬೆಳಗೆರೆ ಕೃಷ್ಣಶಾಸ್ತ್ರೀ ಜನ್ಮಶತಮಾನೋತ್ಸವ ಆಚರಣೆ

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಶ್ರೀ ಶಾರದಾ ಮಂದಿರ ವಿದ್ಯಾಸಂಸ್ಥೆ ಜೊತೆಗೂಡಿ "ಬೆಳಗೆರೆ ಕೃಷ್ಣಶಾಸ್ತ್ರೀ ಜನ್ಮಶತಮಾನೋತ್ಸವ

ಸಮಾರೋಪ ಸಮಾರಂಭವನ್ನು ದಿನಾಂಕ ೧೬-೦೫-೨೦೧೭ ರಂದು ಆಯೋಜಿಸಿತ್ತು. ಭಾರತ ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ಮುಖ್ಯನ್ಯಾಯಾಧೀಶರಾದ ನ್ಯಾಯಮೂರ್ತಿ ಶ್ರೀ

ಎಂ.ಎನ್. ವೆಂಕಟಾಚಲಯ್ಯ ಅವರು ಬೆಳಗೆರೆ ಕೃಷ್ಣಶಾಸ್ತ್ರೀ ಅವರ ಸಮಗ್ರ ಸಾಹಿತ್ಯನೂರರ ನೆನಪು ಎಂಬ ಕೃತಿಯನ್ನು ಲೋಕಾರ್ಪಣೆ ಮಾಡಿದರು.

ಬೆಳಗೆರೆ ಕೃಷ್ಣಶಾಸ್ತ್ರೀ ಜನ್ಮಶತಮಾನೋತ್ಸವದ ಉದ್ಘಾಟನಾ ಸಮಾರಂಭವನ್ನು ಕೂಡ ಸದರಿ ಸಂಸ್ಥೆ ಜೊತೆಗೂಡಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಅರ್ಥಪೂರ್ಣವಾಗಿ ಆಚರಿಸಲಾಗಿತ್ತು.

### ♦ ನಾಡೋಜ ದೇ. ಜವರೇಗೌಡರ ಜನ್ಮ ಶತಮಾನೋತ್ಸವ ಸ್ಮರಣೆ

ಖ್ಯಾತ ಸಾಹಿತಿಗಳು, ಕನ್ನಡದ ಹೋರಾಟಗಾರರು, ಶಿಕ್ಷಣತಜ್ಞರೂ ಆದ ನಾಡೋಜ ದೇ. ಜವರೇಗೌಡ ಅವರ ಜನ್ಮ ಶತಮಾನೋತ್ಸವ ಆಚರಣೆಯನ್ನು ಕಸಾಪವು ದಿನಾಂಕ ೦೯-೦೭-೨೦೧೭ರಂದು ಯಶಸ್ವಿಯಾಗಿ ಆಚರಿಸಿತು. ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ ನಡೆದ ಈ ಕಾರ್ಯಕ್ರಮವನ್ನು ಹಿರಿಯ ಸಾಹಿತಿಗಳಾದ ಡಾ. ಗೊ.ರು. ಚನ್ನಬಸಪ್ಪನವರು ಉದ್ಘಾಟಿಸಿದರು. ಸಂಸ್ಕೃತಿ ಚಿಂತಕರು ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳಾದ ಡಾ. ಬಿ.ಎಲ್. ಶಂಕರ್ ಅವರು ಆಶಯ ನುಡಿಗಳನ್ನಾಡಿದರು. ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಇದರ ಅಧ್ಯಕ್ಷತೆ ವಹಿಸಿದ್ದರು. ತದನಂತರದ ಗೋಷ್ಠಿಯಲ್ಲಿ ಡಾ. ನೀಲಗಿರಿ ತಳವಾರರ ಅಧ್ಯಕ್ಷತೆಯಲ್ಲಿ ಡಾ. ಚಕ್ಕೆರೆ ಶಿವಶಂಕರ್, ಡಾ. ಸಿ. ನಾಗಣ್ಣ, ಶ್ರೀ ಸ.ರಾ. ಸುದರ್ಶನ ಅವರು ದೇಜಗೌ ಅವರ ಸಾಹಿತ್ಯ ಮತ್ತು ಹೋರಾಟವನ್ನು ಕುರಿತಂತೆ ವಿದ್ವತ್ಪೂರ್ಣವಾಗಿ ಮಾತನಾಡಿದರು.

ನಂತರದ ಗೋಷ್ಠಿಯಲ್ಲಿ ಡಾ. ರಾಗೌ, ಡಾ. ಪಿ. ವಿ. ನಾರಾಯಣ, ಡಾ. ಡಿ.ಬಿ. ನಾಯಕ, ಡಾ ವತ್ಸಲಾ ಮೋಹನ್, ಡಾ. ಟಿ.ಸಿ, ಪೂರ್ಣಿಮಾ, ಡಾ. ಟಿ. ಕೆ. ಕೆಂಪೇಗೌಡ ಅವರು 'ನಾ ಕಂಡಂತೆ ದೇಜಗೌ' ಎಂಬ ವಿಷಯದ ಮೇಲೆ ಮಾತನಾಡಿದರು.

### ♦ ಶ್ರೀಶಿವರಹಸ್ಯ ಹಾಗೂ ಇತರೆ ಗ್ರಂಥಗಳ ಲೋಕಾರ್ಪಣೆ

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಆಸ್ಥಾನ ವಿದ್ವಾನ್ ಹೆಚ್. ಗಂಗಾಧರಶಾಸ್ತ್ರೀಯವರು ಸಂಸ್ಕೃತದಿಂದ ಅನುವಾದಿಸಿರುವ ಶ್ರೀಶಿವರಹಸ್ಯ ಸಂಪುಟಗಳನ್ನು ಪರಿಷತ್ತಿನಲ್ಲಿ ಮರುಮುದ್ರಿಸಿ ಪ್ರಕಟಿಸುವಂತೆ, ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರು ಸೂಚಿಸಿದ್ದರು. ಶ್ರೀಶಿವರಹಸ್ಯ ಒಟ್ಟು ೩೦ ಸಂಪುಟಗಳಿದ್ದು ಪ್ರಸ್ತುತ, ಎರಡು ಸಂಪುಟಗಳು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಂಡಿವೆ.

ಈ ಮೌಲಿಕ ಗ್ರಂಥದ ೨ ಸಂಪುಟಗಳ ಜೊತೆಗೆ ವಿವಿಧ ಲೇಖಕರ ೧೧ ಪುಸ್ತಕಗಳನ್ನೂ ಸಹ ಪ್ರಕಟಿಸಿ, ದಿನಾಂಕ ೧೫-೦೫-೨೦೧೭ ರಂದು ಮಾಜಿ ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರ ಅಮೃತಹಸ್ತದಿಂದ ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಣೆ ಮಾಡಲಾಗಿದೆ. ಶಿವರಹಸ್ಯದ ಇನ್ನೂ ನಾಲ್ಕು ಸಂಪುಟಗಳು ಇದೀಗ ಬಿಡುಗಡೆಗೆ ಸಿದ್ಧವಾಗಿವೆ.

- **ಕನ್ನಡ ಸಾಹಿತ್ಯ ಪರಿಷತ್ತಿನ ಉಗ್ರಾಣದಲ್ಲಿರುವ ಹಳೆಯ ಪುಸ್ತಕಗಳಿಂದ ಸರ್ಕಾರಿ ಶಾಲಾ ಕಾಲೇಜುಗಳಿಗೆ ಉಚಿತವಾಗಿ ಪ್ರತಿಯೊಂದಕ್ಕೆ ೨೦೦-೫೦೦ ಪುಸ್ತಕಗಳನ್ನು ನೀಡುತ್ತಿರುವುದು.**

ಸರ್ಕಾರಿ ಶಾಲೆ ಹಾಗೂ ಕಾಲೇಜುಗಳಿಗೆ ಕನಿಷ್ಠ ೫೦, ಗರಿಷ್ಟ ೧೦೦ ರಂತೆ ಎಲ್ಲಾ ಜಿಲ್ಲೆಗಳಿಗೂ ಹಾಗೂ ಪರಿಷತ್ತಿನ ಗಡಿನಾಡ ಘಟಕಗಳಲ್ಲಿರುವ ೧೦ ರಿಂದ ೧೫ ಶಾಲೆ, ಕಾಲೇಜುಗಳಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಗ್ರಾಣದಲ್ಲಿರುವ ಹಳೆಯ ಪುಸ್ತಕಗಳನ್ನು ಉಚಿತವಾಗಿ ಹಂಚಲು ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಣಯಕೈಗೊಳ್ಳಲಾಗಿದೆ. ಇದರಂತೆ ಈಗಾಗಲೇ ರಾಜ್ಯದಾದ್ಯಂತ ಅನೇಕ ಶಾಲಾ ಕಾಲೇಜುಗಳಿಗೆ ಉಚಿತವಾಗಿ ಪುಸ್ತಕಗಳನ್ನು ನೀಡಲಾಗಿದೆ.

- **ಕಲಾವಿದರಿಗೆ ಪ್ರೋತ್ಸಾಹ**

ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ದತ್ತಿ ಕಾರ್ಯಕ್ರಮಗಳು, ಸಾಹಿತ್ಯ ಸಮಾವೇಶಗಳು, ಇನ್ನಿತರೆ ಕಾರ್ಯಕ್ರಮಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸುವುದರ ಮೂಲಕ ಜಾನಪದ, ಸಂಗೀತ, ರಂಗಭೂಮಿ ಇತ್ಯಾದಿ ಕ್ಷೇತ್ರಗಳ ಕಲಾವಿದರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಈಗ ಕಸಾಪ ಕಾರ್ಯಕ್ರಮಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೂಡಾ ಏರ್ಪಡಿಸಿ, ಕಲಾವಿದರಿಗೆ ರೂ. ೫೦೦೦-೦೦ ಗಳವರೆಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಪ್ರಥಮ ಬಾರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸಿಬ್ಬಂದಿಗಳಿಗೂ ವೇದಿಕೆಯಲ್ಲಿ ಹಾಡಲು ಹಾಗೂ ಹಲವಾರು ಕಾರ್ಯಕ್ರಮಗಳಲ್ಲಿ ವೇದಿಕೆಯಲ್ಲಿ ಗಣ್ಯರಿಗೆ ಸ್ವಾಗತ, ಸನ್ಮಾನ ಕಾರ್ಯಕ್ರಮಗಳಲ್ಲೂ ಭಾಗವಹಿಸುವ ಅವಕಾಶ ಮಾಡಿಕೊಡಲಾಗಿದೆ.

- **ಕ.ಸಾ.ಪ. ಸಿಬ್ಬಂದಿಗಳಿಗೆ ಹೆಚ್ಚುವರಿ ರಜೆ ಸೌಲಭ್ಯ ಹಾಗೂ ಸಂಬಳ ಹೆಚ್ಚಿಸಿರುವುದು.**

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂಚಿತ ವೇತನದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ೪೫ಕ್ಕೂ ಹೆಚ್ಚು ಮಂದಿಗೆ ಜೀವನ ನಿರ್ವಹಣೆಗೆ ಸುಗಮವಾಗುವಂತೆ ಅವರ ಸೇವಾವಧಿ, ಕಾರ್ಯದಕ್ಷತೆಯನ್ನು ಪರಿಗಣಿಸಿ ಸಂಬಳವನ್ನು ಹೆಚ್ಚಿಸಲಾಗಿದೆ. ಇದರ ಜೊತೆಗೆ ಹೆಚ್ಚುವರಿ ರಜೆಯನ್ನು ಕೂಡಾ ಮಂಜೂರು ಮಾಡಲಾಗಿದೆ. ವಾರ್ಷಿಕ ರಜೆ ೧೨ ಇದ್ದುದ್ದನ್ನು ೧೫ಕ್ಕೆ ಹೆಚ್ಚಿಸಿದೆ, ಮದುವೆಯಾಗುವ ನೌಕರ/ಳಿಗೆ ೭ ದಿವಸಗಳ ವೇತನಸಹಿತ ರಜೆ ನೀಡುವುದು ಹಾಗೂ ಪ್ರಸೂತಿ ರಜೆ (Maternity leave)ಯಾಗಿ ೩೦ ದಿನಗಳ ವೇತನಸಹಿತ ರಜೆ ನೀಡಿ ಸಿಬ್ಬಂದಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ. ಸರ್ಕಾರದಲ್ಲಿ ಈಗಾಗಲೇ ಇಂತಹ ಸೌಲಭ್ಯ ಇರುವುದನ್ನು ಗಮನಿಸಬಹುದಾಗಿದೆ.

- **ಕ.ಸಾ.ಪ. ಅಂತರ್ಜಾಲ ತಾಣವನ್ನು ಹೊಸದಾಗಿ ಅಭಿವೃದ್ಧಿ ಪಡಿಸಿರುವುದು.**

ರಾಯಚೂರಿನಲ್ಲಿ ನಡೆದ ೮೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿರುತ್ತಾರೆ. ಪರಿಷತ್ತಿನ ವೆಬ್‌ಸೈಟ್ www.kasapa.in ಇದು Static website ಆಗಿತ್ತು. ಇದರಲ್ಲಿ ಹುಡುಕಾಟ ಕಿಂಡಿ (Search Engine), ಹಾಗೇ ಪ್ರಸ್ತುತ website publication ಇರಲಿಲ್ಲ. ಆದ್ದರಿಂದ ಇದನ್ನು In teractive website ಆಗಿ ಮಾಡಲು ವಿಜ್ಞಾನ ಮತ್ತು ತಂತ್ರಜ್ಞಾನ ಸಮಿತಿ ಸಭೆಯಲ್ಲಿ ನುರಿತ ತಜ್ಞರ ಅಭಿಪ್ರಾಯ ಪಡೆದುಕೊಳ್ಳಲಾಯಿತು. ಈ ಕಾರ್ಯ ಸಾಕಾರಗೊಳಿಸಲು ಗಣಕತಂತ್ರಜ್ಞರಾದ ಶ್ರೀ ತಿರು ಶ್ರೀಧರ್ ಇವರನ್ನು ನೇಮಿಸಿಕೊಂಡು ಹೊಸ ತಂತ್ರಜ್ಞಾನವುಳ್ಳ ವೆಬ್‌ಸೈಟ್ ಅನ್ನು ರಚನೆಮಾಡಿಸಿ, ಅದರಲ್ಲಿ ದಿನನಿತ್ಯ ನಡೆಸುವ ಹಾಗೂ ಮುಂದೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ವಿವರ, ಆಮಂತ್ರಣ ಪತ್ರಿಕೆ, ಸಮಾರಂಭದ ಚಿತ್ರಗಳು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮಾಹಿತಿ, ಸಮ್ಮೇಳನಾಧ್ಯಕ್ಷರ ಭಾಷಣ, ಕಾರ್ಯಕಾರಿ ಸಮಿತಿ ವಿವರ, ಪರೀಕ್ಷೆ, ಪುಸ್ತಕ ಪ್ರಕಟಣೆಗಳ ವಿವರದ ಜೊತೆಗೆ ರಾಷ್ಟ್ರಕವಿಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ನೃಪತುಂಗ ಪ್ರಶಸ್ತಿ ಪುರಸ್ಕೃತರು, ಸರಸ್ವತಿ ಸಮ್ಮಾನ್, ಕಬೀರ್ ಸಮ್ಮಾನ್ ಪುರಸ್ಕೃತರ ಪರಿಚಯ ಅಳವಡಿಕೆ, ನಿಘಂಟು ಅಳವಡಿಕೆ, ಮುಕ್ತಜ್ಞಾನದಡಿಯಲ್ಲಿ ಹಿಂದಿನ ಶತಮಾನಗಳಲ್ಲಿ

ಪ್ರಕಟಗೊಂಡು ಪುಸ್ತಕದಲ್ಲಿ ದುರ್ಲಭವಾಗಿರುವ ೬೦ಕ್ಕೂ ಹೆಚ್ಚು ಸಾಹಿತ್ಯ ಕೃತಿಗಳನ್ನು ಓದುಗರಿಗೆ ಪಿ.ಡಿ.ಎಫ್ ರೂಪದಲ್ಲಿ ನೀಡಲಾಗಿದೆ.

**♦ ಕನ್ನಡಿಗರಿಗೆ ಉದ್ಯೋಗ ವೆಬ್‌ಪೋರ್ಟಲ್ ಸ್ಥಾಪನೆ**

ಇದಲ್ಲದೆ ಬಹು ಮುಖ್ಯವಾಗಿ ಕನ್ನಡಿಗರಿಗೆ ಉದ್ಯೋಗ ಸಂಬಂಧಿತ ಸಿ ಮತ್ತು ಡಿ ಗ್ರೂಫ್ ಕೆಲಸದ ಸಂಬಂಧ ವೆಬ್‌ಸೈಟ್‌ನಲ್ಲಿ ಜಾಬ್‌ಪೋರ್ಟಲ್ ರಚನೆ ಮಾಡಿ ಬ್ಯಾಕ್ ಎಂಡ್‌ನಲ್ಲಿ ಡಾಟಾಬೇಸ್ ಅಳವಡಿಕೆ ಮಾಡಿ ಅಭ್ಯರ್ಥಿಗಳ ಹಾಗೂ ಸಂಬಂಧಿಸಿದ ನೌಕರಿ, ಕೆಲಸ ನೀಡುವ ಸಂಸ್ಥೆಗಳ ಮಾಹಿತಿಯನ್ನು ಶೇಖರಿಸಿ, ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಯನ್ನು ನಮ್ಮ ರಾಜ್ಯದಲ್ಲಿ ನೆಲೆಸಿರುವ ಬಹುರಾಷ್ಟ್ರೀಯ ಮತ್ತು ಇತರ ಕಂಪನಿಗಳಿಗೆ ಕಳಿಸಿ, ಸಿ ಮತ್ತು ಡಿ ದರ್ಜೆಯ ನೌಕರಿಗಳನ್ನು ಕನ್ನಡಿಗರಿಗೆ ನೀಡುವಂತೆ ಮನವಿ ಸಲ್ಲಿಸಲಾಗುತ್ತಿದೆ. ೨೦೧೭ರ ಅಕ್ಟೋಬರ್ ಅಂತ್ಯಕ್ಕೆ ೩೭೫ ಕಂಪನಿಗಳಿಗೆ ೩೦೦೦ ಸಾವಿರ ಅರ್ಜಿಗಳನ್ನು ಈ ಜಾಲತಾಣದ ಮೂಲಕ ಸಂಬಂಧಿಸಿದ ಕಂಪನಿಗಳಿಗೆ ಕಳಿಸಿಕೊಡಲಾಗಿದೆ. (ಬಾಷ್, ಟೊಯೊಟಾ ಮಾದರಿಯ ಕಂಪನಿಗಳು) ಇದಕ್ಕಾಗಿ ದುಡಿದ ಶ್ರೀ ಎಸ್. ಆರ್. ವಿಜಯಶಂಕರ್, ಶ್ರೀ ತಿರು ಶ್ರೀಧರ, ಶ್ರೀ ಕೆ.ಎನ್. ಅವಿನಾಶ್ ಹಾಗೂ ಇನ್ನಿತರ ಸಿಬ್ಬಂದಿಗಳಿಗೆ ನೆನಕೆಗಳು ಸಲ್ಲುತ್ತವೆ.

**♦ ಸಂಶೋಧನಾ ವಿಭಾಗ :**

**ಪಿಹೆಚ್.ಡಿ. ಮತ್ತು ಎಂ.ಫಿಲ್. ಪದವಿ ಸೀಟು ಹೆಚ್ಚಳ**

ಕನ್ನಡ ಸಾಹಿತ್ಯ ಪರಿಷತ್ತು ೨೦೧೧-೧೨ನೇ ಸಾಲಿನಿಂದ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆಯೊಂದಿಗೆ ಕನ್ನಡ ಸಾಹಿತ್ಯದಲ್ಲಿ ಎಂ.ಫಿಲ್. ಹಾಗೂ ಪಿಹೆಚ್.ಡಿ. ಸಂಶೋಧನಾ ಕೋರ್ಸ್‌ಗಳನ್ನು ನಡೆಸುತ್ತಿದ್ದು ಪ್ರತಿ ಸಾಲಿಗೂ ಪಿಎಚ್.ಡಿ. ಕೋರ್ಸ್‌ಗೆ ಇದುವರೆಗೆ ಗರಿಷ್ಠ ಇಬ್ಬರಿಗೆ ಮಾತ್ರ ಅವಕಾಶ ನೀಡಲಾಗುತ್ತಿತ್ತು. ಮಾನ್ಯ ಅಧ್ಯಕ್ಷರು ಬಂದ ಮೇಲೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯವರೊಂದಿಗೆ ಚರ್ಚಿಸಿ ೨೦೧೬-೧೭ನೇ ಸಾಲಿನಿಂದ ಪ್ರತಿವರ್ಷ ಪಿಎಚ್.ಡಿ. ಪದವಿಗೆ ೦೮ ಮಂದಿಗೆ ಹಾಗೂ ಎಂ.ಫಿಲ್ ಕೋರ್ಸ್‌ಗೆ ೧೦ ಮಂದಿಗೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಅದರಂತೆ ಪ್ರತಿವರ್ಷ ೧೦ ಮಂದಿ ವಿದ್ಯಾರ್ಥಿಗಳು ಎಂಫಿಲ್ ಪದವಿ ಪಡೆಯುತ್ತಿದ್ದಾರೆ ಹಾಗೂ ಈಗಾಗಲೇ ಒಬ್ಬರು ಪಿಹೆಚ್.ಡಿ. ಮಹಾಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ೪ ಜನರು ಮಹಾಪ್ರಬಂಧವನ್ನು ವಿ.ವಿ.ಗೆ ಒಪ್ಪಿಸಲು

ಅನುಮತಿ ಕೋರಿರುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಚಾರಿತ್ರಿಕ ಸನ್ನಿವೇಶದಲ್ಲಿ ಇದು ಬಹಳ ಮಹತ್ವದ ಕಾರ್ಯವೆಂದು ನಾವು ಭಾವಿಸುತ್ತೇವೆ.

### ♦ ಪರೀಕ್ಷಾ ವಿಭಾಗದ ಕಾರ್ಯ ಚಟುವಟಿಕೆಗಳು

**ಮರು ಮೌಲ್ಯಮಾಪನಕ್ಕೆ ಸಮ್ಮತಿ :** ಈ ಮುಂಚೆ ಕನ್ನಡ ಸಾಹಿತ್ಯ ಪರಿಷತ್ತು ನಡೆಸಿಕೊಂಡು ಬರುತ್ತಿದ್ದ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆಗಳ ಫಲಿತಾಂಶದ ನಂತರ ಪರೀಕ್ಷಾ ನಿಯಮದಂತೆ ಉತ್ತರ ಪತ್ರಿಕೆಗಳ ಮರು ಎಣಿಕೆಗೆ ಮಾತ್ರ ಅವಕಾಶ ನೀಡಲಾಗುತ್ತಿತ್ತು. ಈ ನಿಯಮಾವಳಿಗಳನ್ನು ಬದಲಾಯಿಸಿ ಮಾನ್ಯ ಅಧ್ಯಕ್ಷರ ಅವಧಿಯಲ್ಲಿ ಮರು ಮೌಲ್ಯಮಾಪನಕ್ಕೆ ಅವಕಾಶ ನೀಡಬಹುದೆಂಬ ಎಲ್ಲಾ ಸದಸ್ಯರ ಒಪ್ಪಿಗೆಯಂತೆ ಒಂದು ಪತ್ರಿಕೆಗೆ ರೂ.೨೦೦/- ಶುಲ್ಕ ಪಡೆದು ಮರು ಮೌಲ್ಯಮಾಪನ ಮಾಡಲು ಸಮ್ಮತಿಸಿದರು. ಇದರಿಂದ ಅನೇಕ ವಿದ್ಯಾರ್ಥಿಗಳಿಗೆ ಅನುಕೂಲವಾಗಿರುತ್ತದೆ.

**ದತ್ತಿನಿಧಿಯಿಂದ ಪ್ರಶಸ್ತಿ ಪುರಸ್ಕಾರ ನೀಡುವ ಬಗ್ಗೆ :** ಸಾಹಿತ್ಯ ಪರಿಷತ್ತಿನಲ್ಲಿ ಬ್ಯಾಂಕ್ ವಿಜೇತರಿಗೆ ಈಗಾಗಲೇ ನೀಡುತ್ತಿದ್ದ ಒಂದೇ ಮೊತ್ತದ ಬಹುಮಾನವನ್ನು (ತಲಾ ರೂ.೧೦೦೦/-) ಪರಿಷ್ಕರಿಸಿ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಯಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ರ‍್ಯಾಂಕ್‌ಗಳಿಗೆ ಕ್ರಮವಾಗಿ ರೂ.೧೫೦೦, ರೂ.೧೨೦೦ ಹಾಗೂ ರೂ.೧೦೦೦ಗಳಂತೆ ದತ್ತಿನಿಧಿಯ ಮೊತ್ತಕ್ಕೆ ಪರಿಷತ್ತಿನಿಂದ ಪ್ರೋತ್ಸಾಹ ಧನವನ್ನು ಸೇರಿಸಿ ಬಹುಮಾನವನ್ನು ನೀಡುತ್ತಿದ್ದರು.

ಈಗಿನ ಅಧ್ಯಕ್ಷರ ಅವಧಿಯಲ್ಲಿ ಈ ಪುರಸ್ಕಾರದ ಮೊತ್ತವನ್ನು ಕ್ರಮವಾಗಿ (ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪ್ರತಿ ವಿಭಾಗದಿಂದ ಮೂರು ಜನರಿಗೆ) ೧೦,೦೦೦-೦೦, ೭,೫೦೦-೦೦ ಹಾಗೂ ೫,೦೦೦-೦೦ ರೂ.ಗಳಿಗೆ ಹೆಚ್ಚಿಸಲಾಗಿದೆ. ಇದರಿಂದ ಕನ್ನಡ ಪ್ರವೇಶ, ರತ್ನ, ಜಾಣ, ಕಾವ ಪರೀಕ್ಷೆಗಳಿಗೆ ನೊಂದಾಯಿಸುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ.

### ♦ ಸಾಹಿತ್ಯ ಪರೀಕ್ಷಾ ಕೇಂದ್ರಗಳನ್ನು ಹೆಚ್ಚಿಸುವ ನಿರ್ಧಾರ :

ಪರೀಕ್ಷಾ ನಿಯಮಾವಳಿಯಂತೆ ಸಾಹಿತ್ಯ ಪರೀಕ್ಷಾ ಕೇಂದ್ರಗಳನ್ನು ಜಿಲ್ಲಾ ಕೇಂದ್ರಗಳಿಗೆ ಮಾತ್ರ ನೀಡಲಾಗುತ್ತಿತ್ತು. ಮಾನ್ಯ ಅಧ್ಯಕ್ಷರ ಅವಧಿಯಲ್ಲಿ ೩೦ ಅಥವಾ ೩೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಎಲ್ಲಾ ಸ್ಥಳದಲ್ಲಿಯೂ ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರಗಳನ್ನು ನೀಡಲಾಯಿತು.

♦ **ಪಠ್ಯಪುಸ್ತಕ ಪರಿಷ್ಕರಣಾ ಕಾರ್ಯದ ಪ್ರಗತಿ :**

ಸಾಹಿತ್ಯ ಪರೀಕ್ಷೆಗಳಾದ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಗಳ ಪಠ್ಯಪುಸ್ತಕಗಳನ್ನು ಸುಮಾರು ೭ ವರ್ಷಗಳಿಂದ (೨೦೧೦) ಪರಿಷ್ಕರಿಸದೇ ಮುಂದುವರಿಸಲಾಗಿತ್ತು. ಮಾನ್ಯ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಡಾ. ಸಿದ್ದಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಹಾಗೂ ಕೆಳಕಂಡ ೯ ಮಂದಿ ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಿ ಪಠ್ಯಪುಸ್ತಕ ಪರಿಷ್ಕರಣ ರಚನಾ ಕಾರ್ಯ ಕೈಗೊಂಡು ೧. ಡಾ. ಯಲ್ಲಪ್ಪ ಹಿಮ್ಮಡಿ, ೨. ಡಾ. ರಾಮಲಿಂಗಪ್ಪ ಟಿ. ಬೇಗೂರು, ೩. ಡಾ. ಎಂ.ಪಿ. ರೇಖಾ ವಸಂತ್, ೪. ಡಾ. ಬಸವರಾಜ ಬಲ್ಲೂರ, ೫. ಡಾ. ರಾಜಶೇಖರ ಹತಗುಂದಿ, ೬ ಶ್ರೀ ವ.ಚ. ಚನ್ನೇಗೌಡ, ೭. ಶ್ರೀ ಪಿ. ಮಲ್ಲಿಕಾರ್ಜುನಪ್ಪ, ೮. ಶ್ರೀ ಬಿ.ಎನ್. ಪರಡ್ಡಿ, ಸಂಯೋಜನಾಧಿಕಾರಿಗಳು ಇವರುಗಳ ನೇತೃತ್ವದಲ್ಲಿ ಬಹಳ ಮಹತ್ವಾಕಾಂಕ್ಷೆಯ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಬಿಂಬಿಸುವ ಪಠ್ಯಪುಸ್ತಕಗಳು ಸಿದ್ಧಗೊಳ್ಳುತ್ತಿವೆ.

♦ **ಕ.ಸಾ.ಪ ನಡೆಸಿಕೊಂಡು ಬರುತ್ತಿರುವ ಶಾಸನಶಾಸ್ತ್ರ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಹೆಚ್ಚಿಸಿದ್ದು :**

೧.ಸಾಹಿತ್ಯ ಪರಿಷತ್ತಿನಲ್ಲಿ ನಡೆದುಕೊಂಡು ಬರುತ್ತಿರುವ ಶಾಸನಶಾಸ್ತ್ರ ಡಿಪ್ಲೊಮಾ ತರಗತಿಗಳು ಯಥಾವತ್ತಾಗಿ ಮುಂದುವರೆಯುತ್ತಿದ್ದು, ಈ ಕೋರ್ಸ್‌ನಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳಿಸಿದ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಪ್ರೋತ್ಸಾಹ ಧನವನ್ನು ೧೩೫೦, ೧೨೫೦, ೧೨೦೦ ರೂಗಳಿಂದ ಈಗ ಈ ಪ್ರೋತ್ಸಾಹ ಧನವನ್ನು ಕ್ರಮವಾಗಿ ೧೦.೦೦೦, ೭೫೦೦ ಹಾಗೂ ೫೦೦೦ ರೂಗಳಿಗೆ ಹೆಚ್ಚಿಸಲಾಗಿದೆ. ಇದರಿಂದ ಈ ಕೋರ್ಸ್‌ಗೆ ಬರುವವರ ಸಂಖ್ಯೆಯೂ ಹೆಚ್ಚಾಯಿತು. ವಿದ್ಯಾರ್ಥಿಗಳಲ್ಲಿ ಆಸಕ್ತಿ ಉಂಟಾಯಿತು ಹಾಗೂ ಪರಿಷತ್ತಿನ ಈ ಕೋರ್ಸ್‌ಗೆ ಹೆಚ್ಚು ಮೌಲ್ಯವೂ ಬಂದಂತಾಗಿದೆ.

೨. ಶಾಸನ ಶಾಸ್ತ್ರ ಡಿಪ್ಲೊಮಾಗೆ ಪಾಠ ಮಾಡುತ್ತಿದ್ದ ಅಧ್ಯಾಪಕರ ಸಂಭಾವನೆಯನ್ನು ಹೆಚ್ಚಿಸಿ ಅಧ್ಯಾಪಕರಲ್ಲಿ ಇನ್ನಷ್ಟು ಆಸಕ್ತಿ, ಬದ್ಧತೆಯನ್ನುಂಟು ಮಾಡಲಾಗಿದೆ.

೩. ಶಾಸನ ಡಿಪ್ಲೊಮಾ ವಿದ್ಯಾರ್ಥಿಗಳಿಗೆ 'ಕ್ಷೇತ್ರಕಾರ್ಯ' ಕಡ್ಡಾಯವಾಗಿರುತ್ತದೆ. ಅವರು ಶಾಸನ ಪಡಿಯಚ್ಚು ತೆಗೆಯುವುದು, ಲಿಪಿ ಅಧ್ಯಯನ, ಕಲೆ, ವಾಸ್ತುಶಿಲ್ಪ ಮುಂತಾದವುಗಳನ್ನು

ಆಳವಾಗಿ ತಿಳಿಯಲು ವಿವಿಧ ಸ್ಥಳಗಳಿಗೆ (ಕ್ಷೇತ್ರ ಕಾರ್ಯ) ಭೇಟಿ ನೀಡಬೇಕಾಗುತ್ತದೆ. ಈ ಖರ್ಚನ್ನು ಇದುವರೆಗೂ ವಿದ್ಯಾರ್ಥಿಗಳೇ ಭರಿಸಬೇಕಾಗಿತ್ತು. ಈಗ ಈ ವೆಚ್ಚವನ್ನೂ ಪರಿಷತ್ತಿನ ವತಿಯಿಂದಲೇ ಭರಿಸಲು ತೀರ್ಮಾನಿಸಿ ವಿದ್ಯಾರ್ಥಿಗಳ ಹೆಚ್ಚಿನ ಓದಿಗೆ ಅನುವು ಮಾಡಿಕೊಡಲಾಗಿದೆ.

- **ವಿಶೇಷ ಉಪನ್ಯಾಸ ಮಾಲಿಕೆ ಆರಂಭ :**

೪. ಶಾಸನ ಶಾಸ್ತ್ರ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಇನ್ನಷ್ಟು ಅನುಕೂಲವಾಗಲೆಂಬ ಕಾರಣದಿಂದ ಮಾನ್ಯ ಅಧ್ಯಕ್ಷರು ಪಾಠ, ಪ್ರವಚನ, ಕ್ಷೇತ್ರಕಾರ್ಯಗಳ ಜೊತೆಗೆ 'ವಿಶೇಷ ಉಪನ್ಯಾಸ' ಮಾಲಿಕೆಯನ್ನು ಹೊಸದಾಗಿ ಪ್ರಾರಂಭಿಸಿದ್ದಾರೆ. ಅಂದರೆ ಕನ್ನಡ ಶಾಸನ, ಲಿಪಿ, ಪ್ರಾಚೀನ ಸಾಹಿತ್ಯ, ಶಿಲ್ಪಕಲೆ, ವಾಸ್ತುಶಿಲ್ಪ, ಸಾಂಸ್ಕೃತಿಕ ಚರಿತ್ರೆಯಲ್ಲಿ ಆಳವಾದ ಹಾಗೂ ಗಂಭೀರವಾದ ಅಧ್ಯಯನ ಮಾಡಿರುವ ವಿವಿಧ ವಿದ್ವಾಂಸರುಗಳಿಂದ ಪ್ರತಿ ತಿಂಗಳು ಒಂದೊಂದು ವಿಶೇಷ ಉಪನ್ಯಾಸ ನಡೆಸಿಕೊಂಡು ಬರಲು ಸೂಚಿಸಲಾಗಿದೆ. ಅದರಂತೆ ಈಗಾಗಲೇ ಡಾ. ಷ. ಷಟ್ಟರ್, ಡಾ. ದೇವರ ಕೊಂಡಾರೆಡ್ಡಿ, ಡಾ. ತಮಿಳ್‌ಸೆಲ್ವಿ ಡಾ. ಎನ್. ಆರ್. ಲಲಿತಾಂಬ, ಡಾ. ಹೆಚ್. ಎಸ್. ಗೋಪಾಲ್‌ರಾವ್ ಮುಂತಾದವರು ಉಪನ್ಯಾಸ ನೀಡಿದ್ದು ಇದು ಮುಂದುವರೆಯುತ್ತಿದೆ. ಇದರಿಂದ ವಿದ್ಯಾರ್ಥಿಗಳ ಜೊತೆಗೆ ಅನೇಕ ವಿದ್ವಾಂಸರು, ಆಸಕ್ತರು ಈ ಉಪನ್ಯಾಸಕ್ಕೆ ಬರುತ್ತಿದ್ದು ಉತ್ತಮ ಬೆಳವಣಿಗೆಯಾಗಿ ಜನಮೆಚ್ಚುಗೆ ಪಡೆಯುತ್ತಿದೆ.

೫. 'ಈ ವಿಶೇಷ ಉಪನ್ಯಾಸ ಮಾಲಿಕೆ'ಯಲ್ಲಿ ಮಂಡಿತವಾಗುವ ಪ್ರಬಂಧಗಳನ್ನು ಸಂಗ್ರಹಿಸಿ ಪ್ರಕಟಿಸುವ ಯೋಜನೆಯನ್ನೂ ಹೊಸದಾಗಿ ಜಾರಿ ಮಾಡಿದ್ದು ಆ ಕಾರ್ಯ ಪ್ರಗತಿಯಲ್ಲಿದೆ.

೬. ಶಾಸನ ಡಿಪ್ಲೊಮಾ ಕೋರ್ಸ್ ಮಾದರಿಯಂತೆ 'ಶಾಸ್ತ್ರೀಯ ಭಾಷೆ' ಡಿಪ್ಲೊಮಾ ಕೋರ್ಸ್ ಪ್ರಾರಂಭ ಮಾಡಿದ್ದು ಅದರ ಪಠ್ಯ ಪುಸ್ತಕ ಸಿದ್ಧತೆಯೂ ನಡೆಯುತ್ತದೆ. ಇದು ಪ್ರಸಕ್ತವಾಗಿ ಹೆಚ್ಚು ಅವಶ್ಯವಿರುವ ಕೆಲಸವೆಂಬುದನ್ನು ನಾವು ಗಮನಿಸಬೇಕು.

- **ಪುಸ್ತಕ ಮಾರಾಟ ವಿಭಾಗಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳ ವಿವರ**

೧. ಶೇಕಡಾ ೨೫ ರಿಂದ ೫೦ ಕ್ಕೆ ಪುಸ್ತಕ ಮಾರಾಟ ರಿಯಾಯಿತಿ ಹೆಚ್ಚಿಸಿರುವುದು.

೨. ಶಾಲಾ ಕಾಲೇಜುಗಳ ಗ್ರಂಥಾಲಯಗಳಿಗೆ ಉಚಿತವಾಗಿ ೧೦೦ ರಿಂದ ೫೦೦ಗಳನ್ನು ನೀಡುತ್ತಿರುವುದು. ಇದರಿಂದ ಮಕ್ಕಳ ಓದಿಗೆ ತುಂಬಾ ಅನುಕೂಲವಾಗಿದೆ ಎಂದು ಶಿಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

೩. ನಕಲಿ ನೋಟು ಪತ್ತೆ ಯಂತ್ರ ಖರೀದಿ.

೪. ಸ್ಟ್ರೈಪಿಂಗ್ ಯಂತ್ರ ಅಳವಡಿಕೆ

೫. ರಾಜ್ಯದ ಗಡಿ ಶಾಲಾ ಕಾಲೇಜುಗಳಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪುಸ್ತಕ ದಾಸೋಹ ಯೋಜನೆಯಡಿ ಪರಿಷತ್ತು ಪ್ರಕಟಿಸಿದ (೨೦೦೦) ಪುಸ್ತಕಗಳನ್ನು ಉಚಿತವಾಗಿ ವಿತರಣೆ ಮಾಡಿದೆ.

೬. ಪುಸ್ತಕದ ಮಾರಾಟದ ತಂತ್ರಾಂಶವನ್ನು ಆಧುನೀಕರಣ ಗೊಳಿಸಲಾಗಿದೆ.

## ದಾಖಲೆ ನಿರ್ಮಿಸಿದ ಪುಸ್ತಕ ಮಾರಾಟ :

೨೦೧೬-೧೭ ಅವಧಿಯ ಒಂದು ವರ್ಷದ ಅವಧಿಯಲ್ಲಿ ಪುಸ್ತಕ ಮಾರಾಟ ವಿಭಾಗದಿಂದ ದಾಖಲೆ ಪುಸ್ತಕ ಮಾರಾಟವಾಗಿದ್ದು ಈ ಮಾರಾಟದಿಂದ ಬಂದ ಒಟ್ಟು ಮೊತ್ತ ರೂ. ೪೬,೪೨,೫೦೩-೦೦

- **ಸರಸ್ವತೀ ಭಂಡಾರದ ಕಾರ್ಯ ಸುಗಮವಾಗಿ ನಡೆಯಲು ಯೋಜನಾ ಸಿಬ್ಬಂದಿ ನೇಮಕ :**

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಅಧ್ಯಯನ ಮಾಡಿರುವ ೬ ಮಂದಿ ಅಭ್ಯರ್ಥಿಗಳನ್ನು ಮಹಿಳಾ ಪಾಲಿಟೆಕ್ನಿಕ್‌ನಿಂದ ಕಸಾಪ ಸರಸ್ವತೀ ಗ್ರಂಥಭಂಡಾರದ ತಾಂತ್ರಿಕ ಮತ್ತು ಇತರೆ ಕೆಲಸಕ್ಕಾಗಿ ಮೇ ೨೦೧೬ ರಿಂದ ನೇಮಕ ಮಾಡಿಕೊಳ್ಳಲಾಯಿತು. ಪುಸ್ತಕಗಳ ವಿಂಗಡಣೆ, ಮರುಜೋಡಣೆ, ವರ್ಗೀಕರಣ, ಭೌತಿಕ ತಪಾಸಣೆ ಕಾರ್ಯವನ್ನು ಮಾಡಿಸಲಾಗಿದೆ ಹಾಗೂ ಪರಿಶೀಲನಾ ಲೆಡ್ಜರ್‌ನಲ್ಲಿ ಇರುವ ದಾಖಲೆಗಳನ್ನು ಗಣಕಯಂತ್ರದಲ್ಲಿ ದಾಖಲಿಸಲಾಗುತ್ತಿದೆ.

* * * *

# ಡಾ. ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ

# ಹೊಸ ಸಲಹಾ ಸಮಿತಿಗಳ ಕಾರ್ಯ ಸಾಧನೆ

## ♦ ವಿವಿಧ ಸಲಹಾ ಸಮಿತಿಗಳ ನೇಮಕ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಲು ಹಾಗೂ ಹೊಸ ಹೊಸ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳುವ ಸಂಬಂಧವಾಗಿ ವಿವಿಧ ಸಲಹಾ ಸಮಿತಿಗಳನ್ನು ನೇಮಿಸಲಾಗಿದೆ. ಈ ಸಲಹಾ ಸಮಿತಿಗಳಿಗೆ ಮಾನ್ಯ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದು, ಪರಿಷತ್ತಿನ ಪದಾಧಿಕಾರಿಗಳು ಸದಸ್ಯರಾಗಿರುತ್ತಾರೆ.

## ೧) ಚುನಾವಣಾ ಸುಧಾರಣಾ ಹಾಗೂ ನಿಬಂಧನೆ ತಿದ್ದುಪಡಿ ಸಲಹಾ ಸಮಿತಿ

ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯ ಮತದಾರರ ಪಟ್ಟಿಯಲ್ಲಿರುವ ದೋಷಗಳನ್ನು ಸರಿಪಡಿಸುವಂತೆ ಸಾಹಿತಿಗಳ, ಸಾರ್ವಜನಿಕರ ಸಲಹೆ-ಸೂಚನೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಆಡಳಿತವನ್ನು ನಿಬಂಧನೆಗಳಿಗನುಗುಣವಾಗಿ ನಡೆಸುತ್ತಾ ಬಂದಿದ್ದು, ನೂರು ವಸಂತಗಳನ್ನು ಕಂಡ ಈ ಸಂಸ್ಥೆಯ ಆಡಳಿತಾತ್ಮಕವಾಗಿ ಸುಧಾರಣೆ ತರುವ ನಿಟ್ಟಿನಲ್ಲಿ ನಿಬಂಧನೆಗಳನ್ನು ಮಾರ್ಪಾಡು ಮಾಡಬೇಕಾಗಿರುತ್ತದೆ. "ಚುನಾವಣಾ ಸುಧಾರಣಾ ಹಾಗೂ ನಿಬಂಧನೆ ತಿದ್ದುಪಡಿ ಸಲಹಾ ಸಮಿತಿ"ಯನ್ನು ರಚಿಸಿ, ಕಾನೂನು ಹಾಗೂ ಆಡಳಿತಾತ್ಮಕವಾಗಿ ಅಪಾರ ಅನುಭವವಿರುವ ಈ ಕೆಳಕಂಡ ಮಹನೀಯರುಗಳನ್ನು ಗೌರವ ಸಂಚಾಲಕರನ್ನಾಗಿ ಹಾಗೂ ಸದಸ್ಯರನ್ನಾಗಿ ನೇಮಕ ಮಾಡಲಾಯಿತು.

೧. **ಶ್ರೀ ಎನ್.ಕೆ. ನಾರಾಯಣ,** ಗೌರವ ಸಂಚಾಲಕರು, (ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳು) ೨. ಶ್ರೀಮತಿ ಹೇಮಲತಾ ಮಹಿಷಿ, ಸದಸ್ಯರು (ವಕೀಲರು), ೩. ಶ್ರೀಮತಿ ಪ್ರಮೀಳಾ ನೇಸರ್ಗಿ, ಸದಸ್ಯರು (ವಕೀಲರು), ೪, ಶ್ರೀ ಎಸ್.ಟಿ. ಮೋಹನ್ ರಾಜು, ಸದಸ್ಯರು (ಮಾಜಿ ಚುನಾವಣಾಧಿಕಾರಿಗಳು, ಕ.ಸಾ.ಪ. ಚುನಾವಣೆ-೨೦೧೨), ೫. ಶ್ರೀ ಪಂಪಯ್ಯಶೆಟ್ಟಿ, ಸದಸ್ಯರು (ಪರಿಷತ್ತಿನ ಮಾಜಿ ಕಸಾಪ ಜಿಲ್ಲಾಧ್ಯಕ್ಷರು, ರಾಯಚೂರು), ೬ ಶ್ರೀ ಮಲ್ಲಿಕಾರ್ಜುನ ಯಂಡಿಗೇರಿ, ಸದಸ್ಯರು (ವಿಜಯಪುರ ಜಿಲ್ಲಾ ಕ.ಸಾ.ಪ., ಅಧ್ಯಕ್ಷರು)

ನಿವೃತ್ತ ವಿಶೇಷ ಜಿಲ್ಲಾಧಿಕಾರಿ ಶ್ರೀ ಎನ್. ಕೆ. ನಾರಾಯಣ ನೇತೃತ್ವದ ಚುನಾವಣಾ ಸುಧಾರಣಾ ಹಾಗೂ ನಿಬಂಧನೆ ತಿದ್ದುಪಡಿ ಸಲಹಾ ಸಮಿತಿ ಹಲವಾರು ಸಭೆಗಳನ್ನು ನಡೆಸಿ ಕೆಲ ತಿದ್ದುಪಡಿಗಳನ್ನು ಶಿಫಾರಸ್ಸು ಮಾಡಿದೆ. ಈ ಬಗ್ಗೆ ವಿಶೇಷ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಕ್ರಮಕೈಗೊಳ್ಳಲಾಗುವುದು.

## ೧) ಕನ್ನಡಿಗರಿಗೆ ಉದ್ಯೋಗ ಹಾಗೂ ವಿಜ್ಞಾನ ತಂತ್ರಜ್ಞಾನ ಸಮಿತಿ

ಕನ್ನಡ ಅನ್ನದ ಭಾಷೆಯಾಗಬೇಕೆಂಬ ಅಭಿಲಾಷೆ ಹಾಗೂ ಒತ್ತಾಯ ಅನೇಕ ದಿನಗಳದ್ದಾಗಿದೆ. ನಾಡಿನಾದ್ಯಂತ ಕನ್ನಡಪರ ಚಿಂತಕರು, ಹೋರಾಟಗಾರರು, ಕಾರ್ಯಕರ್ತರು ಈ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತು ಕೂಡ ಕೆಲಸ ಮಾಡಬೇಕೆಂದು ಅಪೇಕ್ಷಿಸುತ್ತಿದ್ದಾರೆ. ಇನ್ನೊಂದೆಡೆ ಬಹುರಾಷ್ಟ್ರೀಯ ಕಂಪನಿಗಳವರು ಸಿ ಮತ್ತು ಡಿ ಗ್ರೂಪ್ ನೌಕರಿಗೆ ಕನ್ನಡಿಗರು ಸಿಗುತ್ತಿಲ್ಲವೆಂದು ಹೇಳುವುದೂ ಇದೆ. ಕರ್ನಾಟಕದ ಗ್ರಾಮೀಣ ಹಾಗೂ ನಗರ ಪ್ರದೇಶದ ನಿರುದ್ಯೋಗಿ ಯುವಕ ಯುವತಿಯರಿಗೆ ಈ ಬಗ್ಗೆ ಅರಿವು ಮೂಡಿಸಬೇಕಿದೆ. ಕನ್ನಡ ಸಾಹಿತ್ಯ ಪರಿಷತ್ತು ನಿರುದ್ಯೋಗಿಗಳು ಹಾಗೂ ಉದ್ದಿಮೆ ಸಂಸ್ಥೆಗಳ ನಡುವೆ ಸಂಪರ್ಕ ಸೇತುವಾಗಿ ಕೆಲಸಮಾಡುವುದು ಅತೀ ಅವಶ್ಯವೆನಿಸಿದೆ. ಕೆಳದರ್ಜೆಯ ಉದ್ಯೋಗಗಳಾದರೂ ಸಂಪೂರ್ಣವಾಗಿ ಕರ್ನಾಟಕದವರಿಗೇ ದೊರಕಬೇಕೆಂಬುದು ಕನ್ನಡ ಸಾಹಿತ್ಯ ಪರಿಷತ್ತಿನ ಆಶಯವಾಗಿದೆ.

ಈ ಸಂಬಂಧ ಕಾರ್ಯಕ್ರಮಗಳನ್ನು ರೂಪಿಸಲು ಹಾಗೂ ಮಾರ್ಗದರ್ಶನ ಮಾಡಲು ಕನ್ನಡಿಗರಿಗೆ ಉದ್ಯೋಗ ಹಾಗೂ ವಿಜ್ಞಾನ ತಂತ್ರಜ್ಞಾನ ಸಮಿತಿಯನ್ನು ರಚಿಸಿ, ಈ ಕೆಳಕಂಡವರನ್ನು ಸಂಚಾಲಕರನ್ನಾಗಿ ಹಾಗೂ ಸದಸ್ಯರನ್ನಾಗಿ ನೇಮಕ ಮಾಡಿದೆ.

**ಸಂಚಾಲಕರು : ಶ್ರೀ ಎಸ್.ಆರ್. ವಿಜಯಶಂಕರ್,** ಉಪಾಧ್ಯಕ್ಷರು, ಇಂಟೆಲ್, ಬೆಂಗಳೂರು, ಸಹ ಸಂಚಾಲಕರು: ಶ್ರೀಮತಿ ಕಾಂತಿಶೆಟ್ಟಿ, ವ್ಯವಸ್ಥಾಪಕ ನಿರ್ದೇಶಕರು, ಏರ್‌ಕಾಂ ಸಲ್ಯೂಷನ್ಸ್, ಬೆಂಗಳೂರು, ಸದಸ್ಯರುಗಳು : ಶ್ರೀ ಅನಂತ್ ಕೊಪ್ಪರ, ಸಿಎಂಡಿ, ಕೆ೨ಕೆ ಟೆಕ್ನಾಲಜೀ, ಬೆಂ., ಡಾ. ಪವನಜ, ಕನ್ನಡ ಮಾಹಿತಿ ತಂತ್ರಜ್ಞಾನ ತಜ್ಞರು, ಬೆಂ., ಶ್ರೀ ಅರುಣಕುಮಾರ ಖನ್ನೂರ, ಕನ್ನಡ ಮಾಹಿತಿ ತಂತ್ರಜ್ಞಾನ ತಜ್ಞರು, ಬೆಂಗಳೂರು, ಶ್ರೀ ಕೈವಾರ ಶ್ರೀನಿವಾಸ್, ಜಿಲ್ಲಾ ಕಸಾಪ ಅಧ್ಯಕ್ಷರು, ಚಿಕ್ಕಬಳ್ಳಾಪುರ ಶ್ರೀ ಸುರೇಶ ಚನಶೆಟ್ಟಿ, ಜಿಲ್ಲಾ ಕಸಾಪ ಅಧ್ಯಕ್ಷರು, ಬೀದರ್, ಶ್ರೀ

ಶ್ರೀಧರ್, ಕರ್ನಾಟಕ ಕೈಗಾರಿಕೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿದ ಉದ್ಯೋಗ ಪೋರ್ಟಲ್‌ಗೆ ದಿ. ೩೦-೧೦-೨೦೧೭ರವರೆಗೆ ೩೦೦೦ (ಮೂರು ಸಾವಿರ) ಅರ್ಜಿಗಳು ಬಂದಿವೆ. ವಿಪ್ರೊ. ಇನ್‌ಫೋಸಿಸ್, ಕಿರ್ಲೋಸ್ಕರ್, ಟೊಯೊಟಾ, ಬೈಯೊಕಾನ್, ಬಾಷ್, ಮನಿಪಾಲ್ ಗ್ರೂಪ್, ಓಲ್ವೊ, ಕೆನ್ನಮೆಟಲ್, ಅಲ್ಟ್ರಾಟೆಕ್, ಇನ್‌ಟೆಲ್, ಬ್ರಿಟಾನಿಯಾ, ಎಬಿಬಿ, ಆ್ಯಕ್‌ಸೆನ್ಚರ್, ಐಬಿಎಂ, ಗೋಕುಲ್‌ದಾಸ್, ನಿಪ್ಪಾನ್, ಇಂಡೊ ನಿಶಿನ್, ಹೆಚ್.ಟಿ.ಎಲ್., ಟಿಎನ್‌ಟಿ, ಮೈಯಾಸ್, ಬಿಪಿಎಲ್, ಬ್ರಿಗೇಡ್ ಮುಂತಾದವು ಸೇರಿದಂತೆ ಒಟ್ಟು ೪೭೫ ಕಂಪನಿಗಳಿಗೆ ಈ ಅರ್ಜಿಗಳನ್ನು ರವಾನಿಸಲಾಗಿದೆ. ಟೊಯೊಟಾ ಕಂಪನಿಯ ಮುಖ್ಯಸ್ಥರು ಕನ್ನಡಿಗರಿಗೆ ಹೆಚ್ಚು ಉದ್ಯೋಗ ನೀಡಿರುವುದಾಗಿ ಪತ್ರ ಬರೆದೂ ತಿಳಿಸಿದ್ದಾರೆ.

### ೧೦) ಗಡಿ ಪ್ರದೇಶಗಳ ಸ್ಥಿತಿಗತಿ ಅಧ್ಯಯನ ಸಮಿತಿ

ಕರ್ನಾಟಕ-ಆಂಧ್ರ ಗಡಿಭಾಗದ ಒಟ್ಟಾರೆ ಸ್ಥಿತಿಗತಿ ಅರಿಯಲು ಹಾಗೂ ಆ ಮೂಲಕ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸಲಹೆ ನೀಡುವುದಕ್ಕಾಗಿ **ಗಡಿ ಪ್ರದೇಶಗಳ ಸ್ಥಿತಿಗತಿ ಅಧ್ಯಯನ ಸಮಿತಿಯನ್ನು ರಚಿಸಲಾಗಿತ್ತು.**

೧. ಡಾ. ಕುಂ. ವೀರಭದ್ರಪ್ಪ, ಅಧ್ಯಕ್ಷರು, ಗಡಿ ಪ್ರದೇಶಗಳ ಸ್ಥಿತಿಗತಿ ಅಧ್ಯಯನ ಸಮಿತಿ

೨. ಡಾ. ಬಸವಪ್ರಭು ಪಾಟೀಲ ಬೆಟ್ಟದೂರು, ಅಧ್ಯಕ್ಷರು, ರಾಯಚೂರು ಜಿಲ್ಲಾ ಕ.ಸಾ.ಪ.

೩. ಶ್ರೀ ಸಿದ್ರಾಮ ಕಲ್ಮಠ, ಅಧ್ಯಕ್ಷರು, ಬಳ್ಳಾರಿ ಜಿಲ್ಲಾ ಕ.ಸಾ.ಪ.

೪. ಶ್ರೀಮತಿ ಬಾ.ಹ. ರಮಾಕುಮಾರಿ, ಅಧ್ಯಕ್ಷರು, ತುಮಕೂರು ಜಿಲ್ಲಾ ಕ.ಸಾ.ಪ.

೫. ಪ್ರೊ, ಹೆಚ್.ಬಿ. ಶಿವಕುಮಾರ್, ಅಧ್ಯಕ್ಷರು, ಆಂಧ್ರಪ್ರದೇಶ ಗಡಿನಾಡ ಘಟಕ ಕ.ಸಾ.ಪ. ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರ ಸೂಚನೆ ಮೇರೆಗೆ ಗಡಿಪ್ರದೇಶಗಳ ಸ್ಥಿತಿಗತಿ ಅಧ್ಯಯನ ಸಮಿತಿಯ ಅಧ್ಯಕ್ಷರಾದ ಡಾ. ಕುಂ. ವೀರಭದ್ರಪ್ಪ ನವರು ಆಂಧ್ರಪ್ರದೇಶದ ಗಡಿಭಾಗಗಳಿಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಪಟ್ಟಿಮಾಡಿ ವರದಿಯನ್ನು ನೀಡಿದ್ದಾರೆ".

### ಡಾ. ಕುಂ. ವೀರಭದ್ರಪ್ಪನವರ ವರದಿ

ವರದಿಯ ಮುಖ್ಯಾಂಶಗಳು ಈ ರೀತಿ ಇವೆ.

೧. "ಆಂಧ್ರಪ್ರದೇಶದಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ತಮ್ಮ ಮುಂದಿನ ವ್ಯಾಸಂಗಕ್ಕಾಗಿ ಕರ್ನಾಟಕದಲ್ಲಿ ಕನ್ನಡ ಮಕ್ಕಳಿಗೆ ಕಲ್ಪಿಸುವ ಸೌಲಭ್ಯಗಳನ್ನು ಕಲ್ಪಿಸಬೇಕು.

೨. ಹೆಚ್ಚುವರಿ ಶಿಕ್ಷಣ ಅಂದರೆ ಡಿಎಡ್, ಬಿಎಡ್, ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣ ಪಡೆಯಲು ಬಯಸುವ ಹಕ್ಕು ಹಾಗೂ ಮೀಸಲಾತಿ ಸೌಲಭ್ಯಗಳನ್ನು ಆಂಧ್ರದ ಕನ್ನಡ ವಿದ್ಯಾರ್ಥಿಗಳಿಗೂ ವಿಸ್ತರಿಸಬೇಕು. ೩. ಸನಿಹದ ಬಳ್ಳಾರಿಯಲ್ಲಿ ವಿದ್ಯಾಭ್ಯಾಸ ಮಾಡುವ ಆಂಧ್ರದ ಕನ್ನಡ ವಿದ್ಯಾರ್ಥಿಗಳಿಗೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಿಗೆ ಸಂಬಂಧಿಸಿದ ಉಚಿತ ಪಾಸುಗಳನ್ನು ಒದಗಿಸಬೇಕು.

೪. ಕರ್ನಾಟಕದ ಗಡಿಪ್ರದೇಶದ ಜಿಲ್ಲಾ ಕೇಂದ್ರಗಳಲ್ಲಿರುವ ಹಾಸ್ಟೆಲ್‌ಗಳಲ್ಲಿ ಆಂಧ್ರದ ಕನ್ನಡ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಸೌಲಭ್ಯ ಕಲ್ಪಿಸಬೇಕು.

೫. ಅಲ್ಲದೆ ಹೊರನಾಡ ಕನ್ನಡ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮಂಜೂರು ಮಾಡಬೇಕು.

೬. ಗೂಳ್ಯಂ ಗ್ರಾಮಗಳಲ್ಲಿ ಕನ್ನಡ ಗ್ರಂಥಾಲಯ ಸ್ಥಾಪಿಸಬೇಕು.

೭. ಉನ್ನತ ವ್ಯಾಸಂಗಕ್ಕಾಗಿ ಕರ್ನಾಟಕ ರಾಜ್ಯದ ನಗರಗಳಿಗೆ ತೆರಳುವ ಇಲ್ಲಿನ ವಿದ್ಯಾರ್ಥಿಗಳಿಗೆ ಅಲ್ಲಿನ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಹಾಗೂ ಅಧಿಕಾರಿಗಳು ಕರ್ನಾಟಕದ ದಾಖಲೆಗಳು ಬೇಕೆಂದು ಪಟ್ಟು ಹಿಡಿಯದೆ ಆಂಧ್ರದ ದಾಖಲೆಗಳಿಗೆ ಮಾನ್ಯತೆ ನೀಡಬೇಕು.

೮. ಆಂಧ್ರಪ್ರದೇಶದಲ್ಲಿನ ಶಾಲೆಗಳಲ್ಲಿ ಒಂದರಿಂದ ಹತ್ತನೆ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗಕ್ಕಾಗಿ ಮಾಡಿದ ವಿದ್ಯಾರ್ಥಿಗಳಿಗೆ ಕರ್ನಾಟಕದ ಶೈಕ್ಷಣಿಕ ವ್ಯವಸ್ಥೆಯಲ್ಲೂ ಹಾಗೆ ಉದ್ಯೋಗಕ್ಕೆ ಸಂಬಂಧಿಸಿದಂತೆ ಶೇಕಡಾ ಐದರಷ್ಟು ಮೀಸಲಾತಿ ಕಲ್ಪಿಸಬೇಕು"- ಇತ್ಯಾದಿ ಬೇಡಿಕೆಗಳಿವೆ.

ಗಡಿಪ್ರದೇಶಗಳಲ್ಲಿ ಕನ್ನಡದ ಸ್ಥಿತಿಗತಿಯನ್ನು ಪರಿಶೀಲನೆ ಮಾಡಿ ಡಾ. ಕುಂ. ವೀರಭದ್ರಪ್ಪನವರು ಮೌಲಿಕ ವರದಿಯನ್ನು ನೀಡಿದ್ದಾರೆ. ಈ ವರದಿಯಲ್ಲಿನ ಮೇಲ್ಕಂಡ ಅಂಶಗಳ ಬಗ್ಗೆ ಶೀಘ್ರವಾಗಿ ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟ ಇಲಾಖಾ ಸಚಿವರುಗಳಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರು ಪತ್ರ ಬರೆದು ಕೋರಿದ್ದರಿಂದ ಸರ್ಕಾರ ಈ ಕೆಳಗಿನಂತೆ ಸ್ಪಂದಿಸಿದೆ.

♦ **ಸರಕಾರದ ಸ್ಪಂದನ**

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಯತ್ನಕ್ಕೆ ರಾಜ್ಯ ಸರಕಾರ ಸ್ಪಂದಿಸಿದ್ದು, (ಸುತ್ತೋಲೆ ಸಂಖ್ಯೆ : ಸಿಆಸುಇ೬೯೬ಸೆನೆನಿ೨೦೧೬ / ದಿನಾಂಕ ೦೬-೦೭-೨೦೧೭. ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು), ಒಂದನೆಯ ತರಗತಿಯಿಂದ ಎಸ್.ಎಸ್.ಎಲ್.ಸಿ.ಯವರೆಗೆ ಕನ್ನಡ ಮಾಧ್ಯಮ ಶಿಕ್ಷಣ ಪೂರೈಸಿದ ದೇಶದ ಯಾವುದೇ ಭಾಗದ ಅಭ್ಯರ್ಥಿಗಳಿಗೆ ಸರಕಾರದ ನೇರ ನೇಮಕಾತಿಯಲ್ಲಿ ಪ್ರತಿಶತ ೫ ರಷ್ಟು ಮೀಸಲಾತಿ ಕಲ್ಪಿಸಿ ಆದೇಶ ಹೊರಡಿಸಿದೆ. ಇದು ಕನ್ನಡ ಸಾಹಿತ್ಯ ಪರಿಷತ್ತಿನ ಅವಿರತ ಹೋರಾಟದ ಫಲ ಎಂದು ಹೇಳಿಕೊಳ್ಳುವುದಕ್ಕೆ ಸಂತಸವಾಗುತ್ತದೆ. ಇದರಿಂದ ಹೊರನಾಡ ಹಾಗೂ ಗಡಿನಾಡಿನ ಅಭ್ಯರ್ಥಿಗಳಿಗೆ ಈ ಮೀಸಲಾತಿಯಿಂದ ಹೆಚ್ಚು ಅನುಕೂಲವಾಗಲಿದೆ. ಕನ್ನಡ ಸಾಹಿತ್ಯ ಪರಿಷತ್ತು ಈ ಕುರಿತು ರಾಯಚೂರಿನಲ್ಲಿ ಜರುಗಿದ ೮೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ ಮಂಡಿಸಿತ್ತು. ಇದಕ್ಕೆ ಬೆಂಬಲ ನೀಡಿದ ಕನ್ನಡಪರ ಹೋರಾಟಗಾರರು ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಹಿಂದಿನ ಅಧ್ಯಕ್ಷರಾದ ಡಾ. ಬರಗೂರು ರಾಮಚಂದ್ರಪ್ಪನವರನ್ನು ಹಾಗೂ ಹಾಲಿ ಅಧ್ಯಕ್ಷರಾದ ಪ್ರೊ. ಎಸ್.ಜಿ.ಸಿದ್ಧರಾಮಯ್ಯ ಅವರನ್ನು ಇಲ್ಲಿ ನೆನೆಯಬಯಸುತ್ತೇನೆ.

* * * *

## ಸರ್ಕಾರಕ್ಕೆ ಸಲ್ಲಿಸಲಾದ ಮನವಿ, ಪ್ರಸ್ತಾವನೆ, ಒತ್ತಾಯಗಳು ಹಾಗೂ ದೊರೆತ ಸ್ಪಂದನೆ

♦ **ಸರ್ಕಾರ ನೀಡುವ ವಿವಿಧ ಪ್ರತಿಷ್ಠಿತ ಪ್ರಶಸ್ತಿಗಳ ಆಯ್ಕೆಸಮಿತಿಗೆ ಪರಿಷತ್ತಿನ ಅಧ್ಯಕ್ಷರನ್ನು ಸದಸ್ಯರನ್ನಾಗಿ ನೇಮಿಸಿಕೊಳ್ಳುವಂತೆ ಸಚಿವರಿಗೆ ಒತ್ತಾಯ.**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಪ್ರತಿವರ್ಷ ಕೊಡಮಾಡುವ ವಿವಿಧ ಪ್ರತಿಷ್ಠಿತ ಪ್ರಶಸ್ತಿಗಳ ಆಯ್ಕೆ ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಸದಸ್ಯರಾಗಿರುತ್ತಿದ್ದರು. ದುರದೃಷ್ಟಕರ ಸಂಗತಿಯೆಂದರೆ, ೨೦೧೫ನೇ ಸಾಲಿನಿಂದ ಪಂಪ, ಅತ್ತಿಮಬ್ಬೆ ಕನಕಶ್ರೀ,

ಕುಂದಣಗಾರ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ಆಯ್ಕೆ ಸಮಿತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಕೈಬಿಡಲಾಗಿತ್ತು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕಳೆದೆರಡು ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಸದಸ್ಯರನ್ನಾಗಿ ಆಹ್ವಾನಿಸಲಾಗುತ್ತಿತ್ತು. ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರತಿಷ್ಠಿತ ಪ್ರಶಸ್ತಿಗಳ ಆಯ್ಕೆ ಸಮಿತಿಯಿಂದ ಹೊರಗಿಡುವುದು ಸೂಕ್ತವಾದ ನಿರ್ಧಾರವಲ್ಲ. ಇಲಾಖೆ ತನ್ನ ನಿರ್ಧಾರವನ್ನು ಬದಲಿಸಿಕೊಳ್ಳಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀಮತಿ ಉಮಾಶ್ರೀ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದರು. ನಂತರ ಕಸಾಪ ಅಧ್ಯಕ್ಷರನ್ನು ಸದಸ್ಯರನ್ನಾಗಿ ನೇಮಕಗೊಳಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿತು.

### ♦ ಪರಿಷತ್ತಿನ ಕಾರ್ಯಚಟುವಟಿಕೆಗಳ ಬಗ್ಗೆ ರೂಪುರೇಷೆಗಳನ್ನು ಹಾಕಿಕೊಳ್ಳುವ ಬಗ್ಗೆ ಗಣ್ಯರ ಸಲಹೆ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಡಾ. ಮನು ಬಳಿಗಾರ್ ಅವರು ಜವಾಬ್ದಾರಿ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ, ಈ ಸಂಸ್ಥೆಯ ಮುಂದಿನ ಮೂರು ವರ್ಷಗಳ ಕಾರ್ಯಚಟುವಟಿಕೆಗಳ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸುವ ಸಂಬಂಧ ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಅಪಾರ ಸೇವೆ ಸಲ್ಲಿಸಿರುವ ಪರಿಷತ್ತಿನ ಹಿಂದಿನ ಅಧ್ಯಕ್ಷರುಗಳ, ಸಾಹಿತ್ಯ ಸಮ್ಮೇಳನಾಧ್ಯಕ್ಷರುಗಳ, ಗಣ್ಯ ಸಾಹಿತಿಗಳ, ಅಕಾಡೆಮಿ/ಪ್ರಾಧಿಕಾರಗಳ ಅಧ್ಯಕ್ಷರುಗಳ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಗಣ್ಯ ವ್ಯಕ್ತಿಗಳ ಹಾಗೂ ಕನ್ನಡಪರ ಹೋರಾಟಗಾರರ ಸಲಹೆ ಸೂಚನೆಗಳನ್ನು ಪಡೆಯಲು ದಿನಾಂಕ ೧೦-೦೪-೨೦೧೬ ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಹಿರಿಯ ಸಂಶೋಧಕರಾದ ಡಾ. ಎಂ. ಚಿದಾನಂದಮೂರ್ತಿ, ವಿದ್ವಾಂಸರುಗಳಾದ ಶ್ರೀ ಟಿ.ವಿ. ವೆಂಕಟಾಚಲಶಾಸ್ತ್ರಿ, ಡಾ. ಎ.ವಿ. ನಾವಡ, ಡಾ. ಎನ್.ಎಸ್. ತಾರಾನಾಥ್, ಶ್ರೀ ಸತ್ಯನಾರಾಯಣ ರಾವ್ (ಸತ್ಯ ವಿಠ್ಠಲ), ಮೈಸೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ. ಕೆ. ಚಿದಾನಂದಗೌಡ, ಗಣಕತಜ್ಞರಾದ ಡಾ. ಯು.ಬಿ. ಪವನಜ, ಶ್ರೀ ಜಿ.ಎನ್. ನರಸಿಂಗಮೂರ್ತಿ, ಸಾಹಿತಿಗಳಾದ ಡಾ. ಸಿದ್ಧಲಿಂಗಯ್ಯ, ಶ್ರೀ ಮಸ್ತಕಮನೆ ಹರಿಹರಪ್ರಿಯ, ಪ್ರೊ.

ಚಂದ್ರಶೇಖರ ಪಾಟೀಲ, ಪ್ರೊ ಎಸ್.ಜಿ. ಸಿದ್ದರಾಮಯ್ಯ, ಪ್ರೊ. ಅರವಿಂದ ಮಾಲಗತ್ತಿ, ಪ್ರೊ ಜಿ.ಎಸ್. ಸಿದ್ದಲಿಂಗಯ್ಯ, ಶ್ರೀ ಶೂದ್ರ ಶ್ರೀನಿವಾಸ, ಡಾ. ಶ್ರೀಕಂಠ ಕೂಡಿಗೆ, ಪ್ರೊ, ಅಲ್ಲಮಪ್ರಭು ಬೆಟ್ಟದೂರು, ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಡಾ. ದೊಡ್ಡರಂಗೇಗೌಡ, ಡಾ. ಪ್ರಧಾನ ಗುರುದತ್, ಡಾ. ಸಿ.ಪಿ. ಕೃಷ್ಣಕುಮಾರ್, ಎಚ್.ಎಸ್.ಎಂ. ಪ್ರಕಾಶ, ಡಾ. ಬೈರಮಂಗಲ ರಾಮೇಗೌಡ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ಮಾಲತಿ ಪಟ್ಟಣಶೆಟ್ಟಿ, ಕೃಷಿ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಪದ್ಮಭೂಷಣ ಪ್ರೊ, ಎಂ. ಮಹದೇವಪ್ಪ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಮಲ್ಲಿಕಾ ಘಂಟಿ, ಮಾಜಿ ಸಚಿವರು ಹಾಗೂ ಸಾಹಿತಿಗಳಾದ ಡಾ. ಬಿ.ಟಿ. ಲಲಿತಾ ನಾಯಕ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಮುಖ್ಯಮಂತ್ರಿ ಚಂದ್ರು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ಕೇಶವಮೂರ್ತಿ, ರಂಗಕರ್ಮಿ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ. ವಸುಂಧರಾ ಭೂಪತಿ, ಕನ್ನಡ ಚಳವಳಿ ಹೋರಾಟಗಾರ ಶ್ರೀ ಗುರುದೇವ ನಾರಾಯಣ ಕುಮಾರ, ಭಾರತೀಯ ಭಾಷಾ ಅತ್ಯುನ್ನತ ಸಂಸ್ಥೆಯ ಯೋಜನಾ ನಿರ್ದೇಶಕರಾದ ಪ್ರೊ. ಪಿ.ಕೆ. ಖಂಡೋಬಾ, ಸಂಘಟಕರಾದ ಶ್ರೀ ಶಂಕರನಾರಾಯಣ ಅವರುಗಳು ಸಭೆಯಲ್ಲಿ ಭಾಗವಹಿಸಿ ಕನ್ನಡ ಸಾಹಿತ್ಯ ಪರಿಷತ್ತು ಮುಂದಿನ ಮೂರು ವರ್ಷಗಳ ಕಾಲ ನಡೆಸಬಹುದಾದ ಕಾರ್ಯಚಟುವಟಿಕೆಗಳ ಬಗ್ಗೆ ತಮ್ಮ ಅಭಿಪ್ರಾಯ, ಸಲಹೆ, ಸೂಚನೆಗಳನ್ನು ನೀಡಿದರು.

- **ಕನ್ನಡದಲ್ಲಿ ರಾಷ್ಟ್ರೀಯ ಅರ್ಹತಾ ಪರೀಕ್ಷೆ(ನೀಟ್) ಬರೆಯಲು ಅವಕಾಶ ಕಲ್ಪಿಸಲು ಕ್ರಮಕೈಗೊಳ್ಳಲು ಕೇಂದ್ರ ಸಚಿವರಿಗೆ ಒತ್ತಾಯ**

ವೈದ್ಯ ಮತ್ತು ದಂತ ವೈದ್ಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆ(ನೀಟ್)ಗೆ ಮುಂದಿನ ಶೈಕಣಿಕ ವರ್ಷದಿಂದ ಆರು ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಕೇಂದ್ರ ಸರ್ಕಾರವು ಅನುವುಮಾಡಿ ಕೊಡುವುದಾಗಿ ಘೋಷಿಸಿರುವುದು ಸರಿಯಷ್ಟೆ. ಸುದೀರ್ಘ ಇತಿಹಾಸವಿರುವ ಕನ್ನಡ ಭಾಷೆಗೆ ಪರೀಕ್ಷೆ ಬರೆಯಲು ಆದ್ಯತೆ ನೀಡಿರುವ ಆ ಆರು ಪ್ರಾದೇಶಿಕ ಭಾಷೆಗಳಲ್ಲಿ ಸ್ಥಾನ ನೀಡದಿರುವುದು ಬಹಳ ವಿಷಾದನೀಯ ಸಂಗತಿ.

ಕಳೆದ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾ ೭೦ ರಷ್ಟು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಉತ್ತೀರ್ಣ ರಾಗಿದ್ದಾರೆ. ಕನ್ನಡ ಭಾಷೆಯಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಅಳವಡಿಸಬೇಕೆಂದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾದ ಶ್ರೀ ಪ್ರಕಾಶ್ ಜಾವ್ಡೇಕರ್ ಅವರಿಗೆ ಪತ್ರ ಬರೆದು ಒತ್ತಾಯಿಸಲಾಯಿತು. ಅದರಂತೆ ಈಗ ಕೇಂದ್ರ ಸರ್ಕಾರ ಇದಕ್ಕೆ ಒಪ್ಪಿಗೆ ನೀಡಿದೆ.

- **ರಾಜ್ಯದ ಪ್ರಥಮ ಐಐಐಟಿ ರಾಯಚೂರಿನಲ್ಲಿ ಸ್ಥಾಪನೆ : ಕೇಂದ್ರ ಸರ್ಕಾರಕ್ಕೆ ಅಭಿನಂದನೆ**

ಭಾರತೀಯ ಮಾಹಿತಿ ಮತ್ತು ತಾಂತ್ರಿಕ ವಿಜ್ಞಾನ ಸಂಸ್ಥೆ (ಐಐಐಟಿ)ಯನ್ನು ರಾಯಚೂರು ಜಿಲ್ಲೆಯಲ್ಲಿ ಸ್ಥಾಪಿಸುವುದಾಗಿ ಅಧಿಕೃತ ಘೋಷಣೆ ಹೊರಡಿಸಿರುವ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾದ ಶ್ರೀ ಪ್ರಕಾಶ್ ಜಾವಡೇಕರ್ ಅವರಿಗೂ ಹಾಗೂ ರಾಜ್ಯಕ್ಕೆ ಐಐಐಟಿ ತರುವಲ್ಲಿ ಯಶಸ್ವಿ ಪಾತ್ರವಹಿಸಿದ ಕೇಂದ್ರ ರಸಾಯನಿಕ, ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಖಾತೆಯ ಸಚಿವರಾದ ಶ್ರೀ ಅನಂತಕುಮಾರ್ ಅವರಿಗೂ ಸಮಗ್ರ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ಅಭಿನಂದನೆ ಸಲ್ಲಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತು ೨೦೧೬ರ ಅಕ್ಟೋಬರ್ ೮ ಮತ್ತು ೯ ರಂದು ಎರಡು ದಿನಗಳ ಕಾಲ ದೆಹಲಿಯಲ್ಲಿ ಮೊದಲ ಬಾರಿಗೆ ಆಯೋಜಿಸಿದ್ದ "ಹೊರನಾಡ ಕನ್ನಡಿಗರ ಪ್ರಥಮ ರಾಷ್ಟ್ರೀಯ ಸಮಾವೇಶ'ದಲ್ಲಿ ಐಐಐಟಿ ಸ್ಥಾಪಿಸುವ ಬಗ್ಗೆ ನಿರ್ಣಯ ಕೈಗೊಂಡು ಕೇಂದ್ರ ರಸಾಯನಿಕ, ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಖಾತೆಯ ಸಚಿವರಾದ ಶ್ರೀ ಅನಂತಕುಮಾರ್ ಅವರಿಗೆ ಮನವಿ ಸಲ್ಲಿಸಿತ್ತು. ಈಗ ಆ ಬೇಡಿಕೆ ಈಡೇರಿದೆ. ಇದಕ್ಕಾಗಿ ಮಾನ್ಯ ಅಧ್ಯಕ್ಷರು ಅಭಿನಂದನೆಗಳನ್ನು ಸಲ್ಲಿಸಿದರು.

- **ಹೊರನಾಡ ವಿಶ್ವವಿದ್ಯಾನಿಲಯ ಹಾಗೂ ಗಡಿನಾಡ ಕನ್ನಡ ಶಾಲೆಗಳಿಗೆ ಕ.ಸಾ.ಪ. ವತಿಯಿಂದ ಪುಸ್ತಕ ಕೊಡುಗೆ**

ಹೊರನಾಡ ವಿಶ್ವವಿದ್ಯಾನಿಲಯಗಳಿಗೆ ಹಾಗೂ ಗಡಿನಾಡ ಕನ್ನಡ ಶಾಲೆಗಳಿಗೆ ಕನ್ನಡ ಪುಸ್ತಕಗಳನ್ನು ಉಚಿತವಾಗಿ ನೀಡುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ "ಪುಸ್ತಕ ದಾಸೋಹ'

ಯೋಜನೆಗೆ, ಕನ್ನಡ ಸಾಹಿತ್ಯ ಪರಿಷತ್ತು ಕೈ ಜೋಡಿಸಿದ್ದು, ಪರಿಷತ್ತು ಪ್ರಕಟಿಸಿರುವ ಎಲ್ಲ ಪುಸ್ತಕಗಳನ್ನು ಉಚಿತವಾಗಿ ನೀಡುವುದರ ಮೂಲಕ ಆ ಯೋಜನೆಗೆ ಸಂಪೂರ್ಣ ಸಹಕಾರ ನೀಡಿತು. ಈ ಸಂಬಂಧವಾಗಿ ದಿನಾಂಕ ೦೪-೦೧-೨೦೧೭ ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಾನ್ಯ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಪರಿಷತ್ತಿನ ಪ್ರಕಟಣೆಯ ೩೦೦೦ ಪುಸ್ತಕಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರಿಗೆ ಹಸ್ತಾಂತರಿಸಿದರು.

**♦ ಸಮಾನ ಶಿಕ್ಷಣ ನೀತಿಯ ಜಾರಿಗೆ ತರಲು ಹಾಗೂ ಹೊರನಾಡ ಕನ್ನಡಿಗರಿಗೆ ಒದಗಿಸಬೇಕಾದ ಸೌಲಭ್ಯಗಳನ್ನು ನೀಡಲು ಒತ್ತಾಯ**

ಸಮಾನ ಶಿಕ್ಷಣ ನೀತಿಯನ್ನು ಜಾರಿಗೆ ತರಬೇಕೆಂಬುದು ಕರ್ನಾಟಕದ ಜನ ಸಾಮಾನ್ಯರ ಮತ್ತು ನೈಜ ಶಿಕ್ಷಣವೇತ್ತರ ಬಹುದಿನದ ಬೇಡಿಕೆಯಾಗಿದೆ. ೨೦೧೬ರ ಡಿಸೆಂಬರ್ ೨, ೩ ಮತ್ತು ೪ ರಂದು ರಾಯಚೂರಿನಲ್ಲಿ ನಡೆದ ೮೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು **೧) ಕರ್ನಾಟಕ ಸರ್ಕಾರವು ಸಮಾನ ಶಿಕ್ಷಣ ನೀತಿಯನ್ನು ರೂಪಿಸಿ ಜಾರಿಗೆ ತರಬೇಕು. ೨) ಕರ್ನಾಟಕದೊಳಗೆ ಇರುವ ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ ಸಿಗುತ್ತಿರುವ ಶೈಕ್ಷಣಿಕ ಮತ್ತು ಉದ್ಯೋಗ ಸಂಬಂಧಿ ಸೌಲಭ್ಯಗಳು ಹೊರನಾಡ ಕನ್ನಡಿಗರಿಗೂ ಸಿಗಬೇಕು** ಎಂದು ನಿರ್ಣಯವನ್ನು ಸ್ವೀಕರಿಸಿದೆ.

ಈ ಸಂಬಂಧವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಹಾಗೂ ೮೨ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಅವರು ದಿನಾಂಕ ೦೩-೦೩-೨೦೧೭ ರಂದು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರನ್ನು ಭೇಟಿ ಮಾಡಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮೇಲ್ಕಂಡ ನಿರ್ಣಯವನ್ನು ಜಾರಿಗೊಳಿಸುವ ಹಾಗೂ ಹೊರನಾಡ ಕನ್ನಡಿಗರಿಗೆ ಸೌಲಭ್ಯಗಳನ್ನು ಒದಗಿಸುವ ಕಾರ್ಯಯೋಜನೆಯನ್ನು ಸೇರಿಸುವಂತೆ ಒತ್ತಾಯಿಸಿ ಮನವಿಯನ್ನು ನೀಡಿದರು. ಮಾನ್ಯ ಸಚಿವರು ತಾತ್ವಿಕವಾಗಿ ಇದಕ್ಕೆ ಒಪ್ಪಿದರು ಹಾಗೂ ಇದನ್ನು ಕಾರ್ಯರೂಪಕ್ಕೆ ತರಲು ಮುಂಬರುವ ಬಜೆಟ್‌ನಲ್ಲಿ ಅಳವಡಿಸಿಕೊಳ್ಳಲು ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. **ಡಾ. ಮನು ಬಳಿಗಾರ್ ಮತ್ತು ನಾಡೋಜ ಪ್ರೊ. ಬರಗೂರು**

**ರಾಮಚಂದ್ರಪ್ಪ** ಅವರು ಮಾನ್ಯ ಮುಖ್ಯಮಂತ್ರಿಗಳನ್ನು ದಿನಾಂಕ ೦೧-೦೩-೨೦೧೭ರಂದು ಭೇಟಿ ಮಾಡಿ ಅವರನ್ನೂ ಈ ಬಗ್ಗೆ ವಿನಂತಿಸಿದ್ದರು.

ಕನ್ನಡ ಸಾಹಿತ್ಯ ಪರಿಷತ್ತು ೮೨ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತಿಯಾಗುವತ್ತ ಹೆಜ್ಜೆ ಇಟ್ಟಿದೆ. ನಿಂತು ಹೋಗಿರುವ ರಾಷ್ಟ್ರಕವಿ ಪುರಸ್ಕಾರವನ್ನು ಮತ್ತೆ ಕೊಡಬೇಕೆಂದು, ಸಮಾನ ಶಾಲಾ ಶಿಕ್ಷಣ ನೀತಿಯನ್ನು ಜಾರಿಗೆ ತರಬೇಕೆಂದು, ಒಳಾಡಿನ ಕನ್ನಡಿಗರಿಗೆ ಸಿಗುವ ಸೌಲಭ್ಯಗಳನ್ನು ಕನ್ನಡ ಮಾಧ್ಯಮದಲಿ ಓದಿದ ಹೊರನಾಡ ವಿದ್ಯಾರ್ಥಿಗಳಿಗೂ ದೊರಕಿಸಿಕೊಡುವಂತೆ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಡಾ. ಬರಗೂರು ರಾಮಚಂದ್ರಪ್ಪ ಅವರೊಂದಿಗೆ ೨ ಸಲ ಸಭೆ ನಡೆಸಿ, ಸಮಸ್ಯೆಗಳನ್ನೆಲ್ಲ ಪಟ್ಟಿ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಭೇಟಿಗೆ ಅವಕಾಶ ಪಡೆದುಕೊಂಡು ಮನವಿ ಸಲ್ಲಿಸಿ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಡಲಾಗಿದೆ. ಅವುಗಳನ್ನು ಅವರು ತಾತ್ವಿಕವಾಗಿ ಒಪ್ಪಿಕೊಂಡು ಸರ್ಕಾರದಿಂದ ಆಗಬೇಕಾದ ಈ ಮುಖ್ಯವಾದ ಕೆಲಸಕ್ಕಾಗಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಶ್ರೀ ತನ್ವೀರ್‌ಸೇಠ್‌ರವರನ್ನು ಕರೆಸಿ, ಈ ಬಗ್ಗೆ ಬಜೆಟ್‌ನಲ್ಲಿ ಸೇರಿಸಿಕೊಳ್ಳಲು ಸೂಚಿಸಿದರು. ಕರ್ನಾಟಕ ಶಾಲಾ ಶಿಕ್ಷಣ ನೀತಿಯನ್ನು ಸರ್ಕಾರ ರಚಿಸುವ ಸಂಬಂಧ ಏಪ್ರಿಲ್ ನಂತರ ಸಭೆ ಕರೆದು ತಮ್ಮ ಅಭಿಪ್ರಾಯ ಪಡೆದು ಈ ಬಗ್ಗೆ ಕ್ರಮಕೈಗೊಳ್ಳುತ್ತೇವೆ ಎಂದು ತಿಳಿಸಿರುತ್ತಾರೆ. ಇದು ಬಹಳ ಮುಖ್ಯವಾದ ಹೆಜ್ಜೆ. ಸಮ್ಮೇಳನದ ನಿರ್ಣಯಗಳ ಬಗ್ಗೆ ಸರ್ಕಾರದೊಂದಿಗೆ ಸಂವಾದ ಮಾಡಿ ಕ್ರಮಕೈಗೊಂಡಿರುವುದು ಪ್ರಶಂಸನೀಯವಾಗಿದೆ. ಹೊರನಾಡ ಕನ್ನಡಿಗರಿಗೆ ಸೌಲಭ್ಯ ಒದಗಿಸಿಕೊಡುವ ವಿಚಾರವಾಗಿ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳಿಗೆ ತಿಳಿಸಿ, ಆಪ್ತಕಾರ್ಯದರ್ಶಿಗಳ ಕಚೇರಿಯಿಂದ ಸಂಬಂಧಪಟ್ಟ ಇಲಾಖೆಗಳಿಗೆ ಕ್ರಮಕೈಗೊಳ್ಳುವಂತೆ ಪತ್ರಗಳು ಹೋಗಿವೆ.

- **ಅಭೂತಪೂರ್ವ ಯಶಸ್ಸುಕಂಡ ೮೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ**

೮೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ರಾಯಚೂರಿನಲ್ಲಿ ಡಿಸೆಂಬರ್ ೨, ೩ ಮತ್ತು ೪ ರಂದು ಮೂರು ದಿನಗಳ ಕಾಲ ಅತ್ಯಂತ ಅರ್ಥಪೂರ್ಣವಾಗಿ ನಡೆಸಲಾಯಿತು.

ಹಿರಿಯ ಸಾಹಿತಿಗಳು ಹಾಗೂ ಪ್ರಸಿದ್ಧ ಸಂಸ್ಕೃತಿ ಚಿಂತಕರಾದ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಸಮ್ಮೇಳನಾಧ್ಯಕ್ಷರಾಗಿ ಔಚಿತ್ಯಪೂರ್ಣ ಸಮ್ಮೇಳನಾಧ್ಯಕ್ಷರ ಭಾಷಣ ಮಾಡಿದರು. ನಾಡಿನ ಪ್ರಚಲಿತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂಥ ವಿಚಾರಗೋಷ್ಠಿಗಳನ್ನು ಎರಡು ವೇದಿಕೆಗಳಲ್ಲಿ ಆಯೋಜಿಸಿ, ಖ್ಯಾತ ವಿದ್ವಾಂಸರುಗಳಿಂದ ವಿಚಾರ ಮಂಡನೆಗಳನ್ನು ಮಾಡಿಸಲಾಯಿತು. ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಅತ್ಯಂತ ಉದ್ದದ ಕನ್ನಡ ಬಾವುಟವನ್ನು ಪ್ರದರ್ಶಿಸಿದ್ದು ಪ್ರಮುಖ ಆಕರ್ಷಣೆಯಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಸಮ್ಮೇಳನದ ಉದ್ಘಾಟನೆಯನ್ನು ನೇರವೇರಿಸಿ, ತಮ್ಮ ಭಾಷಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಲ್ಲಿಸುವ ಎಲ್ಲ ಪ್ರಸ್ತಾವನೆಗಳನ್ನು ಮಂಜೂರು ಮಾಡಲಾಗುವುದು ಎಂದು ಘೋಷಿಸಿದರು.

ಸಮೇಳನದ ಮೂರೂ ದಿನ ಜನಸಮೂಹ ಪ್ರವಾಹದ ರೀತಿ ಹರಿದು ಬಂತು. ಸಾಹಿತ್ಯ ಸಮ್ಮೇಳನದ ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದು ದಾಖಲೆ. ಮೊದಲ ದಿನ ಮತ್ತು ಎರಡನೇ ದಿನ ನಿತ್ಯ ಸರಾಸರಿ ಲಕ್ಷ ಜನರು ಹಾಗೂ ಮೂರನೇ ದಿನ ೧.೫ ಲಕ್ಷಕ್ಕೂ ಹೆಚ್ಚು ಜನರು ಪಾಲ್ಗೊಂಡು ಸಂಭ್ರಮಿಸಿದ್ದು ಒಂದು ಐತಿಹಾಸಿಕ ದಾಖಲೆ. ವಿದ್ಯಾರ್ಥಿ ಸಮೂಹ ಅತಿಹೆಚ್ಚು ಸಂಖ್ಯೆಯಲ್ಲಿ ಸಮ್ಮೇಳನದಲ್ಲಿ ಭಾಗಿಯಾಗಿದ್ದು ಸಹ ವಿಶೇಷವಾಗಿತ್ತು. ವೈವಿಧ್ಯಮಯ ಗೋಷ್ಠಿಗಳ ಜೊತೆಗೆ ಪ್ರಧಾನ ವೇದಿಕೆ ಹಾಗೂ ಎರಡು ಸಮಾನಾಂತರ ವೇದಿಕೆಗಳಲ್ಲಿ ನಿತ್ಯವೂ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜನ ಕಿಕ್ಕಿರಿದು ಸೇರಿ ಸಂಗೀತ ಸುಧೆಗೆ ತಲೆದೂಗಿದರು. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ತನ್ವೀರ್‌ಸೇಠ್ ಅವರ ಸ್ವಾಗತಸಮಿತಿ ಅಧ್ಯಕ್ಷತೆಯಲ್ಲಿ ಬಹಳ ಅಚ್ಚುಕಟ್ಟಾಗಿ ವಸತಿ, ಊಟ, ವೇದಿಕೆ ಇತ್ಯಾದಿ ವ್ಯವಸ್ಥೆಗಳನ್ನು ಮಾಡಿ, ಸಮ್ಮೇಳನವನ್ನು ನಭೂತೋ, ನಭವಿಷ್ಯತಿ ಎನ್ನುವ ಮಟ್ಟಿಗೆ ಯಶಸ್ವಿಯಾಗಿ ಆಚರಿಸಲಾಯಿತು.

## ♦ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು ಮತ್ತು ಅನುಷ್ಠಾನ

**ನಿರ್ಣಯ - ೧**: ಕರ್ನಾಟಕದೊಳಗೆ ಇರುವ ಕನ್ನಡ ಮಾಧ್ಯಮ ವ್ಯಾಸಂಗಿಗಳಿಗೆ ಸಿಗುತ್ತಿರುವ ಸಕಲ ಶೈಕ್ಷಣಿಕ ಮತ್ತು ಉದ್ಯೋಗ ಸಂಬಂಧಿ ಸೌಲಭ್ಯಗಳು ಇಡಿಯಾಗಿ ಹೊರನಾಡ ಕನ್ನಡಿಗರಿಗೆ ಸಿಗಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ.

**ಅನುಷ್ಠಾನ** : ನಿರ್ಣಯ ೧ಕ್ಕೆ ಸಂಬಂಧಿಸಿದಂತೆ ಈ ಕುರಿತು ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದು, ಇದರನ್ವಯ ಫಲಿತಾಂಶ ಹೊರಬಿದ್ದಿದೆ. **(ಹೆಚ್ಚಿನ ಮಾಹಿತಿಗೆ ಪುಟ ೫೩ ಸರಕಾರದ ಸ್ಪಂದನ ಭಾಗವನ್ನು ನೋಡಬಹುದು).**

**ನಿರ್ಣಯ - ೨ :** ಸರ್ಕಾರಿ ಶಾಲೆಗಳ ಸಬಲೀಕರಣ ಮತ್ತು ಸಮಾನ ಶಿಕ್ಷಣಕ್ಕೆ ಸೂಕ್ತ ನೀಲಿನಕ್ಷೆಯನ್ನು ಸಿದ್ಧಗೊಳಿಸಿ ಶೀಘ್ರವಾಗಿ ಅನುಷ್ಠಾನಗೊಳಿಸಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ.

**ಪ್ರಗತಿ :** ನಿರ್ಣಯ ೨ಕ್ಕೆ ಸಂಬಂಧಿಸಿದಂತೆ ಈ ಕುರಿತು ಶಿಕ್ಷಣ ಇಲಾಖೆಗೆ ಪತ್ರ ಬರೆಯಲಾಗಿದ್ದು, ಕಾರ್ಯ ಪ್ರಗತಿಯಲ್ಲಿದೆ.

**ನಿರ್ಣಯ - ೩** : ಸರ್ಕಾರ ಈಗ ಕೈಬಿಟ್ಟಿರುವ ರಾಷ್ಟ್ರಕವಿ ಆಯ್ಕೆಯನ್ನು ಚಾಲನೆಗೊಳಿಸಿ ರಾಷ್ಟ್ರಕವಿ ಪುರಸ್ಕಾರ ಕೊಡುವ ಪದ್ಧತಿಯನ್ನು ಮುಂದುವರಿಸಬೇಕೆಂದು ಈ ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ.

ಪ್ರಗತಿ : ನಿರ್ಣಯ ೩ಕ್ಕೆ ಸಂಬಂಧಿಸಿದಂತೆ ಈ ಕುರಿತು ಸರಕಾರವನ್ನು ಒತ್ತಾಯಿಸಿ ಪತ್ರ ಬರೆಯಲಾಗಿತ್ತು, ಸರಕಾರ ತಾತ್ವಿಕವಾಗಿ ಒಪ್ಪಿಕೊಂಡಿದ್ದು, ಆಯ್ಕೆ ಸಮಿತಿ ರಚನೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ.

* * * * *

# ಕಾಯಕ ನಿರತ

## ದಿನಾಂಕ ೧-೧೧-೨೦೦೭ ರಿಂದ ೫-೧೦-೨೦೦೯ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡ ಹೊಸ ಯೋಜನೆಗಳು ಹಾಗೂ ಮುಂದುವರಿದ ಕಾರ್ಯಚಟುವಟಿಕೆಗಳ ವಿವರ

### ♦ ೨೦೦೮ರ ಫೆಬ್ರವರಿ ೧೦ ಹಾಗೂ ೧೧ ರಂದು ಮುಂಬಯಿಯಲ್ಲಿ ಹೊರನಾಡ ಕನ್ನಡಿಗರ 'ದ್ವಿತೀಯ ರಾಷ್ಟ್ರೀಯ ಸಮಾವೇಶ' :

ಮೈಸೂರು ಅಸೋಸಿಯೇಷನ್, ಮುಂಬಯಿ ಹಾಗೂ ಮೊಗವೀರ ವ್ಯವಸ್ಥಾಪಕ ಮಂಡಳಿ ಸಂಘಗಳ ಸಹಾಯ ಸಹಕಾರದೊಂದಿಗೆ ದಿನಾಂಕ ೧೦ ಮತ್ತು ೧೧ ಫೆಬ್ರವರಿ ೨೦೦೮ ರಂದು ಮುಂಬಯಿಯಲ್ಲಿ ಹೊರನಾಡ ಕನ್ನಡಿಗರ ದ್ವಿತೀಯ ರಾಷ್ಟ್ರೀಯ ಸಮಾವೇಶವನ್ನು ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು.

ಈ ಸಮಾವೇಶದ ಆಶಯವೆಂದರೆ ಕರ್ನಾಟಕದಾಚೆಗಿನ ಕನ್ನಡಿಗರೊಂದಿಗೆ ಮುಖಾಮುಖಿಯಾಗುವುದು. ಅವರ ಅಸ್ತಿತೆ ಕುರಿತು ಚರ್ಚೆ, ಆ ಜನರು ತಮ್ಮ ತಮ್ಮ ರಾಜ್ಯಗಳಲ್ಲಿ ಸಾಮರಸ್ಯದೊಂದಿಗೆ ಬದುಕುವ ಬಗೆ - ಕನ್ನಡ ಸಾಹಿತ್ಯ, ಸಂಸ್ಕೃತಿ, ಗಡಿ ಸಮಸ್ಯೆ, ಹೊರನಾಡ ಕನ್ನಡಿಗರ ಸಮಸ್ಯೆ, ಶಿಕ್ಷಣ ಮಾಧ್ಯಮ ಮುಂತಾದ ವಿಚಾರಗಳ ಕುರಿತಾಗಿ ಕೇಂದ್ರ ಸರ್ಕಾರದ ಗಮನ ಸೆಳೆಯುವುದು. ಅಂದರೆ ಪ್ರಮುಖ ವಿಷಯಗಳನ್ನು ಕುರಿತು ವಿದ್ವತ್ಪೂರ್ಣ ವಿಚಾರ ಸಂಕಿರಣಗಳನ್ನು ಆಯೋಜಿಸುವುದು. ಅಲ್ಲಿನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂಥ ವಿಷಯಗಳ ಮೇಲೆ ಪ್ರಸಿದ್ಧ ವಿದ್ವಾಂಸರಿಂದ ವಿಷಯ ಮಂಡನೆ ಅವುಗಳಿಂದಾಗುವ ಉತ್ತಮ ಫಲಿತಾಂಶವನ್ನು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಗಮನಕ್ಕೆ ತಂದುಕೊಂಡು ಎಲ್ಲಾ ಕನ್ನಡಿಗರನ್ನು ಭಾವನಾತ್ಮಕವಾಗಿ ಒಂದುಮಾಡುವತ್ತ ದಿಟ್ಟ ಹೆಜ್ಜೆ ಇಡಬಯಸುತ್ತದೆ. ಈ ನಿಟ್ಟಿನಲ್ಲಿ ಕನ್ನಡಿಗರೆಲ್ಲರ ಆಸೆ ಆಶಯಗಳಿ ಗನುಗುಣವಾಗಿ ಗುಣಾತ್ಮಕವಾಗಿ ಕಾರ್ಯನಿರ್ವಹಿಸಲು ಬದ್ಧವಾಗಿದೆ.

ಈ ಸಮಾವೇಶದ ಉದ್ಘಾಟನೆಯನ್ನು ಪ್ರಸಿದ್ಧ ಕಾದಂಬರಿಕಾರರಾದ ಡಾ. ಎಸ್.ಎಲ್. ಭೈರಪ್ಪ ಅವರು ನೆರವೇರಿಸಿಕೊಟ್ಟರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಎರಡು ದಿನಗಳ ಕಾಲ ಆಯೋಜಿಸಿದ್ದ ಈ ಸಮಾವೇಶದಲ್ಲಿ ಗಡಿ ವಿಷಯಕ್ಕೆ ಸಂಬಂಧಪಟ್ಟಂತೆ "ಮುಂಬಯಿ ಕನ್ನಡಿಗರು : ಸೃಜನಶೀಲ ನೆಲೆಗಳು", "ಹೊರನಾಡ ಕನ್ನಡಿಗರ ಸವಾಲು ಪರಿಹಾರ", "ಹೊರನಾಡ ಕನ್ನಡಿಗರ ಭಾಷಾ ಬಿಕ್ಕಟ್ಟು ಸಾಮರಸ್ಯ", "ರಾಷ್ಟ್ರೀಯ ಶಿಕ್ಷಣ ನೀತಿ" - ಕುರಿತು ಗೋಷ್ಠಿಗಳನ್ನು ಆಯೋಜಿಸಲಾಗಿತ್ತು.

ಈ ಮೇಲ್ಕಂಡ ವಿದ್ವತ್‌ಪೂರ್ಣ ಪ್ರಬಂಧ ಮಂಡನೆಗಳ ನಾಲ್ಕು ಗೋಷ್ಠಿಗಳೊಂದಿಗೆ ಡಾ. ಸಿದ್ಧಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ನಾಡಿನ, ಹೊರನಾಡಿನ ಪ್ರಸಿದ್ಧ ಕವಿಗಳಿಂದ ಕವಿಗೋಷ್ಠಿಯನ್ನು ಏರ್ಪಡಿಸಿ, ಕಾವ್ಯಾಸಕ್ತರ ಮೆಚ್ಚುಗೆಯನ್ನು ಪಡೆಯಲಾಯಿತು. ಈ ಮೂಲಕ ಅಲ್ಲಿ ನೆಲೆಸಿರುವ ಕನ್ನಡಿಗರಲ್ಲಿ ಕನ್ನಡ ಭಾಷೆ, ಸಂಸ್ಕೃತಿಯ ಮೇಲೆ ಅಭಿಮಾನ ಮೂಡಿಸಿ ಕನ್ನಡಿಗರ ಸ್ವಾಭಿಮಾನವನ್ನು ಎತ್ತಿ ಹಿಡಿಯಲಾಯಿತು.

### ♦ ಬೃಹನ್ ಮುಂಬಯಿ ಕ.ಸಾ.ಪ. ಘಟಕ ಉದ್ಘಾಟನೆ :

ಬೃಹನ್ ಮುಂಬಯಿ ಮಹಾನಗರದಲ್ಲಿ ೨೦ ಲಕ್ಷ ಕನ್ನಡಿಗರಿದ್ದು, ಮುಂಬಯಿ ನಗರದಲ್ಲೇ ೧೦೦ ಕ್ಕೂ ಅಧಿಕ ಕ.ಸಾ.ಪ. ಆಜೀವ ಸದಸ್ಯರಿದ್ದಾರೆ. ಈ ಸಂಬಂಧ ಬೃಹನ್ ಮುಂಬಯಿ ಕ.ಸಾ.ಪ. ಘಟಕ ರಚನೆ ಕೋರಿ ನವ ಮುಂಬಯಿ ಕನ್ನಡ ಸಂಘ, ಕರ್ನಾಟಕ ಸಂಘ ಅಸಲ್ಫೆ, ಮಯೂರ ವರ್ಮ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಇನ್ನಿತರೆ ಮುಂಬಯಿ ಕನ್ನಡ ಸಂಘಗಳು ಮನವಿ ಸಲ್ಲಿಸಿದ್ದವು. ಅದನ್ನು ಪರಿಗಣಿಸಿ, ೨೦೧೭ರ ಸೆಪ್ಟೆಂಬರ್ ೨೫ ರಂದು ನಡೆದ ಕ.ಸಾ.ಪ. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಘಟಕ ರಚಿಸಲು ಸರ್ವಾನುಮತದಿಂದ ನಿರ್ಣಯವನ್ನು ಕೈಗೊಳ್ಳಲಾಗಿತ್ತು. ಅದರಂತೆ ೨೦೧೮ರ ಫೆಬ್ರುವರಿ ೧೦ ರಂದು ಜರುಗಿದ ಹೊರನಾಡ ಕನ್ನಡಿಗರ ದ್ವಿತೀಯ ರಾಷ್ಟ್ರೀಯ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು "ಬೃಹನ್ ಮುಂಬಯಿ ಕ.ಸಾ.ಪ. ಘಟಕ"ವನ್ನು ಉದ್ಘಾಟಿಸಿ ಮುಂಬಯಿಯಲ್ಲಿ ಕ.ಸಾ.ಪ. ಕಾರ್ಯ ಚಟುವಟಿಕೆಗಳಿಗೆ ಚಾಲನೆ ನೀಡಿದರು. ಇದೇ ವೇಳೆ ಘಟಕದ ನೂತನ ಅಧ್ಯಕ್ಷರಾಗಿ ಡಾ. ಗಣಪತಿ ಶಂಕರಲಿಂಗ ಅವರನ್ನು ಹಾಗೂ ಪದಾಧಿಕಾರಿಗಳನ್ನು ನೇಮಕ ಮಾಡಿ ಜವಾಬ್ದಾರಿ ವಹಿಸಲಾಯಿತು.

ಎರಡು ದಿನಗಳ ಕಾಲ ಅರ್ಥಪೂರ್ಣವಾಗಿ ಆಯೋಜಿಸಿದ್ದ ಈ ಸಮಾವೇಶದ ವಿವಿಧ ಗೋಷ್ಠಿಗಳಲ್ಲಿ ಪ್ರೊ ಎಸ್.ಜಿ. ಸಿದ್ದರಾಮಯ್ಯ, ಶ್ರೀ ಜಯಂತ ಕಾಯ್ಕಿಣಿ, ಶ್ರೀಮತಿ ಹೇಮಲತಾ

ಮಹಿಷಿ ಸೇರಿದಂತೆ ಅನೇಕ ವಿದ್ವಜ್ಜನರು ಭಾಗವಹಿಸಿದ್ದರು. ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಾದ ಡಾ. ಮಲ್ಲಿಕಾ ಘಂಟಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಶಿಕ್ಷಣ ತಜ್ಞರಾದ ಡಾ. ಮೋಹನ್ ಆಳ್ವ ಅವರು ಸಮಾರೋಪ ನುಡಿಗಳನ್ನಾಡಿದರು. ಈ ಎರಡು ದಿನದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಮನು ಬಳಿಗಾರ್ ಅವರು ವಹಿಸಿಕೊಂಡಿದ್ದರು. ಅತ್ಯಂತ ಅರ್ಥಪೂರ್ಣವಾಗಿ ಸಮಾವೇಶ ಜರುಗುವಲ್ಲಿ ಪ್ರಮುಖ ಪಾತ್ರವಹಿಸಿದರು.

- **ಅಖಿಲ ಭಾರತ ಪ್ರಥಮ ಹಳಗನ್ನಡ ಸಾಹಿತ್ಯ ಸಮ್ಮೇಳನವನ್ನು ೨೪,೨೫ ಜೂನ್ ೨೦೧೮ ರಂದು ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.**

೦೯, ೧೦ ಮತ್ತು ೧೧ನೇ ಶತಮಾನದ ಕನ್ನಡ ಸಾಹಿತ್ಯದ ಮೇರು ಕವಿಗಳಾದ ಪಂಪ, ರನ್ನ, ಪೊನ್ನ, ಜನ್ನ, ನಾಗಚಂದ್ರ ಮುಂತಾದವರ ಹಾಗೂ ಅವರ ಕೃತಿಗಳನ್ನು ಕುರಿತು ಚಿಂತನ - ಮಂಥನ ನಡೆಸಲು ಈ ಸಮ್ಮೇಳನ ಆಯೋಜಿಸಲಾಗಿತ್ತು. ಹಳಗನ್ನಡ ಸಾಹಿತ್ಯದ ಮಹತ್ವವನ್ನು ನಾಡಿನ ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ಶ್ರೀಕ್ಷೇತ್ರದ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳ ಸಹಕಾರದೊಂದಿಗೆ ೨೦೧೮ರ ಜೂನ್ ೨೪, ೨೫ ಹಾಗೂ ೨೬ ರಂದು ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಅಖಿಲ ಭಾರತ ಪ್ರಥಮ ಹಳಗನ್ನಡ ಸಾಹಿತ್ಯ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಜರುಗಿತು. ಪ್ರಸಿದ್ಧ ಸಂಶೋಧಕರಾದ ಡಾ. ಷ. ಶೆಟ್ಟರ್ ಅವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ಸನ್ಮಾನ್ಯ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡ ಅವರು ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದರು. ಹಿರಿಯ ವಿದ್ವಾಂಸರಾದ ಡಾ. ಹಂಪ ನಾಗರಾಜಯ್ಯ ಅವರು ಉದ್ಘಾಟನಾ ಸಮಾರಂಭದಲ್ಲಿ ಆಶಯ ನುಡಿಗಳನ್ನಾಡಿದರು. ಹಿರಿಯ ಸಾಹಿತಿಗಳು ಹಾಗೂ ಸಂಸ್ಕೃತಿ ಚಿಂತಕರಾದ ಪ್ರೊ. ಚಂದ್ರಶೇಖರ ಪಾಟೀಲ ಹಾಗೂ ಪ್ರಖ್ಯಾತ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸಮ್ಮೇಳನದಲ್ಲಿ "ಹಳಗನ್ನಡ ಸಾಹಿತ್ಯ : ಮರುಸೃಷ್ಟಿಯ ಸವಾಲುಗಳು", "೯ ಮತ್ತು ೧೦ನೇ ಶತಮಾನದ ಸಾಹಿತ್ಯದ ಅನನ್ಯತೆ", "೧೧ನೇ ಶತಮಾನದ ಸಾಹಿತ್ಯ : ಹಿಂಸೆ ಅಹಿಂಸೆಗಳ ನಿರ್ವಹಣೆ", "ಕನ್ನಡ ಶಾಸ್ತ್ರ ಕೃತಿಗಳು : ಮರು ಓದು", "ಹಳಗನ್ನಡ ಸಾಹಿತ್ಯದ ಪ್ರಸ್ತುತತೆ" - ಕುರಿತು ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಜೊತೆಗೆ ಪಂಪ, ರನ್ನ ವಿರಚಿತ ಹಳಗನ್ನಡ ಕಾವ್ಯವನ್ನು ಡಾ. ಶಾಂತಿನಾಥ ದಿಬ್ಬದ ಅವರಿಂದ ಓದಿಸಲಾಯಿತು.

ಸಮ್ಮೇಳನದಲ್ಲಿ ವಿದ್ವತ್‌ಪೂರ್ಣ ಪ್ರಬಂಧ ಮಂಡನೆಗಳ ಗೋಷ್ಠಿಗಳೊಂದಿಗೆ ನಾಡಿನ, ಹೊರನಾಡಿನ ಪ್ರಸಿದ್ಧ ಕವಿಗಳಿಂದ ಬಾಹುಬಲಿ ವಿಶ್ವಶಾಂತಿ ಸಂದೇಶ - ಕವಿಗೋಷ್ಠಿಯನ್ನು ಏರ್ಪಡಿಸಲಾಗಿತ್ತು.

ಮೂರು ದಿನಗಳ ಕಾಲ ಅರ್ಥಪೂರ್ಣವಾಗಿ ಆಯೋಜಿಸಿದ್ದ ಸಮ್ಮೇಳನದಲ್ಲಿ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಅವರು ಸಮಾರೋಪ ನುಡಿಗಳನ್ನಾಡಿದರು. ಈ ಸಮಾರಂಭದ ಅಧ್ಯಕ್ಷತೆ ವಹಿಸುವುದರ ಜೊತೆಗೆ ಸಮ್ಮೇಳನದ ನೇತೃತ್ವವನ್ನು ನಾಡೋಜ ಡಾ. ಮನು ಬಳಿಗಾರ್ ಅವರು ವಹಿಸಿಕೊಂಡಿದ್ದರು. ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರವಣಬೆಳಗೊಳದ ಶ್ರೀಗಳು ವಿದ್ವತ್ಪೂರ್ಣ ಭಾಷಣ ಮಾಡಿದರು. ಈ ಸಮ್ಮೇಳನಕ್ಕಾಗಿ ತಗುಲಿದ ವೆಚ್ಚದ ಪೈಕಿ ಮೂರು ದಿನಗಳ ಕಾಲ ಊಟ, ಉಪಚಾರ ಹಾಗೂ ವಾಸ್ತವ್ಯಕ್ಕಾಗಿ ಶ್ರೀಮಠವು, ಮುಕ್ಕಾಲು ಪಾಲು ಅಂದರೆ, ಅಂದಾಜು ರೂ. ೬೭ ಲಕ್ಷದಷ್ಟು ಹಣವನ್ನು ಖರ್ಚು ಮಾಡಿತು.

- **ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಆದ ಪ್ರವಾಹ ವಿಕೋಪದಿಂದ ನೊಂದ ಸಂತ್ರಸ್ತರಿಗೆ ಪರಿಹಾರ ನೀಡುವ ಸಂಬಂಧ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ಸಂಗ್ರಹ**

೨೦೧೮ರ ಜುಲೈ, ಆಗಸ್ಟ್ ಮಾಹೆಯಲ್ಲಿ ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸುರಿದ ಭೀಕರ ಮಳೆಯಿಂದಾಗಿ ಉಂಟಾದ ಪ್ರವಾಹ ವಿಕೋಪದಿಂದ ಅನೇಕ ಜನ ಮೃತಪಟ್ಟರು. ಅಲ್ಲಿನ ಜನರು ತಮ್ಮ ಆಸ್ತಿ-ಪಾಸ್ತಿಗಳನ್ನೆಲ್ಲ ಕಳೆದುಕೊಂಡು ಬೀದಿಗೆ ಬಂದಿರುವ ಪರಿಸ್ಥಿತಿಯನ್ನು ಮನಗಂಡು, ನಲುಗಿರುವ ಕೊಡಗಿನ ನೆರೆಸಂತ್ರಸ್ತರ ಸಹಾಯಾರ್ಥವಾಗಿ ವೈಯಕ್ತಿಕವಾಗಿ ಆರ್ಥಿಕ ಸಹಾಯ ಮಾಡಬೇಕೆಂಬ ಮಾನ್ಯ ಅಧ್ಯಕ್ಷರ ಸದುದ್ದೇಶದ ಆಶಯವನ್ನು ಒಪ್ಪಿ ಕ.ಸಾ.ಪ. ಕಾರ್ಯಕಾರಿ ಸಮಿತಿಯ ಸದಸ್ಯರು ನೀಡಿದ ದೇಣಿಗೆ ಹಾಗೂ ಪರಿಷತ್ತಿನ ಸಿಬ್ಬಂದಿಗಳು ಸ್ವ

ಇಚ್ಛೆಯಿಂದ ನೀಡಿದ ತಮ್ಮ ೧ ದಿನದ ಸಂಬಳದ ದೇಣಿಗೆಯಾಗಿ ಒಟ್ಟು ರೂ. ೧,೮೫,೭೦೬-೦೦ಗಳನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ-೨೦೧೮ಕ್ಕೆ ನೀಡಲಾಯಿತು. ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ವೈಯಕ್ತಿಕವಾಗಿ ೧೦ ಸಾವಿರ ರೂಪಾಯಿಗಳನ್ನು ದೇಣಿಗೆ ನೀಡಿದರು. ಈ ಮೂಲಕ ಪರಿಷತ್ತು ನೆರೆ ಸಂತ್ರಸ್ತರ ಸಹಾಯಕ್ಕಾಗಿ ಮಿಡಿಯಿತು.

- **ಗೋವಾ ರಾಜ್ಯ ಕ.ಸಾ.ಪ. ಗಡಿನಾಡು ಘಟಕ ಉದ್ಘಾಟನೆ ಹಾಗೂ ಕಾರ್ಯ ಚಟುವಟಿಕೆಗಳಿಗೆ ಚಾಲನೆ.**

೨೦೧೬ನೇ ಸಾಲಿನ ಏಪ್ರಿಲ್‌ನಿಂದ ಇತ್ತೀಚೆಗೆ ಅಂದಾಜು ೪೫೦ ಜನ ಆಜೀವ ಸದಸ್ಯರಾಗಿರುವುದರಿಂದ ಗೋವಾ ರಾಜ್ಯದ ಗಡಿನಾಡ ಘಟಕವನ್ನು ಹೊಸದಾಗಿ ರಚಿಸಲಾಯಿತು. ಈ ಘಟಕವನ್ನು ಪ್ರತಿನಿಧಿಸಲು ಕನ್ನಡಕ್ಕೆ ಸಲ್ಲಿಸಿದ್ದ ಸೇವೆಯನ್ನು ಪರಿಗಣಿಸಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ನೇಮಿಸಲಾಯಿತು. ದಿನಾಂಕ ೨೦೧೮ರ ಸೆಪ್ಟೆಂಬರ್ ೯ ರಂದು ಗೋವಾದ ಕಲಾ ಅಕಾಡೆಮಿಯಲ್ಲಿ ಜರುಗಿದ ಉದ್ಘಾಟನಾ ಸಮಾರಂಭದಲ್ಲಿ ಹೆಸರಾಂತ ಸಾಹಿತಿಗಳು ಹಾಗೂ ಹಿರಿಯ ಪತ್ರಕರ್ತರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಈ ಗೋವಾ ರಾಜ್ಯ ಗಡಿನಾಡು ಘಟಕವನ್ನು ಉದ್ಘಾಟಿಸಿದರು. ಈ ಮೂಲಕ ಗೋವಾ ರಾಜ್ಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳಿಗೆ ವಿದ್ಯುಕ್ತವಾಗಿ ಚಾಲನೆ ನೀಡಲಾಯಿತು. ಗೋವಾ ರಾಜ್ಯ ಕ.ಸಾ.ಪ. ಘಟಕದ ಉದ್ಘಾಟನೆಯು ಒಂದು ಚಾರಿತ್ರಿಕ ದಾಖಲೆಯಾಗಿದೆ.

ಇದರಿಂದಾಗಿ ಗೋವಾ ರಾಜ್ಯದಲ್ಲಿನ ಕನ್ನಡಿಗರಿಗೆ ಆತ್ಮಸ್ಥೈರ್ಯ ತುಂಬುವುದರ ಜೊತೆ, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ ಇತ್ಯಾದಿಗಳ ಸಂವರ್ಧನೆಗೆ ವೇದಿಕೆ ಸೃಷ್ಟಿ ಮಾಡಿಕೊಡಲಾಯಿತು.

- **ಬಹರೇನ್‌ನಲ್ಲಿ ಯಶಸ್ವಿಯಾಗಿ ಜರುಗಿದ ಪ್ರಪ್ರಥಮ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನ : ಐತಿಹಾಸಿಕ ದಾಖಲೆ**

೧೦೪ ವರ್ಷಗಳ ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಹೊರದೇಶದಲ್ಲಿ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸುವ ಮೂಲಕ ವಿಶ್ವದಾದ್ಯಂತ ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ಪರಿಚಯಿಸುವ ಕಾರ್ಯ

ನಡೆಯಿತು. ನಾಡಿನ ಸಾಹಿತ್ಯ, ಸಂಸ್ಕೃತಿಯನ್ನು ಅನಾವರಣ ಗೊಳಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಬಹರೇನ್‌ನ ಕನ್ನಡ ಸಂಘದ ಸಂಯುಕ್ತ ಆಶ್ರಯದಲ್ಲಿ ಬಹರೇನ್‌ನಲ್ಲಿ ೨೦೧೮ರ ಅಕ್ಟೋಬರ್ ೫ ಹಾಗೂ ೬ ರಂದು "ಪ್ರಪ್ರಥಮ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಬಹರೇನ್‌ನಲ್ಲಿ ನಡೆಸಿದ ಈ ಸಮ್ಮೇಳನ ಐತಿಹಾಸಿಕ ದಾಖಲೆಯಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ಆಗಿನ ಕನ್ನಡ, ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಡಾ. ಜಯಮಾಲ ಅವರು ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದರು. ಹಿರಿಯ ಸಾಹಿತಿಗಳಾದ ಡಾ. ಎಚ್. ಎಸ್. ವೆಂಕಟೇಶಮೂರ್ತಿ, ಕನ್ನಡ ಅಭಿವೃದಿ ಪ್ರಾಧಿಕಾರದ ಆಗಿನ ಅಧ್ಯಕ್ಷರಾದ ಪ್ರೊ. ಎಸ್. ಜಿ. ಸಿದ್ಧರಾಮಯ್ಯ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಾದ ಡಾ. ಮಲ್ಲಿಕಾ ಘಂಟಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಬಹರೇನ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಪ್ರದೀಪ್ ಶೆಟ್ಟಿ, ಕಾರ್ಯದರ್ಶಿ ಶ್ರೀ ಕಿರಣ್ ಉಪಾಧ್ಯಾಯ ಉಪಸ್ಥಿತರಿದ್ದರು.

ಸಮ್ಮೇಳನದಲ್ಲಿ "ಗಲ್ಫ್ ಕನ್ನಡಿಗರ ಸ್ಥಿತಿಗತಿ", "ಕನ್ನಡ ಸಾಹಿತ್ಯದಲ್ಲಿ ಹಾಸ್ಯ", "ವಿಶ್ವಭಾರತಿಗೆ ಕನ್ನಡದಾರತಿ", "ಜಾಗತೀಕರಣ ಮತ್ತು ಭಾಷಾ ಬಿಕ್ಕಟ್ಟು", "ವಲಸೆ ಕನ್ನಡಿಗರು ಮತ್ತು ಸಾಂಸ್ಕೃತಿಕ ಬಿಕ್ಕಟ್ಟು" - ಕುರಿತು ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಶ್ರೀ ಎಸ್.ಆರ್. ವಿಜಯಶಂಕರ್, ಡಾ. ಸಿದ್ಧಲಿಂಗಯ್ಯ ಶ್ರೀ ಎಸ್. ಷಡಕ್ಷರಿ, ಶ್ರೀ ಎಚ್. ಡುಂಡಿರಾಜ್, ಶ್ರೀ ಕೃಷ್ಣಭಟ್, ಶ್ರೀ ಆಸ್ಟಿನ್ ಸಂತೋಷ್, ಡಾ. ಶಂಭು ಬಳಿಗಾರ್, ಡಾ. ಸುಬ್ಬಣ್ಣ ರೈ, ಡಾ. ಪಾಂಡುರಂಗ ಬಾಬು, ಡಾ. ಸಾಂಬಮೂರ್ತಿ, ಡಾ. ಪಿ. ಮಹಾದೇವಯ್ಯ, ಶ್ರೀ ಅಮಿತ ಬಿರಾದಾರ, ಡಾ. ವಾಸುದೇವ ಬಡಿಗೇರ, ಡಾ. ಸಿದ್ಧಗಂಗಮ್ಮ, ಡಾ. ಸಿ. ಮಹದೇವ, ಡಾ. ಸರಜೂ ಕಾಟ್ಕರ್, ಚ.ಹ. ರಘುನಾಥ, ಡಾ. ವೆಂಕಟಗಿರಿ ದಳವಾಯಿ, ಡಾ. ಎಚ್.ಡಿ. ಪ್ರಶಾಂತ, ಡಾ. ಅಶೋಕ ಕುಮಾರ ರಂಜೇರಿ ಇವರುಗಳು ಗೋಷ್ಠಿಗಳಲ್ಲಿ ಭಾಗವಹಿಸಿದ್ದರು.

ಈ ಮೇಲ್ಕಂಡ ಐದು ವಿದ್ವತ್‌ಪೂರ್ಣ ಪ್ರಬಂಧ ಮಂಡನೆಗಳ ಗೋಷ್ಠಿಗಳೊಂದಿಗೆ ನಾಡಿನ, ಹೊರನಾಡಿನ ಪ್ರಸಿದ್ಧ ಕವಿಗಳಿಂದ ಕವಿಗೋಷ್ಠಿ ಏರ್ಪಡಿಸಲಾಗಿತ್ತು. ಸಾಹಿತಿಗಳೂ ಆಗಿರುವ ಡಾ.

ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ಹಿರಿಯ ಸಾಹಿತಿಗಳೊಂದಿಗೆ ಸಂವಾದವನ್ನು ಏರ್ಪಡಿಸಿ, ಕಾವ್ಯಾಸಕ್ತರ, ಸ್ಥಳೀಯ ಕನ್ನಡಿಗರ ಮೆಚ್ಚುಗೆಯನ್ನು ಪಡೆಯಲಾಯಿತು.

ಸಮ್ಮೇಳನದ ಅಂತಿಮ ಘಟ್ಟ ಸಮಾರೋಪ ಸಮಾರಂಭದಲ್ಲಿ ಆಗಿನ ವಸತಿ ಹಾಗೂ ನಗರಾಭಿವೃದ್ಧಿ ಸಚಿವರಾದ ಶ್ರೀ ಯು.ಟಿ. ಖಾದರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಸಾಹಿತಿಗಳು ಹಾಗೂ ರಾಜ್ಯಸಭಾ ಸದಸ್ಯರೂ ಆದ ಡಾ. ಎಲ್. ಹನುಮಂತಯ್ಯ ಅವರು ಸಮಾರೋಪ ನುಡಿಗಳನ್ನಾಡಿದರು. ಗೌರವ ಉಪಸ್ಥಿತರಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಾದ ಡಾ. ಮಲ್ಲಿಕಾ ಘಂಟಿ ಅವರು ಭಾಗವಹಿಸಿದ್ದರು. ಎರಡೂ ದಿನಗಳ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಮನು ಬಳಿಗಾರ್ ವಹಿಸಿಕೊಂಡಿದ್ದರು. ಸಮ್ಮೇಳನ ಅತ್ಯಂತ ಅರ್ಥಪೂರ್ಣವಾಗಿ ನೆರವೇರಿ ಹೊಸ ಇತಿಹಾಸ ನಿರ್ಮಿಸಿತು.

- **ಧಾರವಾಡದಲ್ಲಿ ಜರುಗಿದ ೮೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ**

ಕನ್ನಡದ ಹೆಸರಾಂತ ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆದ ಡಾ. ಚಂದ್ರಶೇಖರ ಕಂಬಾರ ಅವರು ಸರ್ವಾಧ್ಯಕ್ಷತೆ ವಹಿಸಿದ್ದ ೮೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಧಾರವಾಡದಲ್ಲಿ ೨೦೧೯ರ ಜನವರಿ ೪, ೫ ಹಾಗೂ ೬ ರಂದು ಮೂರು ದಿನಗಳ ಕಾಲ ಅತ್ಯಂತ ಔಚಿತ್ಯಪೂರ್ಣವಾಗಿ ಜರುಗಿತು. ಲಕ್ಷಾಂತರ ಸಾಹಿತ್ಯಾಭಿಮಾನಿಗಳು ನಾಡಿನ ಹಾಗೂ ಹೊರನಾಡಿನ ಮೂಲೆ ಮೂಲೆಯಿಂದ ವಿದ್ಯಾನಗರಿಯ ಕೃಷಿ ವಿ.ವಿ. ಆವರಣದಲ್ಲಿ ಜರುಗಿದ ಈ ಸಮ್ಮೇಳನಕ್ಕೆ ಆಗಮಿಸಿ ಯಶಸ್ವಿ ಗೊಳಿಸಿಕೊಟ್ಟರು.

ಆಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿ ಅವರು ಸಮ್ಮೇಳನವನ್ನು ಉದ್ಘಾಟಿಸುವುದರ ಮೂಲಕ ಅಕ್ಷರ ಜಾತ್ರೆಗೆ ಚಾಲನೆ ನೀಡಿದರು. ಸಚಿವರು, ಸಂಸದರು, ಶಾಸಕರಾದಿಯಾಗಿ ಸಾಹಿತಿ ದಿಗ್ಗಜರು, ಜನಪ್ರತಿನಿಧಿಗಳು ವೇದಿಕೆಯಲ್ಲಿ ಹಾಜರಿದ್ದರು.

"ಉತ್ತರ ಕರ್ನಾಟಕದ ಅಭಿವೃದ್ಧಿಯ ಸವಾಲುಗಳು", "ದಲಿತ ಅಸ್ಮಿತೆ, ಕನ್ನಡ ಶಾಲೆಗಳ ಅಳಿವು - ಉಳಿವು", "ಡಾ. ಚಂದ್ರಶೇಖರ ಕಂಬಾರರ ಸಾಹಿತ್ಯದ ಕುರಿತು ವಿಶೇಷ ಉಪನ್ಯಾಸ", "ಮಹಿಳಾ ಸಂವೇದನೆ", "ಗಡಿನಾಡ ತಲ್ಲಣಗಳು", "ನೀರಾವರಿ : ಜ್ವಲಂತ ಸಮಸ್ಯೆಗಳು", "ಕನ್ನಡ ಚಲನಚಿತ್ರ ಮತ್ತು ಕಿರುತೆರೆ", "ಕನ್ನಡ ಕಟ್ಟುವಿಕೆ ಸಾಂಸ್ಥಿಕ ಸಾಧನೆಗಳು ಮತ್ತು ನಿರೀಕ್ಷೆಗಳು : ಮರು ಓದು", "ಪ್ರಾಚೀನ ಹಾಗೂ ಮಧ್ಯಕಾಲೀನ ಸಾಹಿತ್ಯ : ಮರು ಚಿಂತನೆ", "ಆಧುನಿಕ ಸಾಹಿತ್ಯ", "ವೈಚಾರಿಕತೆ ಮತ್ತು ಅಸಹಿಷ್ಣುತೆ", "ವಿಶಿಷ್ಟ ಸಾಹಿತ್ಯ ಪ್ರಭೇದಗಳು", "ಕರ್ನಾಟಕ ಮೌಖಿಕ ಪರಂಪರೆ", "ಕೃಷಿ ಕ್ಷೇತ್ರ : ಸವಾಲುಗಳು", "ಸಂಕೀರ್ಣ", "ಮಕ್ಕಳ ಸಾಹಿತ್ಯ", "ಧಾರವಾಡ ಜಿಲ್ಲಾ ದರ್ಶನ", "ಕರ್ನಾಟಕ ಇತಿಹಾಸ : ನೂತನ ಒಳನೋಟಗಳು", "ರಂಗಭೂಮಿ: ಇತ್ತೀಚಿನ ಪ್ರಯೋಗಗಳು", "ಕಾವ್ಯ ಪ್ರಚಾರದ ವಿಭಿನ್ನ ನೆಲೆಗಳು", ಇಂತಹ ಮೌಲಿಕ ವಿಷಯಗಳ ಕುರಿತು ಪ್ರಧಾನ ವೇದಿಕೆ, ಸಮಾನಾಂತರ ವೇದಿಕೆ ೧ ಮತ್ತು ೨ ರಲ್ಲಿ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು.

ನಾಡು-ನುಡಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ೮೪ ಜನ ಮಹನೀಯರನ್ನು ಸಮ್ಮೇಳನದಲ್ಲಿ ಗೌರವಿಸಿ ಸನ್ಮಾನಿಸಲಾಯಿತು.

ಈ ಎಲ್ಲ ಸಾಧಕರುಗಳಿಗೆ ಆಗಿನ ಮಾಜಿ ಮುಖ್ಯಮಂತ್ರಿಗಳಾದ ಹಾಗೂ ಹಾಲಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಂದ ಸನ್ಮಾನ ಮಾಡಿಸಲಾಯಿತು.

ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಹಿರಿಯ ವಿದ್ವಾಂಸರಾದ ಡಾ. ಹಂಪ ನಾಗರಾಜಯ್ಯ ಅವರು ಸಮಾರೋಪ ನುಡಿಗಳನ್ನಾಡಿದರು. ಖ್ಯಾತ ಕವಿಗಳಾದ ಡಾ. ಚನ್ನವೀರ ಕಣವಿ ಅವರು ಉಪಸ್ಥಿತರಿದ್ದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಡಾ. ಮನು ಬಳಿಗಾರ್ ಅವರು ವಹಿಸಿದ್ದರು. ಸಮ್ಮೇಳನವು ಅತ್ಯಂತ ಅರ್ಥಪೂರ್ಣವಾಗಿ ಜರುಗುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಮಾನ್ಯ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಸಮ್ಮೇಳನ ನಡೆಯುವ ಸ್ಥಳಕ್ಕೆ ಅನೇಕ ಬಾರಿ ಪೂರ್ವಭಾವಿ ಭೇಟಿ ನೀಡಿ ಅಗತ್ಯ ಸಲಹೆ, ಸೂಚನೆಗಳನ್ನು ನೀಡಿ ಪೂರ್ವ ಸಿದ್ಧತೆಗಳ ಬಗ್ಗೆ ತರಬೇತಿ ನೀಡಿ ಸಮ್ಮೇಳನದ ಯಶಸ್ಸಿಗೆ ಕಾರಣಕರ್ತರಾದರು.

## ♦ ಕನ್ನಡ ಸಾಹಿತ್ಯ ಪರಿಷತ್ತಿನ ಹೊಸ ನಿಬಂಧನೆಗಳು ಜಾರಿಗೆ ಬಂದಿರುವುದು :

ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯ ಮತದಾರರ ಪಟ್ಟಿಯಲ್ಲಿರುವ ದೋಷಗಳನ್ನು ಸರಿಪಡಿಸುವಂತೆ ಸಾಹಿತಿಗಳ, ಸಾರ್ವಜನಿಕರ ಸಲಹೆ-ಸೂಚನೆಗಳು, ಹಲವು ವರ್ಷಗಳಿಂದ ಬರುತ್ತಿದ್ದ ಹಿನ್ನೆಲೆಯಲ್ಲಿ ಹಾಗೂ ಶತಮಾನ ಪೂರೈಸಿರುವ ಪರಿಷತ್ತಿನಲ್ಲಿ ಆಡಳಿತಾತ್ಮಕ ಸುಧಾರಣೆ ತರುವ ನಿಟ್ಟಿನಲ್ಲಿ ಅದರ ನಿಬಂಧನೆಗಳನ್ನು ತಿದ್ದುಪಡಿ ಮಾಡುವ ಸಂಬಂಧ "ಚುನಾವಣಾ ಸುಧಾರಣಾ ಹಾಗೂ ನಿಬಂಧನೆ ತಿದ್ದುಪಡಿ ಸಲಹಾ ಸಮಿತಿ"ಯನ್ನು ರಚಿಸಲಾಗಿತ್ತು. ಕಾನೂನು ಹಾಗೂ ಆಡಳಿತಾತ್ಮಕ ಅಪಾರ ಅನುಭವವಿರುವ ಪರಿಣಿತರನ್ನು ಈ ಸಮಿತಿಗೆ ನೇಮಿಸಲಾಗಿತ್ತು. ಈ ಸಮಿತಿಯ ಗೌರವ ಸಂಚಾಲಕರಾದ ನಿವೃತ್ತ ವಿಶೇಷ ಜಿಲ್ಲಾಧಿಕಾರಿ ಶ್ರೀ ಎನ್.ಕೆ. ನಾರಾಯಣ ಅವರು ನಿಬಂಧನೆಗಳನ್ನು ಜಾರಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಅಶೋಕ ಪೂಜಾರ್, ಹಿರಿಯ ನ್ಯಾಯವಾದಿಗಳಾದ ಶ್ರೀಮತಿ ಹೇಮಲತಾ ಮಹಿಷಿ, ಶ್ರೀಮತಿ ಪ್ರಮೀಳಾ ನೇಸರ್ಗಿ, ವಿಜಯಪುರ ಜಿಲ್ಲಾ ಕ.ಸಾ.ಪ. ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಯಂಡಿಗೇರಿ, ರಾಯಚೂರು ಜಿಲ್ಲಾ ಕ.ಸಾ.ಪ. ಮಾಜಿ ಅಧ್ಯಕ್ಷರಾದ ಶ್ರೀ ಪಂಪಯ್ಯಶೆಟ್ಟಿ ಹಾಗೂ ನಿವೃತ್ತ ಉಪವಿಭಾಗಾಧಿಕಾರಿ ಶ್ರೀ ಮೋಹನ್ ರಾಜ್ ಅವರುಗಳು ಸೂಕ್ತ ಮಾರ್ಗದರ್ಶನ ಮಾಡಿ ನೆರವಾಗಿದ್ದಾರೆ.

ಚುನಾವಣಾ ಸುಧಾರಣಾ ಹಾಗೂ ನಿಬಂಧನೆಗಳ ತಿದ್ದುಪಡಿ ಸಲಹಾ ಸಮಿತಿಯು ಹಲವಾರು ಸಭೆಗಳನ್ನು ನಡೆಸಿ ಶಿಫಾರಸು ಮಾಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ೧೪ ನಿಬಂಧನೆಗಳ ತಿದ್ದುಪಡಿ ಪ್ರಸ್ತಾವನೆಯನ್ನು ಕ.ಸಾ.ಪ. ಕಾರ್ಯಕಾರಿ ಸಮಿತಿಯು ದಿನಾಂಕ ೨೦೧೮ರ ಜನವರಿ ೨೨ ರಂದು ನಡೆದ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿತ್ತು. ಅವುಗಳನ್ನು ದಿನಾಂಕ ೨೦೧೮ರ ಮಾರ್ಚ್ ೧೫ ರಂದು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಟ ಗ್ರಾಮದ ಡಾ. ಶಿವರಾಮ ಕಾರಂತ ಥೀಮ್ ಪಾರ್ಕ್‌ನಲ್ಲಿ ನಡೆದ ಸಕಲ ಸದಸ್ಯರ ವಿಶೇಷ ಸಭೆಯಲ್ಲಿ ಶೇಕಡಾ ೯೯.೧೨ ರಷ್ಟು ಸದಸ್ಯರ ಮತಗಳ ಬೆಂಬಲದಿಂದ ಪ್ರಸ್ತಾಪಿತ ತಿದ್ದುಪಡಿಗಳೆಲ್ಲವೂ ಯಥಾವತ್ತಾಗಿ ಸ್ವೀಕಾರಗೊಂಡು ಆ ನಿಬಂಧನೆಗಳ ತಿದ್ದುಪಡಿಗೆ ಸಭೆ ಅನುಮೋದಿಸಿತ್ತು. ಮುಂದುವರೆದಂತೆ ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರು ತಮ್ಮ

ಆದೇಶ ಎಎಂಆರ್ ಸಂಖೆ : ೫೭/೨೦೧೮-೧೯ ದಿನಾಂಕ ೨೫-೦೨-೨೦೧೯ರ ಪ್ರಕಾರ ಹೊಸ ನಿಬಂಧನೆಗಳಿಗೆ ಒಪ್ಪಿಗೆ ನೀಡಿದ್ದಾರೆ. ಅದರಲ್ಲಿ ಕೆಲ ಪ್ರಮುಖ ಅಂಶಗಳು ಹೀಗಿವೆ :

- **ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರಿಗೆ ಹೆಚ್ಚಿದ ಪ್ರಾತಿನಿಧ್ಯ:**

ಹೊಸ ನಿಬಂಧನೆಗಳ ಪ್ರಕಾರ ಕಾರ್ಯಕಾರಿ ಸಮಿತಿಯಲ್ಲಿನ ಪರಿಶಿಷ್ಟ ಜಾತಿ ಪ್ರತಿನಿಧಿಯ ಸಂಖ್ಯೆಯನ್ನು ಒಂದರಿಂದ ಎರಡಕ್ಕೆ ಹೆಚ್ಚಿಸಲಾಗಿದೆ. ಪರಿಶಿಷ್ಟ ಪಂಗಡಕ್ಕೆ ಪ್ರಾತಿನಿಧ್ಯ ನೀಡಲು ಒಬ್ಬ ಪರಿಶಿಷ್ಟ ಪಂಗಡ ಪ್ರತಿನಿಧಿಗೆ ಹೊಸದಾಗಿ ಅವಕಾಶ ಕಲ್ಪಿಸಲಾಗಿದೆ. ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲು ಮಹಿಳಾ ಸಾಹಿತಿಯನ್ನು ಒಂದರಿಂದ ಎರಡಕ್ಕೆ ಹೆಚ್ಚಿಸಲಾಗಿದೆ. ಈ ಸಂಬಂಧ ಜಿಲ್ಲಾ ಹಾಗೂ ತಾಲ್ಲೂಕು ಕ.ಸಾ.ಪ. ಕಾರ್ಯಕಾರಿ ಸಮಿತಿಯಲ್ಲಿಯೂ ಸಹ ಮೇಲ್ಕಂಡಂತೆ ಪ್ರತಿನಿಧಿಗಳನ್ನು ಹೆಚ್ಚಿಸಿರುವುದರಿಂದ ತಲಾ ೧೭೩ ಪರಿಶಿಷ್ಟ ಜಾತಿ ಪ್ರತಿನಿಧಿಗಳಿಗೆ, ಪರಿಶಿಷ್ಟ ಪಂಗಡ ಪ್ರತಿನಿಧಿಗಳಿಗೆ ಹಾಗೂ ಮಹಿಳಾ ಸಾಹಿತಿಗಳಿಗೆ ಸೇರಿದಂತೆ ಒಟ್ಟು ೮೧೯ ಮಂದಿಗೆ ಹೊಸದಾಗಿ ಸ್ಥಾನಮಾನಗಳ ಪ್ರಾತಿನಿಧ್ಯವನ್ನು ಕಲ್ಪಿಸಿಕೊಡಲಾಗಿದೆ. ಈ ತಿದ್ದುಪಡಿ ನಿಬಂಧನೆಗಳನ್ನು ಜಾರಿಗೆ ತಂದಿರುವುದರಿಂದ "ಪ್ರಸ್ತುತ ಕಾರ್ಯಕಾರಿ ಸಮಿತಿಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳಾ ಪರವಾಗಿದೆ" ಎಂದು ಹೇಳಲು ಹರ್ಷವೆನಿಸುತ್ತದೆ.

ಮೇಲ್ಕಂಡ ಅನುಮೋದನೆಯಂತೆ ಹಾಗೂ ಕ.ಸಾ.ಪ. ನಿಬಂಧನೆಗಳನ್ವಯ ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಕಾರ್ಯಕಾರಿ ಸಮಿತಿಗೆ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಈ ಕೆಳಗಿನಂತೆ ಪ್ರತಿನಿಧಿಗಳನ್ನು ನೇಮಿಸಿ ದಿನಾಂಕ ೦೭-೦೩-೨೦೧೯ ರಂದು ಆದೇಶ ಹೊರಡಿಸಿರುತ್ತಾರೆ.

ಭಾರತೀಯ ಆಡಳಿತ ಸೇವಾ ಅಧಿಕಾರಿಯಾಗಿ ಈಚೆಗೆ ನಿವೃತ್ತರಾಗಿರುವ ಬೆಳಗಾವಿ ಜಿಲ್ಲೆ ಹಾಗೂ ಗಡಿಪ್ರದೇಶಗಳಲ್ಲಿ ಕನ್ನಡಕ್ಕೆ ಅಪಾರ ಸೇವೆ ಸಲ್ಲಿಸಿದ ಹಾಗೂ ಆಡಳಿತದಲ್ಲಿ ಸಂಪೂರ್ಣವಾಗಿ ಕನ್ನಡವನ್ನು ಬಳಸುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಹಿತೈಷಿಗಳೂ ಆದ ಶ್ರೀ ಪಿ.ಎ. ಮೇಘಣ್ಣವರ ಅವರನ್ನು ಪರಿಶಿಷ್ಟ ಜಾತಿ ಪ್ರತಿನಿಧಿಯನ್ನಾಗಿ ಮತ್ತು ಪ್ರಸಿದ್ಧ ವಿಮರ್ಶಕರಾಗಿ, ಸಂಶೋಧಕರಾಗಿ ಕನ್ನಡ ನಾಡು-ನುಡಿಗೆ ಸೇವೆ ಸಲ್ಲಿಸುತ್ತಿರುವ ಪ್ರಾಧ್ಯಾಪಕರಾದ ಪ್ರೊ. ನೀಲಗಿರಿ

ತಳವಾರ ಅವರನ್ನು ಪರಿಶಿಷ್ಟ ಪಂಗಡ ಪ್ರತಿನಿಧಿಯನ್ನಾಗಿ ಹಾಗೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸುತ್ತಿರುವ, ೧೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಡಾ. ಎಸ್.ಪಿ. ಉಮಾದೇವಿ ಅವರನ್ನು ಮಹಿಳಾ ಸಾಹಿತಿ ಪ್ರತಿನಿಧಿಯನ್ನಾಗಿ ಕೇಂದ್ರ ಕಾರ್ಯಕಾರಿ ಸಮಿತಿಗೆ ನೇಮಿಸಿಕೊಳ್ಳಲಾಗಿದೆ.

## ♦ ಕ.ಸಾ.ಪ. ಚುನಾವಣೆ ಪ್ರಕ್ರಿಯೆಯಲ್ಲಿ ಮಹತ್ವದ ಸುಧಾರಣೆಗಳು :

ಅನೇಕ ಸಂಘ ಸಂಸ್ಥೆಗಳ, ಲೋಕಸಭೆ, ವಿಧಾನಸಭೆ ಹಾಗೂ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯ್ತಿಗಳು, ಹಲವಾರು ಸಹಕಾರ ಸಂಘಗಳ ಅಧಿಕಾರ ಅವಧಿ ಐದು ವರ್ಷಗಳಿವೆ. ಸಾಹಿತ್ಯ ಪರಿಷತ್ತಿನಲ್ಲೂ ಐದು ವರ್ಷಗಳಿದ್ದಲ್ಲಿ ಅದು ಹಮ್ಮಿಕೊಳ್ಳುವ ಕಾರ್ಯಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು ಅನುಕೂಲವಾಗುವುದು. ಅಲ್ಲದೇ ಚುನಾವಣಾ ವೆಚ್ಚವನ್ನು ಮೂರು ವರ್ಷದ ಬದಲಾಗಿ ಐದು ವರ್ಷಕ್ಕೆ ಒಮ್ಮೆ ಮಾಡುವುದರಿಂದ ಸಾರ್ವಜನಿಕ ಹಣ ಅನವಶ್ಯಕವಾಗಿ ಖರ್ಚಾಗುವುದು ತಪ್ಪುತ್ತದೆ. ಈ ಸದುದ್ದೇಶದ ಹಿನ್ನೆಲೆಯಲ್ಲಿ ಹಾಗೂ ಅನೇಕ ಸದಸ್ಯರ ಹಲವಾರು ವರ್ಷಗಳ ಬೇಡಿಕೆಯನ್ನು ಮನಗಂಡು ಕಾರ್ಯಕಾರಿ ಸಮಿತಿಯ ಅವಧಿಯನ್ನು ಮೂರು ವರ್ಷದಿಂದ ಐದು ವರ್ಷಗಳಿಗೆ ಹೆಚ್ಚಿಸಲಾಗಿದೆ.

ಕ.ಸಾ.ಪ. ಚುನಾವಣಾ ಮತದಾರರ ಪಟ್ಟಿಯನ್ನು ಪ್ರಕಟಿಸಲು ಸಾಕಷ್ಟು ಕಾಲಾವಕಾಶ ನೀಡಬೇಕಾಗಿರುವುದರಿಂದ ಚುನಾವಣಾ ಕಾರ್ಯಾವಧಿಯನ್ನು ೭೫ ದಿನಗಳಿಂದ ೯೦ ದಿನಗಳವರೆಗೆ ಏರಿಸಲಾಗಿದೆ. ಇದರಿಂದಾಗಿ ಸದಸ್ಯರು ತಮ್ಮ ವಿಳಾಸ ತಿದ್ದುಪಡಿಗಳನ್ನು ಮಾಡಿಸಿ ಮತದಾನ ಮಾಡಲು ಹೆಚ್ಚಿನ ಅನುಕೂಲತೆ ಮಾಡಿಕೊಡಲಾಗಿದೆ.

ಪರಿಷತ್ತಿನ ಚುನಾವಣೆ ದಿನದಂದು ಬೆಂಗಳೂರಿನ ಮತದಾರರು ಸುಮಾರು ೧೫-೨೦ ಕಿ.ಮೀ. ದೂರದಿಂದ ನ್ಯಾಷನಲ್ ಕಾಲೇಜ್‌ಗೆ ಬಂದು ಮತ ಹಾಕಲು ಸಾಕಷ್ಟು ಕಷ್ಟಪಡಬೇಕಾಗಿದೆ. ಈ ಅನನುಕೂಲತೆಯಿಂದಾಗಿ ಶೇಕಡವಾರು ಮತದಾನ ತೀರ ಕಡಿಮೆಯಾಗುತ್ತಿದೆ. ಈ ದೃಷ್ಟಿಯಿಂದ ಮತದಾರರು ವಾಸಿಸುವ ವಿಧಾನಸಭಾ ಕ್ಷೇತ್ರದಲ್ಲಿಯೇ ಮತಕೇಂದ್ರವನ್ನು ಸ್ಥಾಪಿಸಬೇಕೆಂಬ ನಿಬಂಧನೆಯನ್ನು ಜಾರಿಗೊಳಿಸಲಾಗಿದೆ. ಅಂದರೆ ಬೆಂಗಳೂರಿನಲ್ಲಿ ಕೇವಲ ನ್ಯಾಷನಲ್ ಕಾಲೇಜ್ ಆವರಣವೊಂದರಲ್ಲೇ ೧೨ ಮತಗಟ್ಟೆಗಳು

ಇರುವುದನ್ನು ತಿದ್ದುಪಡಿ ಮಾಡಿ ೨೮ ವಿಧಾನಸಭಾ ಕ್ಷೇತ್ರಗಳಲ್ಲಿ ಆಯಾ ಕ್ಷೇತ್ರಕ್ಕೆ ಒಂದರಂತೆ ಆ ಕ್ಷೇತ್ರದಲ್ಲಿಯೇ ಒಂದು ಮತಗಟ್ಟೆ ನೀಡಲಾಗಿದೆ. ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇನ್ನುಮುಂದೆ ೨೮ ಕಡೆ ಮತಗಟ್ಟೆಗಳು ಇರಲಿವೆ. ಇದರಿಂದಾಗಿ ಬೆಂಗಳೂರಿಗರ ಬಹುಕಾಲದ ಬೇಡಿಕೆಯನ್ನು ಈಡೇರಿಸಿದಂತಾಗಿದೆ.

ಈ ಮೊದಲು ಬೆಂಗಳೂರು ಹೊರತುಪಡಿಸಿ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮಾತ್ರ ಮತಗಟ್ಟೆಗಳನ್ನು ಸ್ಥಾಪಿಸಲು ಅವಕಾಶ ನೀಡಲಾಗಿತ್ತು. ಇದರಿಂದಾಗಿ ತಾಲ್ಲೂಕು ಕೇಂದ್ರದಿಂದ ದೂರ ಇರುವ ಗ್ರಾಮಗಳಿಂದ ಸದಸ್ಯರು ಮತದಾನ ಮಾಡಲು ಕಷ್ಟವಾಗುತ್ತಿತ್ತು. ಪ್ರಸ್ತುತ ಆಜೀವ ಸದಸ್ಯರು ಹೆಚ್ಚಿರುವ ಹಿನ್ನೆಲೆಯಲ್ಲಿಯೂ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ, ಹಾಲಿ ಹೋಬಳಿ ಮಟ್ಟದಲ್ಲಿರುವ ಮತಕೇಂದ್ರಗಳಲ್ಲಿಯೂ ಹಾಗೂ ಇನ್ನಿತರೆ ಸ್ಥಳಗಳಲ್ಲಿ ಕನಿಷ್ಠ ೫೦೦ ಮತದಾರರಿದ್ದಲ್ಲಿ ಹೊಸದಾಗಿ ಮತಕೇಂದ್ರವನ್ನು ಸ್ಥಾಪಿಸಲು ನಿಬಂಧನೆಯನ್ನು ತಿದ್ದುಪಡಿ ಮಾಡಲಾಗಿದೆ. ಇದರಿಂದಾಗಿ ತಾಲ್ಲೂಕು ಕೇಂದ್ರದಿಂದ ದೂರದ ಊರುಗಳಲ್ಲಿದ್ದ ಸದಸ್ಯರಿಗೆ ಹೆಚ್ಚು ಅನುಕೂಲವಾಗಲಿದೆ.

ಪರಿಷತ್ತಿನ ಗುರುತಿನ ಚೀಟಿ ಇಲ್ಲದ ಅರ್ಹ ಕ.ಸಾ.ಪ. ಸದಸ್ಯರು ಜನತಾ ಪ್ರಾತಿನಿಧಿಕ ಕಾಯ್ದೆಯಲ್ಲಿ ಸೂಚಿಸಿರುವ ಇತರೆ ಗುರುತಿನ ಚೀಟಿಯನ್ನು ತೋರಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಮತದಾನ ಮಾಡಲು ಹಾಗೂ ಸದಸ್ಯರ ಸಭೆಯಲ್ಲಿ ಭಾಗವಹಿಸಲು ಹೊಸದಾಗಿ ಅನುವು ಮಾಡಿಕೊಡುವುದರ ಮೂಲಕ ಸದಸ್ಯರೆಲ್ಲರಿಗೂ ಅನುಕೂಲಕರ ಅವಕಾಶ ಮಾಡಿಕೊಡಲಾಗಿದೆ.

ಜಾರಿಗೊಂಡ ಈ ಮೇಲ್ಕಂಡ ಎಲ್ಲ ನಿಬಂಧನೆಗಳು ಹಾಲಿ ಕಾರ್ಯಕಾರಿ ಸಮಿತಿಯ ಆಡಳಿತಾವಧಿಗೆ ಅನ್ವಯವಾಗುವುದು ಅತ್ಯವಶ್ಯಕವಾಗಿರುತ್ತವೆ ಎಂಬುದಾಗಿ ವಿಶೇಷ ಸರ್ವ ಸದಸ್ಯರ ವಿಶೇಷ ಸಭೆಯು ಅನುಮೋದಿಸಿದ್ದನ್ನು ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರು ಮೇಲ್ಕಾಣಿಸಿದ ಆದೇಶದಂತೆ ಒಪ್ಪಿಗೆ ನೀಡಿರುತ್ತಾರೆ.

### ♦ ಮಾದರಿಯಾದ ರಾಜ್ಯಮಟ್ಟದ ಪ್ರಥಮ ಮಹಿಳಾ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಪರಿಷತ್ತು ೨೦೦೯ ರ ಮಾರ್ಚ್ ೨ ಮತ್ತು ೩ ರಂದು ಚಿಕ್ಕಮಗಳೂರಿನಲ್ಲಿ ಹಿರಿಯ ಸಾಹಿತಿಗಳಾದ ಡಾ. ಸುಧಾ ಮೂರ್ತಿಯವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಪ್ರಥಮ

ಮಹಿಳಾ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀಮತಿ ಕೆ.ಎಂ. ಜಾನಕಿ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಸಂಸದರಾದ ಶ್ರೀಮತಿ ಶೋಭಾ ಕರಂದ್ಲಾಜೆ, ಹಿರಿಯ ಬರಹಗಾರ್ತಿ ಶ್ರೀಮತಿ ರಾಜೇಶ್ವರಿ ತೇಜಸ್ವಿ ಆದಿಯಾಗಿ ಕನ್ನಡದ ಹಿರಿಯ ಲೇಖಕಿಯರು, ಕವಯತ್ರಿಯರು, ಮಹಿಳಾ ಹೋರಾಟಗಾರರು ಉಪನ್ಯಾಸಕರಾಗಿ, ಕವಿಗಳಾಗಿ ಪಾಲ್ಗೊಂಡು ಸಮ್ಮೇಳನವನ್ನು ಯಶಸ್ವಿಗೊಳಿಸಿದರು. ನಾಡು-ನುಡಿಗೆ ಅನುಪಮ ಸೇವೆ ಸಲ್ಲಿಸಿದ ಕೆಳಕಂಡ ಒಂಬತ್ತು ಜನ ಹಿರಿಯ ಸಾಧಕಿಯರಿಗೆ ಪರಿಷತ್ತು ಇದೇ ವೇಳೆ ಸನ್ಮಾನಿಸಿ ಗೌರವಿಸಿತು.

ಶ್ರೀಮತಿ ಹೇಮಲತಾ ಮಹಿಷಿ, ಶ್ರೀಮತಿ ಪ್ರೇಮಾಭಟ್, ಡಾ. ಲೀಲಾದೇವಿ ಆರ್. ಪ್ರಸಾದ್, ಡಾ. ಸರಸ್ವತಿ ಚಿಮ್ಮಲಗಿ, ಡಾ. ಆರ್. ಪೂರ್ಣಿಮಾ, ಶ್ರೀಮತಿ ರಂಜನಾ ನಾಯಕ್, ಶ್ರೀಮತಿ ಆರತಿ ಕೃಷ್ಣ, ಶ್ರೀಮತಿ ನೇಮಿಚಂದ್ರ, ಶ್ರೀಮತಿ ಗೌರಮ್ಮ ಬಸವೇಗೌಡ.

ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ : ಮಹಿಳಾ ನೋಟ", "ವಿವಿಧ ಕ್ಷೇತ್ರಗಳಿಗೆ ಮಹಿಳೆಯರ ಕೊಡುಗೆ", "ಮಹಿಳೆ ಮತ್ತು ಚಳವಳಿ" - ಕುರಿತು ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಈ ಮೇಲ್ಕಂಡ ಮೂರು ವಿದ್ವತ್ಪೂರ್ಣ ಪ್ರಬಂಧ ಮಂಡನೆಗಳ ಗೋಷ್ಠಿಗಳೊಂದಿಗೆ ನಾಡಿನ, ಹೊರನಾಡಿನ ಪ್ರಸಿದ್ಧ ಕವಯತ್ರಿಯವರಿಂದ ಕವಿಗೋಷ್ಠಿ ಹಾಗೂ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದವನ್ನು ಏರ್ಪಡಿಸಿದ್ದು, ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾಯಿತು.

- ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿರುವ ಶ್ರೀ ಕೃಷ್ಣರಾಜ ಪರಿಷನ್ಮಂದಿರ, ಅಕ್ಕಮಹಾದೇವಿ, ಸಭಾಂಗಣ ಹಾಗೂ ಕುವೆಂಪು ಸಭಾಂಗಣಗಳಲ್ಲಿ ಆಧುನಿಕ ಧ್ವನಿವರ್ಧಕ, ಮೈಕ್‌ಗಳ ವ್ಯವಸ್ಥೆ, ಉತ್ತಮ ದೀಪ ವ್ಯವಸ್ಥೆ ಜೊತೆಗೆ ವೇದಿಕೆ ಹಾಗೂ ಸೀನ್‌ಗಳನ್ನು ನವೀಕರಿಸಿ ಸುಸಜ್ಜಿತಗೊಳಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂಸ್ಥಾಪನಾ ದಿನಾಚರಣೆ, ಕನ್ನಡ ರಾಜ್ಯೋತ್ಸವ, ಸಾಹಿತ್ಯ ದಿನಾಚರಣೆ ಹಾಗೂ ಗಣರಾಜ್ಯೋತ್ಸವ ನಿಮಿತ್ತ ಧ್ವಜಾರೋಹಣವನ್ನು ನೆರವೇರಿಸುತ್ತಿದ್ದು, ಅದಕ್ಕಾಗಿ ಪರಿಷತ್ತಿನ ಆವರಣದಲ್ಲಿ ನೂತನ ಧ್ವಜಸ್ತಂಭವನ್ನು ನಿರ್ಮಾಣ ಮಾಡಿಸಲಾಗಿದೆ.

ಪುಸ್ತಕ ಮುದ್ರಣ ಕಾರ್ಯ ಮತ್ತಷ್ಟು ಕ್ಷಿಪ್ರವಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಆಧುನಿಕ ತಂತ್ರಜ್ಞಾನವುಳ್ಳ ೪೫" ಪ್ರೋಗ್ರಾಂನ ಹೊಸ ಕಟ್ಟಿಂಗ್ ಮಿಷನ್ ಅನ್ನು ಅಳವಡಿಸಲಾಗಿದೆ.

- **ಮೈಸೂರಿನಲ್ಲಿ ನಡೆದ ಶ್ರೀ ಜಯಚಾಮರಾಜ ಒಡೆಯರ್ ಜನ್ಮ ಶತಮಾನೋತ್ಸವ**

ಸಮಗ್ರ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸುವಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಪೂರ್ವಜರು ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ನಾಡು-ನುಡಿಗೆ, ಸಂಗೀತ ಕ್ಷೇತ್ರಕ್ಕೆ ಅವರ ಸೇವೆಯು ಬಹಳ ಮೌಲ್ಯಯುತವಾದದ್ದು. ಶ್ರೀ ಜಯಚಾಮರಾಜ ಒಡೆಯರಿಗೆ ೨೦೧೯ನೇ ಇಸವಿಗೆ ೧೦೦ ವರ್ಷವಾಗುವುದರಿಂದ ಅವರ ಜನ್ಮಶತಮಾನೋತ್ಸವ ಉದ್ಘಾಟನಾ ಸಮಾರಂಭವನ್ನು ಮೈಸೂರಿನಲ್ಲಿ ೨೦೧೯ರ ಜೂನ್ ೨೨ ರಂದು ಆಯೋಜಿಸಲಾಗಿತ್ತು. ಜಗನ್ಮೋಹನ ಅರಮನೆಯಲ್ಲಿ ನಡೆದ ಈ ಸಮಾರಂಭವನ್ನು ಶ್ರೀ ಸುತ್ತೂರು ಕ್ಷೇತ್ರದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ರಾಜವಂಶಸ್ಥ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು. ನಾಡೋಜ ಡಾ. ಮನು ಬಳಿಗಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭವು ಅತ್ಯಂತ ಯಶಸ್ವಿಯಾಗಿ ಜರುಗಿತು. ಕರ್ನಾಟಕದಲ್ಲಿ ಒಡೆಯರ್ ಅವರ ಶತಮಾನೋತ್ಸವವನ್ನು ಪರಿಷತ್ತು ಮೊದಲಿಗನಾಗಿ ಏರ್ಪಡಿಸಿ ತನ್ನ ಅಧ್ಯಕ್ಷರೂ ಆಗಿದ್ದ ಒಡೆಯರ್ ಅವರ ಸೇವೆಯನ್ನು ಸ್ಮರಿಸಿತು.

ಮೈಸೂರು ಮಹಾಪೌರರಾದ ಶ್ರೀಮತಿ ಪುಷ್ಪಲತಾ ಜಗನ್ನಾಥ್ ಅತಿಥಿಗಳಾಗಿ ಭಾಗವಹಿಸಿದ್ದರು. ಡಾ. ಎನ್.ಎಸ್. ತಾರಾನಾಥ್ ಅವರಿಂದ ಶ್ರೀ ಜಯಚಾಮರಾಜ ಒಡೆಯರ್ ಕುರಿತು ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು. ಅದೇ ದಿನ ಮಧ್ಯಾಹ್ನ "ಶ್ರೀ ಜಯಚಾಮರಾಜ ಒಡೆಯರ್ ಜೀವನ ಸಾಧನೆ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿತ್ತು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ ಬಿ.ಎಸ್. ಶ್ರೀಧರರಾಜ ಅರಸು ವಹಿಸಿಕೊಂಡಿದ್ದರು. ಶ್ರೀ ಆರ್. ರಾಜಚಂದ್ರ ಅವರು "ಶ್ರೀ ಜಯಚಾಮರಾಜ ಒಡೆಯರ್ ಬದುಕು" ಕುರಿತು ಹಾಗೂ ಸಂಗೀತ ವಿದ್ವಾನ್ ಡಾ.

ಸಿ.ಎ. ಶ್ರೀಧರ ಅವರು "ಶಾಸ್ತ್ರೀಯ ಸಂಗೀತಕ್ಕೆ ನೀಡಿದ ಕೊಡುಗೆ" ಕುರಿತು ಮಾತನಾಡಿದರು. ಡಾ. ಎಂ.ಜಿ.ಆರ್. ಅರಸ್ ಈ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇದಲ್ಲದೆ ವಾರ್ತಾ ಮತ್ತು ಪ್ರಸಾರ ಇಲಾಖೆಯಿಂದ ಶ್ರೀ ಜಯಚಾಮರಾಜ ಒಡೆಯರ್ ಕುರಿತು ಸಾಕ್ಷ್ಯಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಸಂಜೆ ಶ್ರೀ ಜಯಚಾಮರಾಜ ಒಡೆಯರ್ ಕೃತಿಗಳ ಗಾಯನವನ್ನು ಏರ್ಪಡಿಸಲಾಗಿತ್ತು. ಈ ಎಲ್ಲ ಕಾರಣಗಳಿಂದ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

- **ಶ್ರೀ ಜಯಚಾಮರಾಜ ಒಡೆಯರ್ ಜನ್ಮಶತಮಾನೋತ್ಸವ ಆಚರಣೆಯ ಸಮಾರೋಪ ಸಮಾರಂಭ, ಬೆಂಗಳೂರು**

ಶ್ರೀ ಜಯಚಾಮರಾಜ ಒಡೆಯರ್ ಅವರ ಜನ್ಮಶತಮಾನೋತ್ಸವ ಆಚರಣೆಯ ಸಮಾರೋಪ ಸಮಾರಂಭವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ ೨೦೧೯ರ ಆಗಸ್ಟ್ ೩ ರಂದು ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಹಿರಿಯ ವಿದ್ವಾಂಸರಾದ ಡಾ. ಪ್ರಧಾನ ಗುರುದತ್ತ ಅವರು ಶ್ರೀ ಜಯ ಚಾಮರಾಜ ಒಡೆಯರ್ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಅಂದು ಮಧ್ಯಾಹ್ನ ನಡೆದ "ಕನ್ನಡ ನಾಡಿಗೆ ಶ್ರೀ ಜಯಚಾಮರಾಜ ಒಡೆಯರ ಕೊಡುಗೆ" ಕುರಿತು ಗೋಷ್ಠಿಯ ಅಧ್ಯಕ್ಷತೆಯನ್ನು ಖ್ಯಾತ ಇತಿಹಾಸತಜ್ಞರಾದ ಡಾ. ಎಚ್.ಎಸ್. ಗೋಪಾಲರಾವ್ ವಹಿಸಿದ್ದರು. ಅದೇ ಗೋಷ್ಠಿಯಲ್ಲಿ ಶಿಕ್ಷಣ, ಸಮಾಜ ಹಾಗೂ ಆಡಳಿತ ಕ್ಷೇತ್ರವನ್ನು ಕುರಿತು ಡಾ. ಗೋವಿಂದರಾಜು ಮತ್ತು 'ಕೃಷಿ, ಕೈಗಾರಿಕೆ ಹಾಗೂ ಆರೋಗ್ಯ ಕ್ಷೇತ್ರದ ಕುರಿತು ಡಾ.ಎಸ್. ಚಂದ್ರಶೇಖರ್ ಹಾಗೂ 'ಸಾಹಿತ್ಯ ಕಲೆ ಹಾಗೂ ಸಂಗೀತ ಕ್ಷೇತ್ರವನ್ನು ಕುರಿತು ಡಾ. ಆರ್. ಕೆ. ಪದ್ಮನಾಭ ವಿಷಯವನ್ನು ಮಂಡಿಸಿದರು. ಗೋಷ್ಠಿಯ ನಂತರ ವಿದುಷಿ ಶ್ರೀಮತಿ ಅಶ್ವಿನಿ ಸತೀಶ್ ಮತ್ತು ಶ್ರೀಮತಿ ಶಿಲ್ಪಾ ಶಶಿಧರ ತಂಡದವರ ಶ್ರೀ ಜಯಚಾಮರಾಜ ಒಡೆಯರ್ ಕೃತಿಗಳ ಗಾಯನ ಏರ್ಪಡಿಸಲಾಗಿತ್ತು, ಇದೇ ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಪ್ರಸಾರ ಇಲಾಖೆಯಿಂದ

ಶ್ರೀ ಜಯಚಾಮರಾಜ ಒಡೆಯರ್ ಅವರ ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ ರಾಜ್ಯ ಪತ್ರಾಗಾರ ಇಲಾಖೆಯಿಂದ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

## ♦ ಚಾರಿತ್ರಿಕ ದಾಖಲೆಯಾದ ದಲಿತ ಸಾಹಿತ್ಯ ಸಂಪುಟಗಳ ಪ್ರಕಟಣೆ ಹಾಗೂ ಬಿಡುಗಡೆ

ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯ ಚರಿತ್ರೆಗೆ ಮತ್ತೊಂದು 'ಗರಿ' ಮೂಡಿಸಿದ ಕೀರ್ತಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಸಲ್ಲಬೇಕು. ನಾಡೋಜ ಡಾ. ಮನು ಬಳಿಗಾರ್ ಅವರು ಹೊಸಯೋಜನೆಗಳನ್ನು ರೂಪಿಸುವುದರಲ್ಲಿ ಹಾಗೂ ಪ್ರಥಮಗಳನ್ನು ಸಾಧಿಸಿ ತೋರಿಸುವಲ್ಲಿ ಅನುಭವಿಗಳು. ಅಂತಹವುಗಳಲ್ಲಿ ಈ ದಲಿತ ಸಾಹಿತ್ಯ ಸಂಪುಟಗಳ ಯೋಜನೆ ಮತ್ತು ಪ್ರಕಟಣೆಯೂ ಒಂದು.

ಡಾ. ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ದಲಿತ ಸಾಹಿತ್ಯ ಚರಿತ್ರೆಯ ೧೦ ಸಂಪುಟಗಳ ಪ್ರಕಟಣೆಯ ಯೋಜನೆ ರೂಪುಗೊಂಡಿತು. ಈ ಸಮಿತಿಯ ಸಂಚಾಲಕರಾಗಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಸದಸ್ಯರಾಗಿ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಡಾ. ಅರ್ಜುನ ಗೊಳಸಂಗಿ, ಡಾ. ಬಿ.ಟಿ.ಲಲಿತಾ ನಾಯಕ್ ಅವರು ನೇಮಕಕೊಂಡು ಕಾರ್ಯ ಪ್ರಾರಂಭಿಸಿದರು. ಒಂದು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿಯೇ ಈ ಯೋಜನೆ ಸಾಕಾರಗೊಂಡು ಇದೀಗ ಕೆಳಕಂಡ ಐದು ಸಂಪುಟಗಳು ೧೭, ೧೮ ಆಗಸ್ಟ್ ೨೦೧೯ ರಂದು ಕೋಲಾರದಲ್ಲಿ ನಡೆದ ರಾಜ್ಯಮಟ್ಟದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಯಾಗಿವೆ. ಉಳಿದ ೫ ಸಂಪುಟಗಳು ಪ್ರಕಟಣೆಗೆ ಸಿದ್ಧವಾಗುತ್ತಿವೆ.

೧. ಸಂಶೋಧನೆ ಸಂಪುಟ - ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

೨. ಕಾವ್ಯ ಸಂಪುಟ - ಡಾ. ಮೂಡ್ನಾಕೂಡು ಚಿನ್ನಸ್ವಾಮಿ

೩. ಮಾನವಿಕ ಸಂಪುಟ - ಡಾ. ಅರ್ಜುನ ಗೊಳಸಂಗಿ

೪. ಜಾನಪದ ಸಂಪುಟ - ಡಾ. ಹೆಚ್. ಟಿ. ಪೋತೆ

೫. ಸಣ್ಣಕಥೆ ಸಂಪುಟ - ಡಾ. ಸಣ್ಣರಾಮ

೬. ವಿಚಾರಸಾಹಿತ್ಯ ಸಂಪುಟ - ಡಾ. ಬಿ.ಎಂ. ಪುಟ್ಟಯ್ಯ

೭. ವಿಮರ್ಶಾ ಸಂಪುಟ - ಪ್ರೊ ಎಚ್. ದಂಡಪ್ಪ

೮. ಅಂಕಣಬರಹ ಸಂಪುಟ - ಡಾ. ಅಣ್ಣಮ್ಮ

೯. ಆತ್ಮಚರಿತ್ರೆ ಸಂಪುಟ - ಡಾ. ಟಿ. ಯಲ್ಲಪ್ಪ

೧೦. ನಾಟಕ ಸಂಪುಟ - ಡಾ. ಜಯದೇವಿ ಗಾಯಕವಾಡ

ಈ ಸಂಪುಟಗಳ ವಿಶೇಷವೆಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಾಹಿತಿಗಳು ಬರೆದಿರುವ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮತ್ತು ಶೋಷಿತ ಸಮುದಾಯ ಹಾಗೂ ಶ್ರಮ ಮೂಲ ಸಮುದಾಯಗಳ ವಿಷಯ ವಸ್ತುಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಮಾಡುವದು : 'ಈ ಚಾರಿತ್ರಕ ಯೋಜನೆ' ಕನ್ನಡ ಸಾಹಿತ್ಯ ಪರಿಷತ್ತಿನಲ್ಲಷ್ಟೇ ಅಲ್ಲ ಮತ್ತು ಕನ್ನಡ ಸಾಹಿತ್ಯ ಲೋಕದಲ್ಲಿಯೇ ಪ್ರಥಮವಾದುದು ಎಂಬುದು ಪರಿಷತ್ತಿನ ಹೆಗ್ಗಳಿಕೆ.

- **'ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜಿಲ್ಲಾ ಕಸಾಪ ಕನ್ನಡ ಭವನ ನಿರ್ಮಾಣ ಮತ್ತು ಅಭಿವೃದ್ಧಿಗಾಗಿ "ಬಿಡುಗಡೆಯಾದ ಅನುದಾನದ ವಿವರ".**

**ತುಮಕೂರು ಜಿಲ್ಲೆ**

| | |
|---|---|
| ೧ ತುಮಕೂರು ನಗರ (ಕನ್ನಡ ಭವನ ನಿರ್ಮಾಣ) | ೫೦೦೦೦೦೦ |
| ೨ ಮಧುಗಿರಿ ತಾಲ್ಲೂಕು (ಕನ್ನಡ ಭವನ ನಿರ್ಮಾಣ) | ೫೦೦೦೦೦೦ |
| ೩ ತುರುವೇಕೆರೆ (ಕನ್ನಡ ಭವನ ಸಭಾಂಗಣ ನಿರ್ಮಾಣ) | ೧೦೦೦೦೦೦ |

**ಮಂಡ್ಯ ಜಿಲ್ಲೆ**

| | |
|---|---|
| ೧ ಮಂಡ್ಯ ಜಿಲ್ಲೆ (ದುರಸ್ತಿಗಾಗಿ) | ೧೦೦೦೦೦ |
| ೨ ಪಾಂಡವಪುರ (ಪೀಠೋಪಕರಣ) | ೧೦೦೦೦೦ |
| ೩ ಮಂಡ್ಯ ಜಿಲ್ಲೆ (ದುರಸ್ತಿಗಾಗಿ) | ೧೦೦೦೦೦ |
| ೪ ಮಂಡ್ಯ ಜಿಲ್ಲೆ (ಮೈಕ್ ಸೆಟ್ ಮತ್ತು ಸಲಕರಣೆಗಳಿಗಾಗಿ | ೬೪೦೦೦ |

**ಗದಗ ಜಿಲ್ಲೆ**

| | |
|---|---|
| ೧ ರೋಣ ತಾಲ್ಲೂಕು (ಕನ್ನಡ ಭವನ ನಿರ್ಮಾಣ) | ೧೦೦೦೦೦೦ |
| ೨ ಗದಗ ಜಿಲ್ಲೆ (ಕನ್ನಡ ಭವನ ಪೀಠೋಪಕರಣ) | ೧೦೦೦೦೦೦ |
| ೩ ನರಗುಂದ (ಕನ್ನಡ ಭವನ ನಿರ್ಮಾಣ) | ೫೦೦೦೦೦ |
| ೪ ರೋಣ ತಾಲ್ಲೂಕು (ಕನ್ನಡ ಭವನ ನಿರ್ಮಾಣ) | ೧೦೦೦೦೦೦ |
| ೫ ಲಕ್ಷ್ಮೇಶ್ವರ ತಾಲ್ಲೂಕು (ಕನ್ನಡ ಭವನ ನಿರ್ಮಾಣ) | ೧೦೦೦೦೦೦ |

ಯಾದಗಿರಿ ಜಿಲ್ಲೆ ೧ ಯಾದಗಿರಿ (ಕನ್ನಡ ಭವನ ನಿರ್ಮಾಣ) ೧೩೦೦೦೦೦

**ಕಲಬುರಗಿ ಜಿಲ್ಲೆ**

೧ ಕಲಬುರಗಿ ಜಿಲ್ಲೆ (ಸಭಾ ಭವನ ನಿರ್ಮಾಣ) ೧೭೦೦೦೦೦

೨ ಕಲಬುರಗಿ ಜಿಲ್ಲೆ (ಸಭಾ ಭವನ ವಿವಿಧ ಸಾಮಗ್ರಿಗಳಿಗೆ) ೩೦೦೦೦೦

**ಬೆಳಗಾವಿ ಜಿಲ್ಲೆ**

೧ ರಾಮದುರ್ಗ ತಾಲ್ಲೂಕು (ಡಾ. ಡಿ.ಎಸ್. ಕರ್ಕಿ ಕನ್ನಡ ಭವನ) ೫೦೦೦೦೦

೨ ಸವದತ್ತಿ ತಾಲ್ಲೂಕು (ದಿ. ಡಾ. ಶಂಬಾ ಜೋಶಿ ಕನ್ನಡ ಭವನ) ೫೦೦೦೦೦

೩ ಹುಕ್ಕೇರಿ ತಾಲ್ಲೂಕು ಘೋಡಗೇರಿಯಲ್ಲಿ

(ಡಾ. ಚಂದ್ರಶೇಖರ ಕಂಬಾರ ಕನ್ನಡ ಭವನ) ೨೦೦೦೦೦೦

೪ ಖಾನಾಪುರ ತಾಲ್ಲೂಕು ಇಟಗಿ (ಕದಂಬ ಕನ್ನಡ ಭವನ) ೫೦೦೦೦೦

೫ ಬೆಳಗಾವಿ ಜಿಲ್ಲೆ, ಬೆಳಗಾವಿ ನಗರ (ಕನ್ನಡ ಭವನ ಪೀಠೋಪಕರಣ) ೯೦೦೦೦

**ಧಾರವಾಡ ಜಿಲ್ಲೆ**

೧ ಧಾರವಾಡ

(ಕನ್ನಡ ಭವನ ದುರಸ್ತಿ ಹಾಗೂ ಪೀಠೋಪಕರಣ) ೧೦೦೦೦೦೦

**ದಕ್ಷಿಣ ಕನ್ನಡ ಜಿಲ್ಲೆ**

೧ ಬಂಟ್ವಾಳ ತಾಲ್ಲೂಕು (ಕನ್ನಡ ಭವನ ನಿರ್ಮಾಣ) ೧೦೦೦೦೦೦

**ಹಾವೇರಿ ಜಿಲ್ಲೆ**

೧ ರಾಣೇಬೆನ್ನೂರು (ಕನ್ನಡ ಭವನ ಪೀಠೋಪಕರಣ) ೫೦೦೦೦೦

**ಕೊಪ್ಪಳ ಜಿಲ್ಲೆ**

೧ ಕೊಪ್ಪಳ ಜಿಲ್ಲೆ (ಕಸಾಪ ಮೂಲಭೂತ ಸೌಕರ್ಯಕ್ಕಾಗಿ) ೪೦೦೦೦೦

೨ ಕೊಪ್ಪಳ ಜಿಲ್ಲೆ (ಚಿಲಕಮುಖಿ ಗ್ರಾಮದಲ್ಲಿ ಕನ್ನಡ ಭವನ) ೫೦೦೦೦೦

೩ ತಾವರಗೇರಾ (ಕನ್ನಡ ಸಾಹಿತ್ಯ ಭವನ) ೮೦೦೦೦೦

**ಶಿವಮೊಗ್ಗ ಜಿಲ್ಲೆ**

ಅಕ್ಕಮಹಾದೇವಿ ಸಮಿತಿ (ರಿ). ೩೦೦೦೦೦

ಶಿಕಾರಿಪುರ ತಾಲ್ಲೂಕಿನ ಉಡುತಡಿ ಗ್ರಾಮ (ಕನ್ನಡ ಸಾಹಿತ್ಯ ಭವನ)

**ಬೆಂ.ಗ್ರಾ.ಜಿಲ್ಲೆ**

ದೇವನಹಳ್ಳಿ ತಾಲ್ಲೂಕಿನಲ್ಲಿ ಕನ್ನಡ ಸಾಹಿತ್ಯ ಭವನ ೫೦೦೦೦೦

**ಬಾಗಲಕೋಟೆ ಜಿಲ್ಲೆ**

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡದ ದುರಸ್ತಿಗಾಗಿ ೫೦೦೦೦೦

**ಚಿತ್ರದುರ್ಗ ಜಿಲ್ಲೆ**

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನಲ್ಲಿ ಕನ್ನಡ ಭವನ ೫೦೦೦೦೦

**ಬೆಂಗಳೂರು ನಗರ ಜಿಲ್ಲೆ**

ಆನೇಕಲ್ ತಾಲ್ಲೂಕು ಮರಸೂರು ಗ್ರಾಮದಲ್ಲಿ ಕನ್ನಡ ಭವನ ೫೦೦೦೦೦

- **ರಾಜ್ಯಾದ್ಯಂತ ಕೋಟ್ಯಾಂತರ ರೂಪಾಯಿ ಮೌಲ್ಯದ ಕಸಾಪ ಭವನ / ನಿವೇಶನ**

ರಾಜ್ಯಾದ್ಯಂತ ಜಿಲ್ಲಾ, ತಾಲ್ಲೂಕು, ಹೋಬಳಿ ಹಾಗೂ ಗ್ರಾಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ನಿವೇಶನಗಳನ್ನು ದಾನರೂಪ / ಕೊಡಗೆಯಾಗಿ ಪಡೆದು ಅಲ್ಲಿ ಸಾಹಿತ್ಯ / ಸಾಂಸ್ಕತಿಕ ಭವನಗಳ ನಿರ್ಮಾಣಕ್ಕೆ ಮೇಲ್ಕಾಣಿಸಿದಂತೆ ಅಂದಾಜು ೩.೫೦ ಕೋಟಿ ರೂಪಾಯಿಗಳ ಅನುದಾನ ನೀಡಲಾಗಿದೆ. ಈ ಎಲ್ಲಾ ನಿವೇಶನಗಳು ಹಾಗೂ ಭವನಗಳು ಕನ್ನಡ ಸಾಹಿತ್ಯ ಪರಿಷತ್ತಿನ ಒಡೆತನದಲ್ಲಿರುವುದರಿಂದ ಆರ್ಥಿಕ ದೃಷ್ಟಿಯಿಂದಲೂ ಪರಿಷತ್ತಿಗೆ ಕೋಟ್ಯಾಂತರ ರೂ. ಮೌಲ್ಯದ ಸ್ಥಿರಾಸ್ತಿ ಒದಗಿರುವುದನ್ನು ಗಮನಿಸಬಹುದಾಗಿದೆ. ಈ ಸೌಲಭ್ಯಗಳಿಂದಾಗಿ ರಾಜ್ಯಾದ್ಯಂತ ಸಾಹಿತ್ಯ ಮತ್ತು ಸಂಸ್ಕೃತಿ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದಂತಾಗಿದೆ.

- **ಕನ್ನಡ ಭವನಗಳ ಶಂಕು ಸ್ಥಾಪನೆ / ಉದ್ಘಾಟನೆ | ಭೂಮಿ ಪೂಜೆ**

೧. ಬೆಳಗಾವಿ ಜಿಲ್ಲಾ ಹುಕ್ಕೇರಿ ತಾಲ್ಲೂಕು ಘೋಡಗೇರಿಯಲ್ಲಿ ಡಾ. ಚಂದ್ರಶೇಖರ ಕಂಬಾರ ಕನ್ನಡ ಸಾಹಿತ್ಯ ಭವನದ ಶಂಕು ಸ್ಥಾಪನೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ದಿನಾಂಕ ೧೯-೧೧೨೦೧೮ ರಂದು ನೆರವೇರಿಸಿದರು.

ಹುಕ್ಕೇರಿ ಕ್ಷೇತ್ರದ ಶಾಸಕರಾದ ಶ್ರೀ ಉಮೇಶ್ ಕತ್ತಿ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಅದು ಮುಂದಿನ ತಿಂಗಳು ಉದ್ಘಾಟನೆ ಆಗಲಿದೆ.

೨. ಗದಗ ಜಿಲ್ಲಾ ರೋಣ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಭವನದ ಉದ್ಘಾಟನೆಯನ್ನು ರೋಣ ಶಾಸಕರಾದ ಶ್ರೀ ಕಳಕಪ್ಪ ಬಂಡಿ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ೨೦೧೯ರ ಜೂನ್ ೧೭ ರಂದು ನೆರವೇರಿಸಿದರು.

೩. ಗದಗ ಜಿಲ್ಲಾ ಲಕ್ಷ್ಮೇಶ್ವರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಭವನದ ಭೂಮಿ ಪೂಜೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ೨೦೧೯ರ ಜೂನ್ ೧೭ ರಂದು ನೆರವೇರಿಸಿದರು. ಶಿರಹಟ್ಟಿ
ಶಾಸಕರಾದ ಶ್ರೀ ರಾಮಣ್ಣ ಲಮಾಣಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

### ♦ ಕನ್ನಡ / ಸಾಂಸ್ಕೃತಿಕ ಭವನಗಳಿಗೆ ಅಪೆಕ್ಸ್ ಬ್ಯಾಂಕ್ ವತಿಯಿಂದ ಮತ್ತೆ ೧ ಕೋಟಿ ರೂಪಾಯಿ ಆರ್ಥಿಕ ಸಹಾಯ

ರಾಜ್ಯದಾದ್ಯಂತ ಕನ್ನಡ ಸಾಹಿತ್ಯ ಪರಿಷತ್ತಿನ ಸಹಾಯದಿಂದ ನಿರ್ಮಾಣವಾಗುತ್ತಿರುವ ಹಾಗೂ ಆಗಲಿರುವ ಕನ್ನಡ / ಸಾಂಸ್ಕೃತಿಕ ಭವನಗಳಿಗೆ ನೆರವು ನೀಡುವ ಸದುದ್ದೇಶದಿಂದ ಕರ್ನಾಟಕ ರಾಜ್ಯ ಕೋ-ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಕೆ.ಎನ್. ರಾಜಣ್ಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರಿಗೆ ಒಂದು ಕೋಟಿ ರೂಪಾಯಿಗಳ ಚೆಕ್ ಅನ್ನು ನೀಡಿದರು. ಈ ಅನುದಾನದಲ್ಲಿ ತುಮಕೂರು ಜಿಲ್ಲೆಯಲ್ಲಿನ ತುಮಕೂರು ನಗರದ ಕನ್ನಡ ಭವನಕ್ಕೆ ರೂ. ೫೦ ಲಕ್ಷ ಅನುದಾನ ನೀಡಲಾಗಿತ್ತು.

೨ನೆಯ ಬಾರಿಗೆ ಶ್ರೀ ಕೆ.ಎನ್. ರಾಜಣ್ಣ ಅವರು ೩೧-೦೩೨೦೧೮ ರಂದು ಅಪೆಕ್ಸ್ ಬ್ಯಾಂಕಿನಿಂದ ಮನಃ ಒಂದು ಕೋಟಿ ರೂ.ಗಳನ್ನು ಕನ್ನಡ ಭವನ ನಿರ್ಮಾಣಕ್ಕಾಗಿ ದೇಣಿಗೆ ನೀಡಿದರು. ತುಮಕೂರು ನಗರ ಕನ್ನಡ ಭವನಕ್ಕೆ ರೂ. ೫೦ ಲಕ್ಷ ಹಾಗೂ ಮಧುಗಿರಿ ತಾಲ್ಲೂಕು ಕನ್ನಡ ಭವನ ನಿರ್ಮಾಣಕ್ಕೆ ರೂ. ೫೦ ಲಕ್ಷ ಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಶ್ರೀ ಕೆ.ಎನ್. ರಾಜಣ್ಣ ಅವರಿಗೆ ಹಾಗೂ ಅಪೆಕ್ಸ್ ಬ್ಯಾಂಕ್‌ಗೆ ಕನ್ನಡ ಸಾಹಿತ್ಯ ಪರಿಷತ್ತು ಸದಾ ಋಣಿಯಾಗಿದೆ.

## ♦ ಕನ್ನಡ - ನೇಪಾಳಿ ಪರಸ್ಪರ ಸಾಹಿತ್ಯ, ಸಂಸ್ಕೃತಿ ಪ್ರಚಾರ : ಮಹತ್ವದ ಪ್ರಥಮ ಅಂತರರಾಷ್ಟ್ರೀಯ ಒಪ್ಪಂದ ಹಾಗೂ ಅನುಷ್ಠಾನ

೨೦೧೭ರ ಮೇ ೪ ರಂದು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ನೇಪಾಳಿ ಕಲಾಡಾಟ್‌ಕಾಂ ಪ್ರತಿಷ್ಠಾನದವರು ಈ ಮೇಲಿನ ಒಪ್ಪಂದ ಮಾಡಿಕೊಂಡರು. ಇದರ ಉದ್ದೇಶವೆಂದರೆ ಕನ್ನಡದ ೫೧ ಕವಿಗಳ ೫೧ ಕವನಗಳನ್ನು ನೇಪಾಳಿ ಭಾಷೆಗೆ ಭಾಷಾಂತರಗೊಳಿಸಿ ಕನ್ನಡ ನಾಡು ನುಡಿ ಸಂಸ್ಕೃತಿಯ ಬಗ್ಗೆ ನೇಪಾಳದಲ್ಲಿ ಕನ್ನಡ ಸಂಸ್ಕೃತಿ ಪಸರಿಸುವಂತೆ ಮಾಡುವುದು. ಹಾಗೆಯೇ ನೇಪಾಳಿ ಭಾಷೆಯಲ್ಲಿರುವ ೫೦ ಕವಿತೆಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸುವುದು. ಈ ಮೂಲಕ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಜಗತ್ತಿನಾದ್ಯಂತ ಪ್ರಚಾರ ಮಾಡುವುದು. ಈ ಯೋಜನೆಯ ಘನೋದ್ದೇಶವಾಗಿದೆ. ಇದರ ಭಾಗವಾಗಿ :

“ಭಾರತ್ ಶಾಶ್ವತ್ ಆವಾಜ್” ಕೃತಿ ಬಿಡುಗಡೆ : ಮೇಲಿನ ಉದ್ದೇಶದಂತೆ ಈಗಾಗಲೇ ನೇಪಾಳಿ ಭಾಷೆಯಲ್ಲಿ ಕುವೆಂಪು, ದ.ರಾ. ಬೇಂದ್ರೆ, ಅನಂತಮೂರ್ತಿ, ವಿ.ಕೃ. ಗೋಕಾಕ, ಗೋಪಾಲಕೃಷ್ಣ ಅಡಿಗ, ಜಿ.ಎಸ್. ಶಿವರುದ್ರಪ್ಪ, ಡಾ. ಸಿದ್ದಲಿಂಗಯ್ಯ, ಪ್ರೊ. ಬರಗೂರು ರಾಮಚಂದ್ರಪ್ಪ, ಸು.ರಂ. ಎಕ್ಕುಂಡಿ, ಎಚ್.ಎಸ್. ವೆಂಕಟೇಶಮೂರ್ತಿ ಮುಂತಾದ ೫೧ ಕವಿಗಳ ೫೧ ಕವನಗಳು ಭಾಷಾಂತರಗೊಂಡು 'ಭಾರತ್ ಶಾಶ್ವತ್ ಆವಾಜ್' ಎನ್ನುವ ಕೃತಿ ಪ್ರಕಟಗೊಂಡಿದೆ. ೨೦೧೯ರ ಮಾರ್ಚ್ ೧೧ ರಂದು ನೇಪಾಳದ ರಾಜಧಾನಿ ಕಠ್‌ಮಂಡುವಿನಲ್ಲಿ ನೇಪಾಳದ ಗೌರವಾನ್ವಿತ ಉಪರಾಷ್ಟ್ರಪತಿಗಳಾದ ಶ್ರೀ ನಂದ ಬಹದ್ದೂರ್ ಪುನ್ ಅವರು ಈ ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ಸಮಾರಂಭಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರನ್ನು ಅತಿಥಿಯಾಗಿ ಆಹ್ವಾನಿಸಿದ್ದರು. ಮತ್ತೊಂದು ವಿಶೇಷವೆಂದರೆ ಅದೇ ಸಮಾರಂಭದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಹಿತ್ಯಕ್ಕೆ ಸಲ್ಲಿಸಿದ ಅನುಪಮ ಸೇವೆಗಾಗಿ ಡಾ. ಮನು ಬಳಿಗಾರ್ ಅವರಿಗೆ ಆ ದೇಶದ ಪ್ರತಿಷ್ಠಿತ **'ನೇಪಾಳಿ ಸಮ್ಮಾನ್”** ಅಂತರರಾಷ್ಟ್ರೀಯ ಪುರಸ್ಕಾರ ನೀಡಿ ಗೌರವಿಸಲಾಯಿತು. ಇದು ಕನ್ನಡ ಸಾಹಿತ್ಯ ಲೋಕದಲ್ಲಿ ಕನ್ನಡಿಗರೊಬ್ಬರಿಗೆ ಸಂದ ಪ್ರಥಮ ಗೌರವವೆಂದು ಅಭಿಪ್ರಾಯಪಡಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ತರದ ಈ ದಿನಗಳಲ್ಲಿ ಅದರ ಅಧ್ಯಕ್ಷರಿಗೆ ಸಿಕ್ಕ ಈ ಗೌರವ ಪರಿಷತ್ತಿಗೂ, ಕನ್ನಡಿಗರಿಗೂ ಹೆಮ್ಮೆಯ ಸಂಗತಿ. ಇದೇ ಸಮಾರಂಭದಲ್ಲಿ ಕ.ಸಾ.ಪ. ವತಿಯಿಂದ ಭಾಗವಹಿಸಿದ

ಇನ್ನಿತರ ಇಬ್ಬರು ಹಿರಿಯ ಸಾಹಿತಿಗಳಾದ ಡಾ. ಎಚ್.ಎಸ್. ವೆಂಕಟೇಶಮೂರ್ತಿ ಮತ್ತು ಡಾ. ಸಿದ್ಧಲಿಂಗಯ್ಯ ಅವರನ್ನೂ ಸನ್ಮಾನಿಸಲಾಯಿತು.

ಆಧುನಿಕ ನೇಪಾಳಿ ಕವನಗಳು (50 Nepali Poems) : ಈಗಾಗಲೇ ನೇಪಾಳಿ ಭಾಷೆಯಲ್ಲಿ ಪ್ರಕಟವಾಗಿ ಬಿಡುಗಡೆ ಯಾಗಿರುವ 'ಭಾರತ್ ಶಾಶ್ವತ್ ಆವಾಜ್" ಕೃತಿಯಂತೆಯೇ ಕನ್ನಡದಲ್ಲಿ ನೇಪಾಳಿ ಭಾಷೆಯ ೫೦ ಕವಿಗಳ ೫೦ ಕವನಗಳನ್ನು ಒಳಗೊಂಡ 'ಆಧುನಿಕ ನೇಪಾಳಿ ಕವನಗಳು' ಎನ್ನುವ ಕೃತಿ ಪರಿಷತ್ತಿನಿಂದ ಮುದ್ರಣಗೊಂಡು ಬಿಡುಗಡೆಗೆ ಎರಡು ತಿಂಗಳ ಹಿಂದೆಯೇ ಸಿದ್ಧವಾಗಿದೆ. ಈ ಪುಸ್ತಕವನ್ನು ಸದ್ಯದಲ್ಲಿಯೇ ಪರಿಷತ್ತಿನ ಸಭಾಂಗಣದಲ್ಲಿಯೇ ಬಿಡುಗಡೆ ಮಾಡಲಾಗುವದು. ಹೀಗೆ ಎರಡು ದೇಶಗಳ ಭಾಷೆ, ಸಾಹಿತ್ಯ ಸಂಸ್ಕೃತಿಯ ಕೊಡು-ಕೊಳ್ಳುವಿಕೆಯ ಈ ಯೋಜನೆ ದೇಶ ದೇಶಗಳ ಮಧ್ಯೆ, ಭಾಷೆ ಭಾಷೆಗಳ ಜನರ ಮಧ್ಯೆ ಸಾಮರಸ್ಯ ಬಿತ್ತುವ ಘನಕಾರ್ಯವಾಗಿದೆ. ಪರಿಷತ್ತಿನ ಈ ಕಾರ್ಯವನ್ನು ಕನ್ನಡ ಸಾಹಿತ್ಯ ಲೋಕದ ಅನೇಕರು ಮೆಚ್ಚಿ ಶ್ಲಾಘಿಸಿದ್ದಾರೆ. ಇದಕ್ಕಾಗಿ ನಾವು ಆಭಾರಿಯಾಗಿದ್ದೇವೆ. ಕನ್ನಡಿಗರ ಇಂತಹ ಔದಾರ್ಯವೇ ನಮ್ಮ ಒಳ್ಳೆಯ ಕೆಲಸಗಳಿಗೆ, ಉತ್ಸಾಹಕ್ಕೆ ಜೀವದ್ರವ್ಯವಾಗಿದೆ.

♦ **ಪ್ರಕಟಣಾ ವಿಭಾಗ :**

ಕನ್ನಡ ಸಾಹಿತ್ಯ ಪರಿಷತ್ತು ಮೈಸೂರಿನಲ್ಲಿ ೨೦೧೭ರ ನವೆಂಬರ್ ೨೪, ೨೫ ಮತ್ತು ೨೬ರಂದು ನಡೆಸಿದ ಅಖಿಲ ಭಾರತ ೮೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕೆಲವು ಹೊಸ ಹಾಗೂ ಮರುಮುದ್ರಣ ಪುಸ್ತಕಗಳನ್ನು ಸಾಹಿತ್ಯ ಸಮ್ಮೇಳನದ ಪ್ರಕಟಣ ಯೋಜನಾ ವೆಚ್ಚದಲ್ಲಿ ಮುದ್ರಣ ಮಾಡಿದೆ.

೦೧. ರತ್ನಾಕರ ಶತಕ - ಸಂ: ಎ.ಆರ್. ನಾಗರಾಜ್

೦೨. ಕನಕದಾಸರ ಕಾವ್ಯಭಾಷೆ - ಶ್ರೀ ಕಬ್ಬಿನಾಲೆ ವಸಂತ ಭಾರದ್ವಾಜ್

೦೩, ಚಿಂತನ ಲೇಖನಗಳು - ಡಾ. ಬಸವರಾಜ ಸಬರದ

೦೪. ನಾಟಕ ದಂಗೆ - ಡಾ. ರಾಮಲಿಂಗಪ್ಪ ಟಿ. ಬೇಗೂರು

೦೫. ಭಾರತದ ಪ್ರಾಚೀನ ವಿದ್ಯಾಪೀಠ - ಶ್ರೀ ಬಿ.ಪಿ. ಶಿವಾನಂದರಾವ್

೦೬ ಕಾಯಕ ಪಥ - ಡಾ. ಮನು ಬಳಿಗಾರ್

೧೭. ಸಮಾಲೋಕ-ಹೊರನಾಡ ಕನ್ನಡಿಗರ ಪ್ರಥಮ ರಾಷ್ಟ್ರೀಯ ಸಮಾವೇಶ ದೆಹಲಿ -

ಸಂ : ಡಾ. ಬೈರಮಂಗಲ ರಾಮೇಗೌಡ, ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

೦೮. ಸಮ್ಮೇಳನಾಧ್ಯಕ್ಷರ ಭಾಷಣ - ಪ್ರೊ ಚಂದ್ರಶೇಖರ ಪಾಟೀಲ (ಚಂಪಾ)

೦೯. ಕಿತ್ತೂರ ಜನಪದ ಸಾಹಿತ್ಯ - ಶ್ರೀ ಶಿವಾನಂದ ಗುಬ್ಬಣ್ಣವರ

೧೦. ಕೃಷಿ ಮತ್ತು ಸಹಕಾರ ಸಾಹಿತ್ಯ : ಅನುಸಂಧಾನ-ಡಾ. ಹಾ.ಮ. ನಾಗಾರ್ಜುನ

೧೧. ಶಿವರಹಸ್ಯ - ಸಂ-೩ ಅನು: ವಿದ್ವಾನ್ ಎಚ್. ಗಂಗಾಧರ ಶಾಸ್ತ್ರೀ

೧೨. ಶಿವರಹಸ್ಯ - ಸಂ-೪ ಅನು: ವಿದ್ವಾನ್ ಎಚ್. ಗಂಗಾಧರ ಶಾಸ್ತ್ರೀ

ಕನ್ನಡ ಸಾಹಿತ್ಯ ಪರಿಷತ್ತು ಧಾರವಾಡದಲ್ಲಿ ೨೦೧೯ ಜನವರಿ ೪ ರಿಂದ ೬ರವರೆಗೆ ನಡೆಸಿದ ಅಖಿಲ ಭಾರತ ೮೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕೆಲವು ಹೊಸ ಹಾಗೂ ಮರುಮುದ್ರಣ ಪುಸ್ತಕಗಳನ್ನು ಸಾಹಿತ್ಯ ಸಮ್ಮೇಳನದ ಪ್ರಕಟಣ ಯೋಜನಾ ವೆಚ್ಚದಲ್ಲಿ ಮುದ್ರಣ ಮಾಡಿದೆ.

೦೧. ಅಕ್ಕಮಹಾದೇವಿ - ಡಾ. ವಿಜಯಶ್ರೀ ಸಬರದ

೦೨. ಧರ್ಮ ಸಮನ್ವಯ ಸಾಹಿತ್ಯ ವಿಮರ್ಶೆ - ಪ್ರೊ. ಜಿ. ಅಬ್ದುಲ್ ಬಷೀರ್

೦೩. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ - ಡಾ. ಜಿ.ಆರ್. ತಿಪ್ಪೇಸ್ವಾಮಿ

**ಸಣ್ಣಕಥೆ ಸಂಪುಟ -೪**

೦೪, ಚಂದನವನದಲ್ಲೊಂದು ಚಾರಣ - ಡಾ. ಕೆ.ಎನ್. ಭಗವಾನ್

೦೫. ಮಾನನೀಯೆ ದ್ರೌಪದಿ - ಶ್ರೀಮತಿ ಸತ್ಯವತಿ ರಾಮನಾಥ್

೦೬. ಕಾವ್ಯಾನಂದರ ಬದುಕು ಮತ್ತು ಕಾವ್ಯ - ಶ್ರೀ ಪ್ರಕಾಶ ಗಿರಿಮಲ್ಲವರ

೦೭. ಭಾರತೀಯ ಯೋಗ ಮೀಮಾಂಸೆ - ಡಾ.ಎನ್.ಎಂ. ಗಿರಿಜಾಪತಿ

೦೮. ತತ್ತಿ ಗರ್ಭದ ಹಳದಿ - ಶ್ರೀ ಗುರುನಾಥ ಬೋರಗಿ

೦೯. ತೆರೆದಷ್ಟು ಕಣ್ಣು - ಶ್ರೀಮತಿ ಹರ್ಷಿತಾ ಜಿ. ರಾಜು

೧೦. ಕೋಳಿ ಹುಂಜದ ಹೂವು - ಶ್ರೀ ಶಿ.ಜು. ಪಾಶ

೧೧. ಜಾನಪದ ದರ್ಶನ - ಡಾ. ಎಸ್.ಎಂ. ಮುತ್ತಯ್ಯ

೧೨. ಶರಣ ಸಾಹಿತ್ಯ - ಸಂಸ್ಕೃತಿ ಕವಳಿಗೆ - ಡಾ. ಸಿ. ನಾಗಭೂಷಣ

೧೩. ಕನ್ನಡ ಕಾವ್ಯ ಮೀಮಾಂಸೆ - ಡಾ. ವೀರಣ್ಣ ದಂಡೆ

೧೪. ಬ್ರಿಟಿಷರ ಆಡಳಿತ ಮತ್ತು ರಾಣಿ ಕಿತ್ತೂರ ಚೆನ್ನಮ್ಮ

- ಡಾ. ಮಲ್ಲಿಕಾರ್ಜುನ ಆಯ್. ಮಿಂಚ

೧೫. ಸೋಮೇಶ್ವರ ಶತಕ - ಕ.ಸಾ.ಪ

೧೬. ಹೊಸಗನ್ನಡ ವ್ಯಾಕರಣ - ಶ್ರೀ ಎನ್. ರಂಗನಾಥಶರ್ಮ

೧೭. ಕನ್ನಡ ವ್ಯಾಕರಣ ದರ್ಪಣ - ಕ.ಸಾ.ಪ.

೧೮. ಕನ್ನಡದ ಬಾವುಟ(೨) - ಬಿ.ಎಂ.ಶ್ರೀ

೧೯. ದುರ್ಗಸಿಂಹನ ಕರ್ಣಾಟಕ ಪಂಚತಂತ್ರ - ಶ್ರೀ ಗುಂಡ್ಮಿ ಚಂದ್ರಶೇಖರ್ ಐತಾಳ್

೨೦. ಚಾಮರಸನ ಪ್ರಭುಲಿಂಗಲೀಲೆ - ಶ್ರೀ ಎಸ್. ವಿದ್ಯಾಶಂಕರ್

೨೧. ಕನ್ನಡ ಸಾಹಿತ್ಯ ಚರಿತ್ರೆ - ಲೇ : ತ.ಸು. ಶಾಮರಾಯ

೨೨. ಜೈಮಿನಿ ಭಾರತ - ಶ್ರೀ ಎನ್. ರಂಗನಾಥಶರ್ಮ

೨೩. ಆಯುರ್ವೇದದ ಆರೋಗ್ಯ ಸೂತ್ರಗಳು-ಡಾ. ವಿ.ಆರ್. ಪದ್ಮನಾಭರಾವ್

೨೪, ತಮಿಳುನಾಡಿನ ಕನ್ನಡ ಶಾಸನಗಳು - ಡಾ. ಪಿ.ವಿ. ಕೃಷ್ಣಮೂರ್ತಿ

**ಮರುಮುದ್ರಣವಾಗಿರುವ ಪುಸ್ತಕಗಳು :**

೦೧. ಕರ್ಣಾಟ ಭಾರತ ಕಥಾಮಂಜರಿ-ಕುಮಾರವ್ಯಾಸ

೦೨. ರಾಘವಾಂಕನ ಹರಿಶ್ಚಂದ್ರ ಚರಿತೆ - ಪರಿಷತ್ತು

೦೩. ವಿದುರನೀತಿ - ಎನ್. ರಂಗನಾಥಶರ್ಮ

೦೪. ಅತ್ಯುತ್ತಮ ಸಣ್ಣ ಕಥೆಗಳು - ಕೆ. ನರಸಿಂಹಮೂರ್ತಿ

೦೫. ಹಳಗನ್ನಡ ಪದಸಂಪದ - ಡಾ. ಪಿ.ವಿ. ನಾರಾಯಣ

೦೬ ಕಂನುಡಿಯ ಹುಟ್ಟು - ಡಾ. ಶಂ.ಬಾ. ಜೋಶಿ

೦೭. ಕೃಷಿ ಜಾನಪದ - ಡಾ. ಎಂ.ಜಿ. ಈಶ್ವರಪ್ಪ

೦೮. ಪಂಪಭಾರತಂ - ಶ್ರೀ ಎನ್. ಅನಂತರಂಗಾಚಾರ್

೦೯. ಆದಿಪುರಾಣಂ - ಶ್ರೀ ಕೆ.ಎಲ್ ನರಸಿಂಹಶಾಸ್ತ್ರಿ

೧೦. ಕನ್ನಡ ರತ್ನಕೋಶ - ಪರಿಷತ್ತು

೧೧. ಸಂಕ್ಷಿಪ್ತ ಕನ್ನಡ ನಿಘಂಟು - ಪರಿಷತ್ತು

೧೨. ಕನ್ನಡ ಮೂಲ ವ್ಯಾಕರಣ - ಪಂಜೆ ಮಂಗೇಶರಾಯರು

೧೩. ಸಂಕ್ಷಿಪ್ತ ಕನ್ನಡ-ಇಂಗ್ಲಿಷ್ ನಿಘಂಟು - ಪರಿಷತ್ತು

೧೪. ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರ್ - ಎಲ್. ಸ್ವಾಮಿರಾವ್

೧೫, ಕನ್ನಡ ಶಾಸನಗಳು - ಬಾ.ರಾ. ಗೋಪಾಲ

೧೬. ಕನ್ನಡ ನಾಡಿನ ಚರಿತ್ರೆ ಭಾಗ-೧ - ಡಾ. ಬಿ.ಎ. ಸಾಲೆತ್ತೂರೆ

ದೇಸಾಯಿ ಪಾಂಡುರಂಗರಾವ್

೧೭. ಕನ್ನಡ ನಾಡಿನ ಚರಿತ್ರೆ ಭಾಗ-೨ - ಡಾ. ಎಸ್.ಸಿ. ನಂದಿಮಠ

೧೮. ಕನ್ನಡ ನಾಡಿನ ಚರಿತ್ರೆ ಭಾಗ-೩ - ಡಾ. ಎಂ.ಎಚ್. ಕೃಷ್ಣ

೧೯. ರನ್ನಕವಿ ಪ್ರಶಸ್ತಿ - ವಿವಿಧ ಲೇಖಕರು

**ಹೊಸ ಪ್ರಕಟಣೆಗಳು :**

೦೧. ಅಕ್ಕಮಹಾದೇವಿ - ಡಾ. ವಿಜಯಶ್ರೀ ಸಬರದ

೦೨. ಕಡಕೋಳ ಮಡಿವಾಳಪ್ಪನವರು - ಎಲ್.ಬಿ.ಕೆ. ಆಲ್ದಾಳ

೦೩. ಗೋಕಾಕರ ಬರವಣಿಗೆಯ ಮೇಲೆ ಶ್ರೀ ಅರವಿಂದರ ಪ್ರಭಾವ

- ಡಾ. ಜೀವಿ ಕುಲಕರ್ಣಿ

೦೪, ಫರ್ಡಿನೆಂಡ್ ಕಿಟೆಲ್‌ರ ಕ್ರಿಸ್ತಕಥನ ಕಾವ್ಯ ಕಥಾಮಾಲೆ - ಪ್ರೊ. ಎ.ವಿ. ನಾವಡ

೦೫. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

**ಜುಲೈ-ಡಿಸೆಂಬರ್-೨೦೧೮ರ ಸಂಚಿಕೆ - ಪ್ರೊ. ಜಿ. ಅಬ್ದುಲ್ ಬಷೀರ್**

೦೬ ಕನ್ನಡ ವೀರ ಸೇನಾನಿ - ಸಂ : ರಾ.ನಂ. ಚಂದ್ರಶೇಖರ್

೦೭, ತಾಂತ್ರಿಕ ಪಂಥಗಳ ಹಿನ್ನೆಲೆಯಲ್ಲಿ ಸೂಳೆಕೆರೆ (ಶಾಂತಿಸಾಗರ)

- ಡಾ. ಎಂ. ಚಿದಾನಂದಮೂರ್ತಿ

## ಮುದ್ರಣದ ವಿವಿಧ ಹಂತದಲ್ಲಿರುವ ಪುಸ್ತಕಗಳು :

೦೧. ರಾಯಶಕ್ತಿ - (೮೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ

ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳು) -

ಸಂ: ಡಾ. ಬೈರಮಂಗಲ ರಾಮೇಗೌಡ, ಡಾ ಚಿತ್ತಯ್ಯ ಪೂಜಾರ್

೦೨. ಹೈದ್ರಾಬಾದ್-ಕರ್ನಾಟಕದ ಆಧುನಿಕ
ಕನ್ನಡ ಸಾಹಿತ್ಯ ಚರಿತ್ರೆ - ಡಾ. ಬಸವರಾಜ ಸಬರದ

೦೩. ಬಸವರಾಜ ವಿಜಯಂ ಭಾಗ-೧ - ಪಂಡಿತ ಚನ್ನಪ್ಪ ಎರೇಸೀಮೆ

೦೪. ಬಸವರಾಜ ವಿಜಯಂ ಭಾಗ-೨ - ಪಂಡಿತ ಚನ್ನಪ್ಪ ಎರೇಸೀಮೆ

೦೫. ಮೈಸೂರಿನಲ್ಲಿ ನಡೆದ ೮೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ
ಮಂಡಿತವಾದ ಪ್ರಬಂಧಗಳು -
ಸಂ: ಡಾ. ಬೈರಮಂಗಲ ರಾಮೇಗೌಡ, ಡಾ ಚಿತ್ತಯ್ಯ ಪೂಜಾರ್

೦೬ ಚಂಪೂ ನುಡಿಗನ್ನಡಿ - ಸಂ: ಡಾ. ಪಿ.ವಿ.ನಾರಾಯಣ

೦೭. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ-ಸಂ : ದಿ. ಡಾ. ಎಂ.ವಿ. ವಸು
ಮಾನವಿಕ ಸಂಪುಟ
(ಮುಂದುವರೆದಂತೆ) - ಡಾ. ಎಚ್.ಎಲ್. ಪುಷ್ಪ

## ♦ ಸಾಹಿತ್ಯ ಪರೀಕ್ಷೆಯ ಪಠ್ಯಪುಸ್ತಕಗಳ ಪ್ರಕಟಣೆಗಳು

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯುವ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಹಾಗೂ ಶಾಸನ ಡಿಪ್ಲೊಮಾ ತರಗತಿಗಳಿಗಾಗಿ ಸಿದ್ಧವಾದ ಪಠ್ಯಪುಸ್ತಕಗಳು :

೦೧. ಪ್ರಾಚೀನ ಕಾವ್ಯ ಸಂಪುಟ - ಸಂ: ಡಾ. ರಾಮಲಿಂಗಪ್ಪ ಟಿ. ಬೇಗೂರು

೦೨. ಹೊಸಗನ್ನಡ ಕಾವ್ಯ ಮಂಜರಿ - ಸಂ: ಡಾ. ಎಚ್.ಎಲ್. ಪುಷ್ಪ,
ಡಾ. ಡಿ.ಸಿ. ಗೀತಾ

೦೩. ಹೊಸಗನ್ನಡ ಕಥಾವಲ್ಲರಿ - ಡಾ. ಗಾಯತ್ರಿ ನಾವಡ

೦೪, ಕನ್ನಡ ಸಾಹಿತ್ಯ ಮಂಥನ - ಡಾ. ನಟರಾಜ ಬೂದಾಳ್

೦೫. ಜನಪದ ಸಾಹಿತ್ಯ ಸಂಚಯ - ಡಾ. ಗಾಯತ್ರಿ ನಾವಡ

೦೬.ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ - ಡಾ. ಎಂ. ಚಿದಾನಂದಮೂರ್ತಿ

೦೭.ನಡುಗನ್ನಡ ಸಾಹಿತ್ಯ ಸಂಗಮ - ಸೂ: ಡಾ. ರಾಮಲಿಂಗಪ್ಪ ಟಿ. ಬೇಗೂರು

೦೮. ಆಧುನಿಕ ಗದ್ಯ ಸಾಹಿತ್ಯ - ಸಂ: ಡಾ. ಯಲ್ಲಪ್ಪ ಹಿಮ್ಮಡಿ

೦೯. ಕನ್ನಡ ಸಾಹಿತ್ಯ ಸಮಾಗಮ (೨) - ಸಂ: ಡಾ. ರೇಖಾ ವಸಂತ, ಡಾ. ಲೋಲಾಕ್ಷಿ
೧೦. ವ್ಯಾವಹಾರಿಕ ಕನ್ನಡ ಮಾತು ಮತ್ತು ಬರೆಹ - ಸಂ: ಪ್ರೊ ಜಿ. ಅಬ್ದುಲ್ ಬಷೀರ್
೧೧. ಕನ್ನಡ ಸಾಹಿತ್ಯ ಚರಿತ್ರೆ - ತ.ಸು. ಶಾಮರಾಯ
೧೨. ತಿಳಿಕನ್ನಡ ಭಾಗ ೧ ಮತ್ತು ೨ - ಪ್ರೊ. ಕೆ.ಎಸ್. ಮಧುಸೂದನ, ಡಾ. ಎಚ್.ಎನ್. ಮುರಳೀಧರ

- **"ಶಾಸ್ತ್ರೀಯ ಪಠ್ಯಗಳ ಓದು ಅಧ್ಯಯನ" ತರಬೇತಿ ಶಿಬಿರ ಹಮ್ಮಿಕೊಂಡಿರುವ ಬಗ್ಗೆ.**

ಈ ವಿಷಯಕ್ಕೆ ಸಂಬಂಧಿಸಿದಂತೆ ೨೦೧೬ ರಿಂದ ೨೦೧೭ರವರೆಗೆ, ಮೈಸೂರು, ಕಲಬುರಗಿ, ಬೆಳಗಾವಿ, ಉಡುಪಿ, ಚಿಕ್ಕಬಳ್ಳಾಪುರ, ಚಾಮರಾಜನಗರ, ಕೋಲಾರ, ಚಿತ್ರದುರ್ಗ, ಬೀದರ್ ಗಳಲ್ಲಿ ಅಂದರೆ ಒಂಬತ್ತು ಜಿಲ್ಲೆಗಳಲ್ಲಿ ಒಂಬತ್ತು ಶಿಬಿರಗಳು ನಡೆದಿದ್ದವು (ಹೆಚ್ಚಿನ ಮಾಹಿತಿಗೆ ನೋಡಿ ಭಾಗ-೧) ಮುಂದುವರೆದಂತೆ ರಾಜ್ಯದ ಈ ಕೆಳಕಂಡ ಜಿಲ್ಲೆಗಳಾದ

ಮಂಡ್ಯ - ೨೦೧೮ ಜನವರಿ ೧೦ ರಿಂದ ೧೪ ರವರೆಗೆ
ಕೊಡಗು - ೨೦೧೮ ಫೆಬ್ರವರಿ ೧೬ ರಿಂದ ೨೦ ರವರೆಗೆ
ಬಳ್ಳಾರಿ - ೨೦೧೮ ಫೆಬ್ರವರಿ ೧೯ ರಿಂದ ೨೩ ರವರೆಗೆ

ಈ ಮೇಲ್ಕಾಣಿಸಿದ ಮೂರು ಜಿಲ್ಲೆಗಳಲ್ಲಿ 'ಶಾಸ್ತ್ರೀಯ ಪಠ್ಯಗಳ ಓದು ಅಧ್ಯಯನ'ಗಳು ನಡೆದಿವೆ. ಇದರಿಂದ ಅನೇಕ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕರು ಪ್ರಯೋಜನ ಪಡೆದಿರುತ್ತಾರೆ. ಇದುವರೆಗೆ ಕರ್ನಾಟಕ ರಾಜ್ಯದಾದ್ಯಂತ ಒಟ್ಟು ೧೨ ಶಿಬಿರಗಳು ನಡೆದಿರುತ್ತವೆ. ಮುಂದೆಯೂ ಈ ಯೋಜನೆ ಉಳಿದ ಜಿಲ್ಲೆಗಳು ಹಾಗೂ ಗಡಿನಾಡ ಘಟಕಗಳಲ್ಲಿಯು ನಡೆಯಬೇಕು ಅದರ ಪ್ರಯೋಜನವನ್ನು ಕನ್ನಡಿಗರು ಪಡೆಯಬೇಕೆಂಬ ಸದಾಶಯದಿಂದ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರ' ಮೈಸೂರು ಇವರಿಗೆ ಶಿಬಿರ ನಡೆಸುವ ಬಗ್ಗೆ ಪುನಃ ಸಂಪರ್ಕಿಸಲಾಗಿದೆ.

- **ಅಖಿಲ ಭಾರತ ಪ್ರಥಮ ಹಳಗನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ 'ಹಳತು ಹೊನ್ನು'**

ಶ್ರವಣಬೆಳಗೊಳದಲ್ಲಿ ೨೦೧೮ ಜೂನ್ ೨೪, ೨೫ ಮತ್ತು ೨೬ ರಂದು ಕನ್ನಡ ಸಾಹಿತ್ಯ ಪರಿಷತು ಆಯೋಜಿಸಿದ್ದ 'ಅಖಿಲ ಭಾರತ ಪ್ರಥಮ ಹಳಗನ್ನಡ ಸಾಹಿತ್ಯ ಸಮ್ಮೇಳನ'ದಲ್ಲಿ

ಮಂಡಿಸಿದ ವಿಚಾರಗಳನ್ನು ಲೇಖನ ರೂಪದಲ್ಲಿ ತರಿಸಿಕೊಂಡು ಡಾ. ಪದ್ಮರಾಜ ದಂಡಾವತಿ ಅವರ ಸಂಪಾದಕತ್ವದಲ್ಲಿ **'ಹಳತು-ಹೊನ್ನು'** ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ.

ಪ್ರೊ, ಹಂಪ ನಾಗರಾಜಯ್ಯ, ಡಾ. ಷ. ಶೆಟ್ಟರ್, ಪುರುಷೋತ್ತಮ ಬಿಳಿಮಲೆ, ಚಂದ್ರಶೇಖರ ನಂಗಲಿ, ಡಾ. ಶಾಂತಿನಾಥ ದಿಬ್ಬದ, ಡಾ. ದುರ್ಗಾದಾಸ್, ಗೀತಾ ವಸಂತ, ಡಾ. ಪ್ರಮೀಳಾ ಮಾಧವ್, ಡಾ. ಶ್ರೀಕಂಠ ಕೂಡಿಗೆ, ಡಾ. ಕೆ.ವೈ. ನಾರಾಯಣಸ್ವಾಮಿ, ಡಾ. ಎಂ.ಎಸ್. ಆಶಾದೇವಿ, ಡಾ. ಪಿ.ವಿ. ನಾರಾಯಣ, ಮೇಟಿ ಮಲ್ಲಿಕಾರ್ಜುನ, ಡಾ. ಮಾಧವ ಪೆರಾಜೆ, ಡಾ. ಶೀವತ್ಸ ಎಸ್. ವಟಿ, ಡಾ. ಎಸ್.ಪಿ. ಪದ್ಮಪ್ರಸಾದ್, ಡಾ. ವೆಂಕಟಗಿರಿ ದಳವಾಯಿ, ಡಾ. ತಮಿಳ್ ಸೆಲ್ವಿ ಡಾ. ಜಿನದತ್ತ ಹಡಗಲಿ, ಪ್ರೊ. ಪ್ರೀತಿ ಶುಭಚಂದ್ರ ಈ ಸಂಪುಟದ ಲೇಖಕರುಗಳು.

- **'ರಾಯಶಕ್ತಿ' ರಾಯಚೂರು ೮೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳ ಸಂಕಲನ.**

೮೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು, ದಿನಾಂಕ ರಾಯಚೂರಿನಲ್ಲಿ ಅದ್ದೂರಿಯಾಗಿ ನಡೆದಿದ್ದು ನಿಮಗೆಲ್ಲಾ ಗೊತ್ತಿರುವ ಸಂಗತಿ. ಆ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳನ್ನು ಲೇಖನ ರೂಪದಲ್ಲಿ ತರಿಸಿಕೊಂಡು **'ರಾಯಶಕ್ತಿ'** ಎನ್ನುವ ಕೃತಿಯ ಮೂಲಕ ಪ್ರಕಟಿಸಲಾಗಿದೆ. ಮೂರು ದಿನಗಳ ಕಾಲ ಮಂಡಿತವಾದ ವಿದ್ವತ್‌ಪೂರ್ಣ ಮಾಹಿತಿ ಓದುಗರಿಗೆ ತಲುಪಬೇಕು ಎಂಬುದು ಇದರ ಉದ್ದೇಶ. ಡಾ. ಬೈರಮಂಗಲ ರಾಮೇಗೌಡ ಮತ್ತು ಡಾ. ಡಿ. ಕೆ. ಚಿತ್ತಯ್ಯ ಪೂಜಾರ್ ಅವರುಗಳು ಈ ಕೃತಿಯನ್ನು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿರುತ್ತಾರೆ ದಿನಾಂಕ ೨೦೧೮ರ ನವೆಂಬರ್ ೨೪, ೨೫ ಹಾಗೂ ೨೬ ರಂದು ಮೈಸೂರಿನಲ್ಲಿ ನಡೆದ ೮೩ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳನ್ನು ಸಹ ಸಂಗ್ರಹಿಸಿ ಪ್ರಕಟಿಸುವ ಉದ್ದೇಶ ಪರಿಷತ್ತಿಗೆ ಇದೆ. ಈ ಜವಾಬ್ದಾರಿಯನ್ನು ಡಾ. ಬೈರಮಂಗಲ ರಾಮೇಗೌಡ ಮತ್ತು ಡಾ. ಡಿ. ಕೆ. ಚಿತ್ತಯ್ಯ ಪೂಜಾರ್ ಅವರು ನಿರ್ವಹಿಸುತ್ತಿದ್ದು ಈಗಾಗಲೇ ಮುದ್ರಣದ ಕೊನೆಯ ಹಂತದಲ್ಲಿದ್ದು ಕೆಲವೇ ದಿನಗಳಲ್ಲಿ ಓದುಗರ ಕೈ ಸೇರಲಿದೆ ಎಂದು ಹೇಳಲು ಸಂತೋಷವಾಗುತ್ತಿದೆ.

- **೨೦೧೮-೧೯ನೇ ಸಾಲಿನ ಎಂ.ಫಿಲ್ ಹಾಗೂ ಪಿಎಚ್.ಡಿ. ಪದವಿಯ ಶೈಕ್ಷಣಿಕ ವರದಿ**

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಕನ್ನಡ ಸಾಹಿತ್ಯ ಪರಿಷತ್ತು ಎಂ.ಫಿಲ್ ಹಾಗೂ ಪಿಎಚ್.ಡಿ. ತರಗತಿಗಳನ್ನು ನಡೆಸುತ್ತಿದೆ. ೨೦೧೮-೧೯ನೇ ಸಾಲಿನ ಎಂ.ಫಿಲ್ ಕೋರ್ಸ್‌ನಲ್ಲಿ ಏಳು ವಿದ್ಯಾರ್ಥಿಗಳು ಅಧ್ಯಯನ ನಡೆಸಿ ಎಂ.ಫಿಲ್. ಪದವಿ ಪಡೆದಿದ್ದಾರೆ. ಇದೇ ರೀತಿ ಪ್ರತಿವರ್ಷ ೧೦ ವಿದ್ಯಾರ್ಥಿಗಳು ಈ ಪ್ರಯೋಜನ ಪಡೆಯುತ್ತಿದ್ದಾರೆ.

೨೦೧೨ ರಿಂದ ೨೦೧೬ರವರೆಗೆ ಒಟ್ಟು ೩೪ ಮಂದಿ ವಿದ್ಯಾರ್ಥಿಗಳು ಪಿಎಚ್.ಡಿ. ಅಧ್ಯಯನ ನಡೆಸುತ್ತಿದ್ದಾರೆ. ಅದರಲ್ಲಿ ೨೦೧೮ನೇ ಸಾಲಿನಲ್ಲಿ ಶ್ರೀಮತಿ ವಜ್ರೇಶ್ವರಿ ಎಸ್.ಎಂ. ಮೂರ್ತಿ ಡಿ.ಸಿ. ಹಾಗೂ ೨೦೧೯ನೇ ಸಾಲಿನಲ್ಲಿ ಕೆ. ಮಾಧುಪ್ರಸಾದ್ ಮತ್ತು ಗಿರಿಜಾದೇವಿ ಎಲ್.ಎನ್. ಇವರಿಗೆ ಹಂಪಿ ವಿಶ್ವವಿದ್ಯಾಲಯವು ಪಿಎಚ್.ಡಿ. ಪದವಿ ನೀಡಿದೆ. - ೨೦೧೯-೨೦ನೇ ಸಾಲಿಗೆ ಬಿ.ಎನ್. ಪ್ರೇಮಾ ಹಾಗೂ ಭಾಗ್ಯಮ್ಮ ಜಿ. ಇವರುಗಳು ಮಹಾಪ್ರಬಂಧದ ಅಂತಿಮ ಪ್ರತಿಗಳನ್ನು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ರಾಮಕೃಷ್ಣ ಎಚ್.ಕೆ. ಮತ್ತು ಅರುಣಕುಮಾರಿ ಹಾಗೂ ಶಿವಕುಮಾರ ಇವರು ಕಲ್ಪೋಕಿಯಂಗೆ ಮಹಾಪ್ರಬಂಧವನ್ನು ಸಲ್ಲಿಸಿದ್ದು, ಪಿಎಚ್.ಡಿ. ಪದವಿಯ ನಿರೀಕ್ಷೆಯಲ್ಲಿದ್ದಾರೆ. ಪ್ರಸ್ತುತ ೨೦೧೮-೧೯ನೇ ಸಾಲಿಗೆ ೧೫ ಮಂದಿ ವಿದ್ಯಾರ್ಥಿಗಳಿಗೆ ನೋಂದಣಿ ದೊರಕಿದ್ದು ೧೩ ಮಂದಿ ವಿದ್ಯಾರ್ಥಿಗಳು ಪಿಎಚ್.ಡಿ. ಕೋರ್ಸ್‌ವರ್ಕ್ ಪರೀಕ್ಷೆಯನ್ನು ಬರೆದಿರುತ್ತಾರೆ.

ಇದಲ್ಲದೆ ಪ್ರತಿವರ್ಷವೂ ಶಾಸನ ಡಿಪ್ಲೊಮಾ ತರಗತಿಗಳು ನಡೆಯುತ್ತಿದ್ದು ಹಲವಾರು ಅಭ್ಯರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಅಲ್ಲದೆ ಅದರಲ್ಲಿ ಅನೇಕರು ಶಾಸನ ಸಂಶೋಧನೆಯಲ್ಲಿ ತೊಡಗಿದ್ದಾರೆ ಎಂಬುದು ಸಂತಸದ ಸಂಗತಿ.

ಪ್ರಾರಂಭದಿಂದಲೂ ಸಾಹಿತ್ಯ ಪರಿಷತ್ತು ನಡೆಸುವ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಹಾಗೂ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ರಾಜ್ಯದಲ್ಲಿಯೇ ಅತಿಹೆಚ್ಚು ಅಂಕ ಗಳಿಸಿದವರಿಗೆ ಪ್ರತಿಭಾ ಪುರಸ್ಕಾರ ಮಾಡುವ ಪರಿಪಾಠವನ್ನು ನಡೆಸಿಕೊಂಡು ಬರುತ್ತಿತ್ತು. ಆದರೆ ಈ ವರ್ಷ ಪ್ರಥಮ ಬಾರಿಗೆ

ನಮ್ಮ ಸಂಶೋಧನಾ ವಿಭಾಗದಿಂದ ಎಂ.ಫಿಲ್. ಮತ್ತು ಪಿಎಚ್.ಡಿ. ಪಡೆದ ಸಂಶೋಧಕರನ್ನು ಗೌರವಿಸುವ ಪರಂಪರೆಯನ್ನು ಹೊಸದಾಗಿ ಪ್ರಾರಂಭಿಸಲಾಗಿದೆ. ಕನ್ನಡ

ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಸಂಶೋಧನಾರ್ಥಿಗಳು ಪಿಎಚ್.ಡಿ. ಪಡೆದದ್ದು ಇದೇ ಮೊದಲು ಎಂಬುದು ಬಹಳ ಮುಖ್ಯವಾದದ್ದು.

## ♦ ೩೦-೧೦-೨೦೧೭ರ ನಂತರ ಸೇರ್ಪಡೆಯಾದ ಹೊಸ ದತ್ತಿಗಳು

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮೊದಲಿನಿಂದ ಇಲ್ಲಿಯವರೆಗೆ ೧೯೧೪ ದತ್ತಿಗಳನ್ನು ನೋಂದಾಯಿಸಲಾಗಿದೆ.

ಪರಿಷತ್ತು, ದತ್ತಿ ಕಾರ್ಯಕ್ರಮಗಳನ್ನು ನಡೆಸಲು ರಾಜ್ಯದ ಎಲ್ಲ ಜಿಲ್ಲಾ ಸಮಿತಿಗಳಿಗೆ ಮತ್ತು ಕೇರಳ, ಮಹಾರಾಷ್ಟ್ರ, ಆಂಧ್ರ ತಮಿಳುನಾಡು, ಗೋವಾ, ಗಡಿನಾಡು ಘಟಕಗಳಿಗೆ ಅವಕಾಶ ನೀಡಿದೆ. ಅದರಂತೆ ಕಾರ್ಯಕ್ರಮಗಳು ನಡೆಯುತ್ತಿವೆ.

೧-೪-೨೦೧೭ರಿಂದ ಇಲ್ಲಿಯವರೆಗೆ ಸಂಗ್ರಹವಾದ ಹೊಸ ದತ್ತಿಗಳು ೯೪,

೧-೪-೨೦೧೭ರಿಂದ ಇಲ್ಲಿಯವರೆಗೆ ಸಂಗ್ರಹವಾದ ಒಟ್ಟು ಹಣ

೨೨,೧೦,೩೯೭-೦೦

ಡಾ. ಮನು ಬಳಿಗಾರ್ ಕಸಾಪ ಅಧ್ಯಕ್ಷರಾಗಿ ಬಂದ ಮೇಲೆ ಜನರು ಪರಿಷತ್ತಿನ ಮೇಲಿನ ಅಭಿಮಾನದಿಂದ ರೂ. ೨೨,೧೦,೩೯೭-೦೦ ಹೆಚ್ಚು ಹಣವನ್ನು ಪರಿಷತ್ತಿನಲ್ಲಿ ದತ್ತಿಯಾಗಿಟ್ಟಿರುತ್ತಾರೆ. ಮುಂದಿನ ದಿನಗಳಲ್ಲಿ ಇದು ಇನ್ನೂ ಹೆಚ್ಚು ಆಗುವ ಸಾಧ್ಯತೆ ಇದೆ. ಹೊಸದಾಗಿ ಸಂಗ್ರಹವಾದ ದತ್ತಿಗಳ ವಿವರ ಈ ಕೆಳಗಿನಂತೆ ಇದೆ.

೧. ಶ್ರೀಮತಿ ಈರಮ್ಮ ಕೋರಿ ನಾಗಪ್ಪ ರೇವಡಿ ದತ್ತಿ ಗದಗ ೨೫,೦೦೦-೦೦

೨. ಶ್ರೀಮತಿ ಅನಸೂಯರಾಯ ಶ್ರೀ ಬೆಳವಂತರಾವ್ ನಿಂಬಾಳಕರ್ ಸ್ಮಾರಕ ದತ್ತಿ ದಾವಣಗೆರೆ ೧೫,೦೦೦-೦೦

೩. ಶ್ರೀ ನಿಂಗಪ್ಪ ರಾಮಪ್ಪ ಅರಳಿಕಟ್ಟಿ ಹಾಗೂ ರಾಮಣ್ಣ ಸಿದ್ದಪ್ಪ ದಂಡಿನ ದತ್ತಿ ಧಾರವಾಡ ೨೫,೦೦೦-೦೦

೪. ಪಾರ್ವತಮ್ಮ ಮತ್ತು ಮಕ್ಕಳ ದತ್ತಿ, ಬೆಂಗಳೂರು ೨೫,೦೦೦-೦೦

೫. ಬಸಪ್ಪಾ ಆಂದಾನಪ್ಪ ಉಪ್ಪಿನ ಹಾಗೂ ನಿರ್ಮಲಾದೇವಿ ಬ. ಉಪ್ಪಿನ ದತ್ತಿ ಧಾರವಾಡ ೨೫,೦೦೦-೦೦

೬. ಶ್ರೀಮತಿ ದಾನಮ್ಮ ಶ್ರೀ ಬೊಮ್ಮನಾಯ್ಕರು ಸೂನಲೆ ದತ್ತಿ, ಶಿವಮೊಗ್ಗ ೨೫,೦೦೦-೦೦

೭. ಡಾ. ಸೋಮಶೇಖರ ಎಂ. ವಾಲಿ ದತ್ತಿ, ವಿಜಯಪುರ ೧೦,೦೦೦-೦೦

೮. ಲಿಂ. ಬಸಪ್ಪಾ ಗಂಗಪ್ಪ ಸಾಲಕ್ಕಿ ಮತ್ತು ಲಿಂ. ಅಮರಪ್ಪ ಬಸಪ್ಪಾ

ಸಾಲಕ್ಕಿ ದತ್ತಿ ನಿಧಿ, ವಿಜಯಪುರ ೧೦,೦೦೦-೦೦

೯. ಈರಮ್ಮ ದಿ. ವೀರಭದ್ರಪ್ಪ ದತ್ತಿ (ಸರ್. ಎಂ.ವಿ. ಸ್ಮಾರಕ ದತ್ತಿ) ಶಿವಮೊಗ್ಗ ೨೦,೦೦೦-೦೦

೧೦. ದಿ. ಶ್ರೀ ಎ.ಸಿದ್ದಪ್ಪ ಆಚಾರ್ ಶ್ರೀಮತಿ ಸುಲೋಚನಮ್ಮ ಸ್ವಾತಂತ್ರ್ಯ ಹೋರಾಟಗಾರರ

ನ್ಯಾಮತಿ ದತ್ತಿ ದಾವಣಗೆರೆ ೧೫,೦೦೦-೦೦

೧೧. ಎಲ್. ಹೇಮಾಕ್ಷಮ್ಮ (ಶ್ರೀವಿಜಯಹಾಸನ) ದತ್ತಿ ಪ್ರಶಸ್ತಿ, ಹಾಸನ ೧,೦೦,೦೦೦-೦೦

೧೨. ಶ್ರೀಮತಿ ನಿಂಗಮ್ಮ ಗಿರೇಗೌಡ್ರ ನಾಗನಗೌಡ ದತ್ತಿ, ದಾವಣಗೆರೆ ೨೫,೦೦೦-೦೦

೧೩. ಲಿಂ. ಶ್ರೀ ಬಸವರಾಜ ಪರಪ್ಪ ಆಲೂರ ದತ್ತಿ, ವಿಜಯಪುರ ೨೫,೦೦೦-೦೦

೧೪. ಲಿಂ. ಸಿದ್ದಪ್ಪ ಬಸಲಿಂಗಪ್ಪ ಹಂಚಲಿ ದತ್ತಿ, ವಿಜಯಪುರ ೧೫,೦೦೦-೦೦

೧೫. ಲಿಂ. ಶಂಕರಗೌಡ ಭೀಮನಗೌಡ ಪಾಟೀಲ,

ಲಿಂ. ಶ್ರೀಮತಿ ಗಂಗಾಬಾಯಿ ಶಂಕರಗೌಡ ಪಾಟೀಲ

ಸಾ|| ಕರಬಂಟನಾಳ ದತ್ತಿ, ಬಾಗಲಕೋಟೆ ೧೦,೦೦೦-೦೦

೧೬. ಡಾ. ಬರಗೂರು ರಾಮಚಂದ್ರಪ್ಪ ದತ್ತಿ, ರಾಯಚೂರು ೨,೦೦,೦೦೦-೦೦

(ಅಖಿಲ ಭಾರತ ೮೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿನ ದತ್ತಿ)

೧೭ ದಿ. ಮೋಹನ್ ಏಕಬೋಟೆ ಸ್ಮರಣೆ ದತ್ತಿ, ಧಾರವಾಡ ೩೦,೦೦೦-೦೦

೧೮. ಶ್ರೀಮತಿ ಭಾರತಿ ಮೋಹನ ಕೋಟಿ ದತ್ತಿ, ಗದಗ ೧,೫೦,೦೦೦-೦೦.

೧೯. ಲಿಂ. ಶ್ರೀಮತಿ ಜಡಮ್ಮ ಅಮರಗುಂಡಪ್ಪ ಅರಳಿ ಸ್ಮರಣಾರ್ಥ ದತ್ತಿ, ಕೊಪ್ಪಳ

೨೫,೦೦೦-೦೦

೨೦. ಲಿಂ. ಕಾಮಾಕ್ಷಮ್ಮ ಚನ್ನವೀರಸ್ವಾಮಿ ಚಿಕ್ಕಮಠ ದತ್ತಿ, ಹುಬ್ಬಳ್ಳಿ ೨೫,೦೦೦-೦೦

೨೧. ಲಿಂ. ವೇದಮೂರ್ತಿ ಚನ್ನವೀರಸ್ವಾಮಿ ವಿ. ಚಿಕ್ಕಮಠ ದತ್ತಿ, ಹುಬ್ಬಳ್ಳಿ ೨೫,೦೦೦-೦೦

೨೨. ಶ್ರೀ ಡಿ.ಎಸ್. ಗುಡ್ಡದಗಿ ದತ್ತಿ, ವಿಜಯಪುರ ೨೫,೦೦೦-೦೦.

೨೩. ಶ್ರೀ ಎಸ್.ಜಿ. ಕೋಟಿ (ಸಂಗನ ಬಸಪ್ಪ) ದತ್ತಿ, ಬಾಗಲಕೋಟೆ ೧೫,೦೦೦-೦೦

೨೪. ಕೊಡಗಿನ ಸ್ವಾತಂತ್ರ್ಯ ಹೋರಾಟಗಾರರ ನೆನಪಿನ ದತ್ತಿ, ಕೊಡಗು ೩೦,೦೦೦-೦೦.

೨೫. ದಿ. ಎಂ. ಕೃಷ್ಣಶೆಟ್ಟಿಯವರ ಸ್ಮರಣಾರ್ಥ ದತ್ತಿ, ಉಡುಪಿ ೫೦,೦೦೦-೦೦.

೨೬. ಶ್ರೀ ಕರ್ಪೂರ ಶ್ರೀನಿವಾಸರಾವ್ ದತ್ತಿ, ಗುಜರಾತ್ ೨,೦೦,೦೦೦-೦೦

೨೭. ಹರಿಯಜ್ಜೆ ದಿ. ಅಂಗಡಿ ತಿಪ್ಪಯ್ಯ ಮತ್ತು ರುದ್ರಮ್ಮ ಸ್ಮರಣಾರ್ಥ ದತ್ತಿ ದಾವಣಗೆರೆ

೨೫,೦೦೦-೦೦

೨೮. ಶ್ರೀ ಸಿ.ಎಸ್. ವೆಂಕಟರಾವ್ ಜನ್ಮಶತಾಬ್ಲಿ ದತ್ತಿ, ದಾವಣಗೆರೆ ೧೫,೦೦೦-೦೦

೨೯. ದಿ. ಪಿ. ಕಾಳಿಂಗರಾವ್ ದತ್ತಿ, ಉಡುಪಿ ೨೫,೧೦೦-೦೦

೩೦. ರಾಜಗುರು ಕ್ರಿಯಾಶಕ್ತಿ ನಿಂಗಯ್ಯ ಒಡೆಯರ್ ದತ್ತಿ, ಬಾಗಲಕೋಟೆ ೨೫,೦೦೦-೦೦

೩೧. ಶ್ರೀಮತಿ ಮಂಗಳಾದೇವಿ ನಿಂಗಯ್ಯ ಒಡೆಯರ್ ದತ್ತಿ, ಬಾಗಲಕೋಟೆ ೨೫,೦೦೦-೦೦

೩೨. ಪ್ರೊ. ಕೆ.ಜಿ. ಕುಂದಣಗಾರ ದತ್ತಿ, ಧಾರವಾಡ ೨೫,೦೦೦-೦೦

೩೩ ದಿ, ಅಡಿವೆಮ್ಮ ಬಸಪ್ಪ ಗೋನಾಳ ದತ್ತಿ, ಕೊಪ್ಪಳ ೧೦,೦೦೦-೦೦

೩೪. ಕರ್ನಾಟಕ ಜಾನಪದ ಪರಿಷತ್ತು ದತ್ತಿ, ಚಿಕ್ಕಮಗಳೂರು ೨೫,೦೦೦-೦೦

೩೫. ದಿ. ರಾಮಚಂದ್ರಪ್ಪ ದತ್ತಿ, ರಾಯಚೂರು ೨೫,೦೦೦-೦೦

೩೬. ಲಿಂ. ಶಿವಯ್ಯ ವೀರಭದ್ರಯ್ಯ ಗುಡಗುಂಟಿ ಮಠ ದತ್ತಿ, ಬಾಗಲಕೋಟೆ ೨೫,೦೦೦-೦೦

೩೭. ಸಾಹಿತಿ ಬಾಬಾಮಜಿ ಬೈಲು ದತ್ತಿ, ಮಂಗಳೂರು ೫೦,೦೦೦-೦೦

೩೮. ಕರ್ಪೂರ್ ರಾಮರಾವ್ ಜನ್ಮ ಶತಾಬ್ದ ದತ್ತಿ, ಗುಜರಾತ್ ೨,೫೦,೦೦೦-೦೦

೩೯. ರಂಗಕರ್ಮಿ ಜಗುಚಂದ್ರ ಕೂಡ್ಡ ದತ್ತಿ, ಧಾರವಾಡ ೭೦,೦೦೦-೦೦

೪೦. ಲಿಂ. ಶಾಂತಾ ಚನ್ನಬಸಪ್ಪ ಸುಣಧೂಲಿ ದತ್ತಿ, ಧಾರವಾಡ ೨೫,೦೦೦-೦೦

೪೧. ಪ್ರೊ ಚಂದ್ರಶೇಖರ ಪಾಟೀಲ ದತ್ತಿ, ಮೈಸೂರು, ಬೆಂಗಳೂರು ೨,೦೦,೦೦೦-೦೦

೪೨. ದೇವಪ್ರಕಾಶ್ ಅವರ ಮಾತೃ ಭಾಗೀರಥಮ್ಮ ದತ್ತಿ, ತುಮಕೂರು ೩೦,೦೦೦-೦೦

೪೩. ಅಧ್ಯಕ್ಷರು, ಜನಪದರು, ಕರ್ನಾಟಕ ಜಾನಪದ ಜಗತ್ತು ಟ್ರಸ್ಟ್ ದತ್ತಿ ಧಾರವಾಡ

೨೫,೦೦೦-೦೦

೪೪. ಚಾಮರಾಜಪೇಟೆ ವರ್ತಕರ ಸಂಘ (ರಿ.) ದತ್ತಿ, ಬೆಂಗಳೂರು ೧,೦೦,೦೦೦-೦೦

೪೫. ಶ್ರೀಮತಿ ಪ್ರೇಮಕ್ಕ ಹಾಗೂ ಶ್ರೀ ಲೋಕಣ್ಣ ಚನ್ನಪ್ಪ ಉದಪುಡಿ ದತ್ತಿ ಬಾಗಲಕೋಟೆ

೧,೧೧,೧೧೧-೦೦

೪೬. ಡಾ. ರಾ.ಯ. ಧಾರವಾಡಕರ ಸ್ಮಾರಕ ದತ್ತಿ, ಧಾರವಾಡ ೨೫,೦೦೦-೦೦

೪೭. ಶ್ರೀಮತಿ ಅಕ್ಕಮ್ಮ ಮತ್ತು ಪರಮೇಶ್ವರ ಹೆಬ್ಬಾರ್ ಚುಂಗಿಗುಡ್ಡ ಸ್ಮಾರಕ ದತ್ತಿ ಉಡುಪಿ

೫೦,೦೦೦-೦೦

೪೮. ರಾಜಗುರು ಕ್ರಿಯಾಶಕ್ತಿ ನಿಂಗಯ್ಯ ಒಡೆಯಾರ್ ದತ್ತಿ, ಬಾಗಲಕೋಟೆ ೨೫,೦೦೦-೦೦

೪೯. ಸರಸ್ವತಿ ಮೇಜರ್ ನಾಗರಾಜ್ ಎಂ. ದತ್ತಿ, ಶಿವಮೊಗ್ಗ ೨೫,೦೦೦-೦೦

೫೦. ಕೆ.ಎಂ. ಕೃಷ್ಣಮೂರ್ತಿ ನೆನಪಿನ ದತ್ತಿ, ಚಿಕ್ಕಮಗಳೂರು ಜಿಲ್ಲೆ ೨೫,೦೦೦-೦೦

೫೧. ಡಾ. ಬೆಂ. ಶಾ. ಶ್ಯಾಮಲಾ ರತ್ನಕುಮಾರಿ ದತ್ತಿ, ಬೆಂಗಳೂರು ೨೫,೦೦೦-೦೦

೫೨. ದಿ. ವೈ.ಎನ್. ರಂಗನಾಥರವರ ದತ್ತಿ, ಚಾಮರಾಜನಗರ ಜಿಲ್ಲೆ ೨೫,೦೦೦-೦೦

೫೩. ಪುತ್ತೂರು ತಾಲ್ಲೂಕು ೧೭ನೇ ಸಾಹಿತ್ಯ ಸಮ್ಮೇಳನದ ದತ್ತಿ

* ದಕ್ಷಿಣ ಕನ್ನಡ ಜಿಲ್ಲೆ ೮೫,೩೯೭-೦೦

೫೪. ರಾಜಗುರು ಕ್ರಿಯಾಶಕ್ತಿ : ನಿಂಗಯ್ಯ ಬಸಯ್ಯ ಒಡೆಯರ್ ದತ್ತಿ -

ಬಾಗಲಕೋಟೆ ಜಿಲ್ಲೆ ೨೫,೦೦೦-೦೦

೫೫. ಲಿಂಗೈಕ್ಯ ಬಸನಗೌಡ ಪಾಟೀಲ ಮುನೇನಕೊಪ್ಪ ಸ್ಮರಣಾರ್ಥ ದತ್ತಿ -

ಧಾರವಾಡ ಜಿಲ್ಲೆ ೨೫,೦೦೦-೦೦

೫೬. ರತ್ನವ್ವ ಬಸಪ್ಪ ಕುಬಸದ ದತ್ತಿ, ಧಾರವಾಡ ಜಿಲ್ಲೆ ೨೫,೦೦೦-೦೦

೫೭ ಈಶ್ವರ ಮಹಾರುದ್ರಪ್ಪ ಸಣ್ಣಕಲ್ಲ ಮತ್ತು ಸುನಂದಾ ಈಸಣ್ಣ ಕಲ್ಲ ದತ್ತಿ - ಧಾರವಾಡ ಜಿಲ್ಲೆ

೨೫,೦೦೦-೦೦

೫೮. ಆದರ್ಶ ಶಿಕ್ಷಕ ದಂಪತಿ ಶ್ರೀಮತಿ ಶಿವಗಂಗಾ ಶ್ರೀ ವೀರಪ್ಪ ರಾಮಾಪೂರ ದತ್ತಿ,

ಧಾರವಾಡ ಜಿಲ್ಲೆ ೨೫,೦೦೦-೦೦

೫೯. ಶ್ರೀಮತಿ ನೀಲಮ್ಮ ಎಂ. ಸಾತ್ಕಾರ ಮತ್ತು ಶ್ರೀ ಮಹಾದೇವಗೌಡ ಎಸ್ ಸಾತ್ಮಾರ ದತ್ತಿ,

ಧಾರವಾಡ ಜಿಲ್ಲೆ ೨೫,೦೦೦-೦೦

೬೦. ಡಿ. ಪಾಂಡುರಂಗ ಸ್ಮರಣಾರ್ಥ ದತ್ತಿ, ಬಳ್ಳಾರಿ ಜಿಲ್ಲೆ ೨೫,೦೦೦-೦೦

೬೧. ಸಾಹಸಸಿಂಹ ಡಾ. ವಿಷ್ಣುವರ್ಧನ ಸ್ಮರಣಾರ್ಥ ದತ್ತಿ, ವಿಜಯಪುರ ಜಿಲ್ಲೆ ೧೫,೦೦೦-೦೦

೬೨. ದಿ. ಶ್ರೀ ಚನ್ನಬಸಪ್ಪ ದಾನಪ್ಪ ಹೂಗಾರ ಹಾಗೂ ದಿ. ಶ್ರೀಮತಿ ಮಹಾಂತವ್ವ ಚ. ಹೂಗಾರ

ದತ್ತಿ ಧಾರವಾಡ ಜಿಲ್ಲೆ ೧೫,೦೦೦-೦೦

೬೩. ಧಾರವಾಡ ಆಕಾಶವಾಣಿ ದತ್ತಿ, ಧಾರವಾಡ ಜಿಲ್ಲೆ ೧೫,೦೦೦-೦೦

೬೪. ಶಾಂಪೂರ ಭಾಗೀರಥಮ್ಮ ನೆನಪಿನ ಮಕ್ಕಳ ಸಾಹಿತ್ಯ ದತ್ತಿ ತುಮಕೂರು ಜಿಲ್ಲೆ

೩೦,೦೦೦-೦೦

೬೫. ಶ್ರೀ ಟಿ. ಪುಟ್ಟೇಗೌಡ ಮತ್ತು ಚಾಮಮ್ಮ ದತ್ತಿ, ರಾಮನಗರ ಜಿಲ್ಲೆ ೧೫೦೦೦-೦೦

೬೬. ಕುವೆಂಪು ಸ್ಮರಣೆ ದತ್ತಿ, ತುಮಕೂರು ಜಿಲ್ಲೆ ೧೫,೦೦೦-೦೦

೬೭. ಶ್ರೀಮತಿ ಪ್ರಭಾವತಿ ಶಶಿಧರ ಸ್ವಾಮಿ ಕಟ್ಟಿಮಠ ದತ್ತಿ, ಧಾರವಾಡ ಜಿಲ್ಲೆ ೧೫,೦೦೦-೦೦

೬೮. ಶ್ರೀ ಮೋಹನ ನಾಗಮ್ಮನವರ ಸ್ಮಾರಕ ದತ್ತಿ, ಧಾರವಾಡ ಜಿಲ್ಲೆ ೧೫,೦೦೦-೦೦

೬೯. ಡಾ. ಸಣ್ಣರಾಮ ಅಭಿನಂದನಾ ಸಮಿತಿ ದತ್ತಿ, ಶಿವಮೊಗ್ಗ ಜಿಲ್ಲೆ ೫೦,೦೦೦-೦೦.

೭೦. ದಿ, ಶಾಂತಾಬಾಯಿ ರಂಗನಾಥರಾವ್ ನಿಡಗುಂದಿ ಸ್ಮಾರಕ ದತ್ತಿ * ಕೊಪ್ಪಳ ಜಿಲ್ಲೆ

೧೫,೦೦೦-೦೦

೭೧. ಶ್ರೀ ಮಂಜುನಾಥ ಶಂಕರಣ್ಣ ಮುನವಳ್ಳಿ ದತ್ತಿ, ಧಾರವಾಡ ಜಿಲ್ಲೆ ೧೫,೦೦೦-೦೦

೭೨. ಶ್ರೀ ಬಸಪ್ಪ ವೀರಭದ್ರಪ್ಪ ಸೊರಟೂರ ದತ್ತಿ, ಧಾರವಾಡ ಜಿಲ್ಲೆ ೧೫,೦೦೦-೦೦

೭೩ ಕುಂಭಕ (ಕುಂದೂರು ಭದ್ರಮ್ಮ ಕಲ್ಲೇಗೌಡ ದತ್ತಿ) ಚಿಕ್ಕಮಗಳೂರು ಜಿಲ್ಲೆ ೧೫,೦೦೦-೦೦

೭೪. ದಿ. ರಾಜು ಮತ್ತು ಜಾನಕಮ್ಮ ದತ್ತಿ, ಚಿಕ್ಕಮಗಳೂರು ಜಿಲ್ಲೆ ೧೫,೦೦೦-೦೦

೭೫. ಶ್ರೀ ಚೆನ್ನಪ್ಪ ಓಬಳೇಶ ರವರ ಸ್ಮರಣಾರ್ಥ ದತ್ತಿ, ಶಿವಮೊಗ್ಗ ಜಿಲ್ಲೆ ೧೫,೦೦೦-೦೦

೭೬. ಶ್ರೀ ಅಶೋಕ ಎಸ್. ಪಾಟೀಲ್ ವಕೀಲರು, ಸ್ಮರಣಾರ್ಥ ದತ್ತಿ ಶಿವಮೊಗ್ಗ ಜಿಲ್ಲೆ

೧೫,೦೦೦-೦೦

೭೭, ದಿ. ಶ್ರೀ ರಾವುತಪ್ಪ ಕೂಡಗಿ ಇವರ ಸವಿ ನೆನಪಿಗಾಗಿ, ವಿಜಯಪುರ ಜಿಲ್ಲೆ

೧೫,೦೦೦-೦೦

೭೮. ರಾಮಚಂದ್ರ ಜಿ. ಚಿಲಕವಾಡ ಸ್ಮರಣಾರ್ಥ ದತ್ತಿ, ಧಾರವಾಡ ಜಿಲ್ಲೆ

೧೫,೦೦೦-೦೦

೭೯. ಗೋವಿಂದಪ್ಪ ಮತ್ತು ಶ್ರೀಮತಿ ಶಾರದಮ್ಮ ದತ್ತಿ, ಚಿಕ್ಕಮಗಳೂರು ಜಿಲ್ಲೆ ೫೦,೦೦೦-೦೦

೮೦. ಶ್ರೀ ಹಿರೇಹಾಳ್ ಇಬ್ರಾಹಿಂ ಸಾಬ್ ಮತ್ತು ಸಕಿನಾ ಬೇಗಂ ದತ್ತಿ

ಚಿಕ್ಕಮಗಳೂರು ಜಿಲ್ಲೆ ೫೦,೦೦೦-೦೦.

೮೧. ಶ್ರೀಮತಿ ದಿ. ಈರಮ್ಮ ಮತ್ತು ಶ್ರೀ ದಿ. ಸೂಗರಡ್ಡಿ ಬಿ. ಸಾವೂರು ಸ್ಮರಣಾರ್ಥ ದತ್ತಿ,
ಯಾದಗಿರಿ ಜಿಲ್ಲೆ ೧೦,೦೦೦-೦೦

೮೨. ಕೀರ್ತಿಶೇಷ ಹೆಕ್ಕುಂದ ಚಂದ್ರಶೇಖರ ಅಡಿಗ ಸ್ಮರಣಾರ್ಥ ದತ್ತಿ -
ದಾವಣಗೆರೆ ಜಿಲ್ಲೆ ೧೫,೦೦೦-೦೦

೮೩, ದಾವಣಗೆರೆ ತಾಲ್ಲೂಕು ೮ನೇ ಕನ್ನಡ ಸಾಹಿತ್ಯ ಸಮ್ಮೇಳನ ಆನಗೋಡು
೨೦೧೯ರ ನೆನಪಿನ ದತ್ತಿ, ದಾವಣಗೆರೆ ಜಿಲ್ಲೆ ೧೫,೦೦೦-೦೦

೮೪, ಹಾಲೇಹಳ್ಳಿ ದೊಡ್ಡ ತಿಮ್ಮಣ್ಣ ಸ್ಮರಣಾರ್ಥ ದತ್ತಿ, ದಾವಣಗೆರೆ ಜಿಲ್ಲೆ
೨೫,೦೦೦-೦೦

೮೫. ಕೀರ್ತಿಶೇಷ ಶ್ರೀಮತಿ ಅನಸೂಯ ಮತ್ತು ಶ್ರೀ ಜಿ.ಕೆ. ಶೇಷಾಚಲರಾವ್
ಸ್ಮರಣಾರ್ಥ ದತ್ತಿ, ದಾವಣಗೆರೆ ಜಿಲ್ಲೆ ೧೫,೦೦೦-೦೦

೮೬. ದಿ. ಸುಮಿತ್ರಾ ಬಾ ಈಳಿಗೇರ ಸ್ಮರಣಾರ್ಥ ದತ್ತಿ,ಧಾರವಾಡ ಜಿಲ್ಲೆ ೨೫,೦೦೦-೦೦

೮೭. ಶ್ರೀ ವಡ್ಡಿನ ಶೆಟ್ರು ಸಿದ್ದರಾಮಯ್ಯ ಮತ್ತು ಮಹಾಂತಮ್ಮ ಸ್ಮಾರಕ ದತ್ತಿ
ಬಳ್ಳಾರಿ ಜಿಲ್ಲೆ ೨೫,೦೦೦-೦೦

೮೮. ಶ್ರೀ ಜಿ. ದೇವೇಂದ್ರಪ್ಪ ಸ್ಮರಣಾ ದತ್ತಿ, ದಾವಣಗೆರೆ ಜಿಲ್ಲೆ ೧೫,೦೦೦-೦೦

೮೯. ಶ್ರೀಮತಿ ಲಿಂಗಮ್ಮ ಮತ್ತು ಡಾ. ಚಿಕ್ಕಕೊಮಾರಿಗೌಡ ಹಾರೋಕೊಪ್ಪ ದತ್ತಿ
ಬೆಂಗಳೂರು ಜಿಲ್ಲೆ ೩,೦೦,೦೦೦-೦೦.

೯೦. ದಿ. ಶಮುಶುದ್ದೀನ ಪಟೇಲ ಹಸನಪಾಟೀಲ, ಪಾಟೀಲ ದತ್ತಿ ವಿಜಯಪುರ ಜಿಲ್ಲೆ
೨೫,೦೦೦-೦೦

೯೧. ಲಿಂಗೈಕ್ಯ ಎಚ್ಚಪ್ಪರ ಎಚ್ಚಜ್ಜ ಮತ್ತು ಎಚ್ಚಪ್ಪರ ಹನುಮಮ್ಮ ದತ್ತಿ -
ಶಿವಮೊಗ್ಗ ಜಿಲ್ಲೆ ೨೫,೦೦೦-೦೦

೯೨. ಡಾ. ಚಂದ್ರಶೇಖರ ಕಂಬಾರ ದತ್ತಿ (೮೪ನೆಯ ಅ.ಭಾ.ಕ.ಸಾ.ಸ.ಸವಿನೆನಪಿನ ದತ್ತಿ,
ಧಾರವಾಡ) ಧಾರವಾಡ ೨,೦೦,೦೦೦-೦೦

೯೩ ಯಕ್ಷಪ್ರೇಮಿ ನಾರಾಯಣ ಸ್ಮರಣಾರ್ಥ ದತ್ತಿ ೨೫,೦೦೦-೦೦

೯೪. ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಸೂರ್ಯನಾರಾಯಣ ನೆನಪಿನ ದತ್ತಿ ೫೦,೦೦೦-೦೦

ಸಂಗ್ರಹವಾದ ಒಟ್ಟು ದತ್ತಿಯ ಮೊತ್ತ **ರೂ. ೨೨,೧೦,೩೯೭-೦೦**

### ♦ ಪರಿಷತ್ತು ಸ್ಥಾಪಿಸಿದ 'ಉದ್ಯೋಗ ವೆಬ್ ಪೋರ್ಟಲ್' ಅನ್ನು ಶ್ಲಾಘಿಸಿದ ಬಹುರಾಷ್ಟ್ರೀಯ ಕಂಪನಿಗಳು

ಡಾ. ಮನು ಬಳಿಗಾರ್ ಕ.ಸಾ.ಪ.ದ ಅಧ್ಯಕ್ಷರಾಗಿ ಬಂದ ಮೇಲೆ ಹಲವಾರು ಪ್ರಥಮಗಳನ್ನು ಸ್ಥಾಪಿಸಿದರು, ಅದರಲ್ಲಿ 'ಕನ್ನಡಿಗರಿಗೆ ಉದ್ಯೋಗ ವೆಬ್ ಪೋರ್ಟಲ್' ಕೂಡ ಒಂದು. ಕರ್ನಾಟಕದಲ್ಲಿ ನೆಲೆಸಿರುವ ಬಹುರಾಷ್ಟ್ರೀಯ ಮತ್ತು ದೇಶೀಯ ಕಂಪನಿಗಳಲ್ಲಿ ಕನ್ನಡಿಗರಿಗೆ ಸಿ ಮತ್ತು ಡಿ ದರ್ಜೆ ನೌಕರಿಗಳನ್ನು ಕೊಡುವಂತೆ ಶಿಫಾರಸು ಮಾಡುವುದು ಇದರ ಉದ್ದೇಶ. ೨೦೧೯ರ ಜುಲೈ ಅಂತ್ಯಕ್ಕೆ ೩೭೫ ಕಂಪನಿಗಳಿಗೆ ಸುಮಾರು ೨೫,೦೦೦ ಅರ್ಜಿಗಳನ್ನು ಈ ಜಾಲತಾಣದ ಮೂಲಕ ಶಿಫಾರಸು ಮಾಡಿ ಕಳುಹಿಸಿಕೊಡಲಾಗಿದೆ. ಇದರಲ್ಲಿ ಸುಮಾರು ೩೮೦ ಜನ ಕನ್ನಡಿಗರು ಇದರ ಪ್ರಯೋಜನ ಪಡೆದಿರುತ್ತಾರೆ. ಪರಿಷತ್ತಿನ ಈ ಯೋಜನೆಯನ್ನು ತಿಳಿದು ಮಾರುತಿ ಸುಜುಕಿ ಹಾಗೂ ಎನ್.ಟಿ.ಟಿ.ಎಫ್. ಕಂಪನಿ ಅವರು ಖುದ್ದಾಗಿ ಪರಿಷತ್ತಿಗೆ ಬಂದು ಉದ್ಯೋಗ ಸಂಬಂಧಿತ ಅರ್ಜಿಗಳನ್ನು ಪಡೆದುಕೊಂಡು ಈ ಮಾಹಿತಿಯು ಬೇರೆಡೆಯಲ್ಲೂ ಸಿಗುವದು ಕಷ್ಟಕರ, **ಸಾಹಿತ್ಯ ಪರಿಷತ್ತಿನ ಈ ಕಾರ್ಯ ಅತ್ಯಂತ ಶ್ಲಾಘನೀಯವೆಂದು ಅಭಿನಂದಿಸಿದ್ದಾರೆ.**

### ♦ ೧೦೭೨೭೨ ರಷ್ಟು ಹೊಸ ಆಜೀವ ಸದಸ್ಯ

ಇಡೀ ಭಾರತದಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ಘನತೆ ಗೌರವವಿರುವುದು ತಿಳಿದ ವಿಷಯ. ಒಂದು ಭಾಷೆ, ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗಾಗಿ ಮೀಸಲಾಗಿರುವ ಇಂತಹ ಸಂಸ್ಥೆ ಜಗತ್ತಿನಲ್ಲಿ ಇನ್ನೆಲ್ಲಿಯೂ ಇರಲಾರದು. ೩-೩-೨೦೧೬ಕ್ಕೂ ಮುಂಚೆ ಪರಿಷತ್ತು ೨೨೧೭೨೮ ಆಜೀವ ಸದಸ್ಯರನ್ನು ಒಳಗೊಂಡಿತ್ತು. ಹೆಮ್ಮೆಯ ಸಂಗತಿಯೆಂದರೆ ಈ ೩ ವರ್ಷದಲ್ಲಿ ೧೦೭೨೭೨ ರಷ್ಟು ಆಜೀವ ಸದಸ್ಯರು ಸದಸ್ಯತ್ವ ಪಡೆದುಕೊಂಡಿದ್ದಾರೆ. ಇದೀಗ ಒಟ್ಟು ಸದಸ್ಯರ ಸಂಖ್ಯೆ ೩೧-೮-೨೦೧೯ ಕ್ಕೆ ೩೨೯೦೦೦ (ಮೂರು ಲಕ್ಷದ ಇಪ್ಪತ್ತೊಂಬತ್ತು ಸಾವಿರ)ಕ್ಕೆ ಏರಿಕೆಯಾಗಿದೆ. ಹಾಗಾಗಿ ಈ ಬೆಳವಣಿಗೆಯು ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಸ್ತುತ ಅವಧಿಯಲ್ಲಾದ

ಜನಪರವಾದ ಕಾರ್ಯಕ್ರಮಗಳು, ಕಾರ್ಯ ಯೋಜನೆ, ಅನುಷ್ಠಾನ ಮತ್ತು ಸ್ವಾರ್ಥರಹಿತ ದುಡಿಮೆಯ ಫಲ ಎಂಬುದರಲ್ಲಿ ಎರಡು ಮಾತಿಲ್ಲ.

- **ಡಾ. ಸಿದ್ಧಯ್ಯ ಪುರಾಣಿಕ, ಶ್ರೀ ಮಿರ್ಜಿ ಅಣ್ಣಾರಾಯ ಹಾಗೂ ಡಾ. ರಾ.ಯ. ಧಾರವಾಡಕರ ಅವರುಗಳ ಜನ್ಮಶತಮಾನೋತ್ಸವ ಸಮಾರಂಭ. (ಸಾಹಿತ್ಯ ಅಕಾಡಮಿ ನವದೆಹಲಿ ಸಹಯೋಗದಲ್ಲಿ)**

೩೦ ಜುಲೈ ಹಾಗೂ ೧ ಆಗಸ್ಟ್ ೨೦೧೯ ರಂದು ಮೇಲ್ಕಾಣಿಸಿದ ೩ ಜನ ಸಾಹಿತಿಗಳ ಜನ್ಮ ಶತಮಾನೋತ್ಸವವನ್ನು ಆಚರಿಸಲಾಯಿತು. ಪರಿಷತ್ತಿನ ಆವರಣದಲ್ಲಿರುವ ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ ಎರಡು ದಿನಗಳ ಕಾಲ ನಡೆದ ಈ ಸಮಾರಂಭದ ಉದ್ಘಾಟನೆಯನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರರು ನೆರವೇರಿಸಿದರು. ಡಾ. ಮನು ಬಳಿಗಾರ್ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಕವಿಗಳಾದ ಡಾ. ಸಿದ್ದಲಿಂಗಯ್ಯನವರು ಆಶಯ ನುಡಿಗಳನ್ನಾಡಿದರು.

ಅದೇ ದಿನ ಮಧ್ಯಾಹ್ನ ನಡೆದ 'ಡಾ. ಸಿದ್ಧಯ್ಯ ಪುರಾಣಿಕ ಬದುಕು - ಬರಹ' ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ನಾಗಾಬಾಯಿ ಬುಳ್ಳಾ ಅವರು ವಹಿಸಿ ಡಾ. ಸಿದ್ದಯ್ಯ ಪುರಾಣಿಕರ ಬದುಕನ್ನು ಕುರಿತು ಮಾತನಾಡಿದರು. 'ಕಾವ್ಯ'ವನ್ನು ಕುರಿತು ಡಾ. ವೆಂಕಟಗಿರಿ ದಳವಾಯಿ ಹಾಗೂ 'ಗದ್ಯ ಸಾಹಿತ್ಯ' ಕುರಿತು ಡಾ. ವೈ.ಎಂ. ಯಾಕೊಳ್ಳಿ ಮಾತನಾಡಿದರು. ಶ್ರೀ ಮಿರ್ಜಿ ಅಣ್ಣಾರಾಯ ಬದುಕು-ಬರಹ ಕುರಿತ ೨ನೇ ಗೋಷ್ಠಿಯ ಅಧ್ಯಕತೆಯನ್ನು ವಹಿಸಿ ಶ್ರೀ ಮಿರ್ಜಿ ಅಣ್ಣಾರಾಯರ ಬದುಕನ್ನು ಕುರಿತಂತೆ ಡಾ. ಶಾಂತಿನಾಥ ದಿಬ್ಬದ ಅವರು ಮಾತನಾಡಿದರು. 'ಕಾದಂಬರಿ'ಗಳನ್ನು ಕುರಿತಂತೆ ಡಾ. ಬಾಳಾಸಾಹೇಬ ಲೋಕಾಪುರ ಹಾಗೂ ಸಂಶೋಧನೆ'ಯನ್ನು ಕುರಿತಂತೆ ಡಾ. ಪದ್ಮಿನಿ ನಾಗರಾಜ ಅವರು ಮಾತನಾಡಿದರು.

ಎರಡನೇ ದಿನ ನಡೆದ ಡಾ. "ರಾ.ಯ. ಧಾರವಾಡಕರ ಬದುಕುಬರಹ" ಕುರಿತ ೩ನೇ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿ ಅವರ 'ಬದುಕು' ಕುರಿತು ಡಾ. ಜಿ.ಎಂ. ಹೆಗಡೆ ಮಾತನಾಡಿದರು 'ಸೃಜನ ಸಾಹಿತ್ಯ' ಕುರಿತಂತೆ ಪ್ರೊ. ಬಿ. ಸುಕನ್ಯಾ ಹಾಗೂ 'ಸೃಜನೇತರ ಸಾಹಿತ್ಯ ಕುರಿತು ಡಾ. ಗಣೇಶ ಅಮೀನಗಡ ಅವರು ಮಾತನಾಡಿದರು. ಅಂದು ಮಧ್ಯಾಹ್ನ ನಡೆದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಹಿರಿಯ ಕವಿಗಳು ಹಾಗೂ ಕರ್ನಾಟಕ ಲಲಿತಕಲಾ

ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾದ ಡಾ. ಮಲ್ಲಿಕಾ ಘಂಟಿ ಅವರು ವಹಿಸಿದ್ದರು. ಈ ಗೋಷ್ಠಿಯಲ್ಲಿ ನಾಡಿನ ೧೭ ಕವಿಗಳು ತಮ್ಮ ಕವನ ವಾಚನ ಮಾಡಿದರು, ಎರಡೂ ದಿನ ನಡೆದ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

## ♦ ರಾಜ್ಯಮಟ್ಟದ ಅಭೂತಪೂರ್ವ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನ

೧೦೫ನೇ ವಸಂತಕ್ಕೆ ಕಾಲಿಟ್ಟಿರುವ ಕನ್ನಡ ಸಾಹಿತ್ಯ ಪರಿಷತ್ತು ಅನೇಕ ಘನ ಕಾರ್ಯಗಳನ್ನು ಸಾಧಿಸಿದೆ. ಅಂತಹುದೇ ಮತ್ತೊಂದು ಸಾಧನೆ ಎಂದರೆ ೨೦೧೯ರ ಆಗಸ್ಟ್ ೧೭ ಮತ್ತು ೧೮ ರಂದು ಕೋಲಾರದಲ್ಲಿ ಜರುಗಿದ ಪ್ರಥಮ ರಾಜ್ಯಮಟ್ಟದ ದಲಿತ ಸಾಹಿತ್ಯ ಸಮ್ಮೇಳನ, ನಾಡಿನ ಹಿರಿಯ ಸಾಹಿತಿಗಳೂ, ರಾಜ್ಯಸಭಾ ಸದಸ್ಯರೂ ಆದ ಡಾ. ಎಲ್. ಹನುಮಂತಯ್ಯನವರು ಈ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಕೋಲಾರದ ಶ್ರೀ ಟಿ. ಚನ್ನಯ್ಯ ರಂಗಮಂದಿರದಲ್ಲಿ ನಡೆದ ಎರಡು ದಿನಗಳ ಈ ಸಮ್ಮೇಳನವನ್ನು ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಎಸ್. ಮುನಿಸ್ವಾಮಿ ಅವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಹಿರಿಯ ಕವಿಗಳಾದ ಡಾ. ಸಿದ್ದಲಿಂಗಯ್ಯ ಮತ್ತು ಪ್ರೊ ಕೆ.ಬಿ. ಸಿದ್ದಯ್ಯನವರು ಐದು ದಲಿತ ಸಾಹಿತ್ಯ ಸಂಪುಟಗಳನ್ನು ಬಿಡುಗಡೆ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಕೆ.ಎಂ, ಜಾನಕಿ, ಕೋಲಾರ ಜಿಲ್ಲೆಯ ಕ.ಸಾ.ಪ. ಅಧ್ಯಕ್ಷರಾದ ಶ್ರೀ ನಾಗಾನಂದ ಕೆಂಪರಾಜ್ ಹಲವಾರು ಜನ ಸಾಹಿತಿಗಳು, ಜನಪ್ರತಿನಿಧಿಗಳು ಅತಿಥಿಗಳಾಗಿ ಭಾಗವಹಿಸಿದ್ದರು. ನಾಡೋಜ ಡಾ. ಮನು ಬಳಿಗಾರ್ ಅವರ ಸಮಾರಂಭವು ಜರುಗಿತು.

'ದಲಿತ ಸಾಂಸ್ಕೃತಿಕ ಚಿಂತನೆ' ಎನ್ನುವ ಮೊದಲ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಬಿ.ಎಂ. ಪುಟ್ಟಯ್ಯನವರು ವಹಿಸಿದ್ದರು. ಈ ಗೋಷ್ಠಿಯಲ್ಲಿ ಬುಡಕಟ್ಟು ಸಂಸ್ಕೃತಿ'ಯನ್ನು ಕುರಿತಂತೆ ಡಾ. ಬಾಲಗುರುಮೂರ್ತಿ, 'ದಲಿತ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಕುರಿತಂತೆ ಡಾ. ಅಣ್ಣಮ್ಮ, 'ಜಾನಪದ ಸಾಹಿತ್ಯದಲ್ಲಿ ದಲಿತ ಪ್ರತಿನಿಧೀಕರಣ' ಕುರಿತು ಡಾ. ಅಪ್ಪಗೆರೆ ಸೋಮಶೇಖರ್ ಅವರು ಪ್ರಬಂಧ ಮಂಡಿಸಿದರು. ಸಂಜೆ ನಡೆದ 'ದಲಿತ, ರೈತ ಮತ್ತು ಸ್ತ್ರೀ' ಎನ್ನುವ ಎರಡನೇ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಬಿ.ಟಿ. ಲಲಿತಾ ನಾಯಕ್ ವಹಿಸಿದ್ದರು. ಈ ಗೋಷ್ಠಿಯಲ್ಲಿ 'ದಲಿತ ಮಹಿಳಾ

ಸಾಹಿತ್ಯ ಕುರಿತು ಡಾ. ಸಮತಾ ಬಿ. ದೇಶಮಾನೆ 'ಸ್ತ್ರೀ ಬಿಕ್ಕಟ್ಟು' ಕುರಿತು ಡಾ. ಸುಮ ಬಿ.ಯು. ಪ್ರಬಂಧ ಮಂಡಿಸಿದರು.

ಎರಡನೇ ದಿನದ ಮೂರನೇ ಗೋಷ್ಠಿ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ'ದಲ್ಲಿ ೧೪ ಜನ ಬರಹಗಾರರು, ಕವಿಗಳು, ಸಾಹಿತಿಗಳು, ಚಳವಳಿಗಾರರು ಭಾಗವಹಿಸಿದ್ದರು. ಈ ಗೋಷ್ಠಿಯನ್ನು **ಡಾ. ಸುಬ್ರಾವ್ ಎಂಟೆತ್ತಿನವರ** ಅವರು ನಿರ್ವಹಿಸಿಕೊಟ್ಟರು. ಸಮಕಾಲೀನ ಬಿಕ್ಕಟ್ಟು, ಹೋರಾಟ, ದಲಿತರ ಅಸ್ಮಿತೆ ಹಾಗೂ ಡಾ. ಎಲ್. ಹನುಮಂತಯ್ಯನವರ ಸಾಹಿತ್ಯ ಕುರಿತಂತೆ ಪ್ರಶ್ನೋತ್ತರಗಳು ನಡೆದವು.

ಮಧ್ಯಾಹ್ನ ನಡೆದ 'ದಲಿತ ಸಾಹಿತ್ಯ' ಎನ್ನುವ ನಾಲ್ಕನೇ ಗೋಷ್ಠಿಯಲ್ಲಿ 'ದಲಿತ ಕಾವ್ಯ' ಕುರಿತಂತೆ ಶ್ರೀ ಶಂಕನಪುರ ಮಹದೇವ, "ದಲಿತ ಕಥೆ-ಕುರಿತಂತೆ ಡಾ. ಸಣ್ಣರಾಮ ಅವರು ಮಾತನಾಡಿದರು. ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ೧೮ ಜನ ಕವಿಗಳು ತಮ್ಮ ಕವಿತೆಗಳನ್ನು ವಾಚಿಸಿದರು. ಖ್ಯಾತ ಕವಿಗಳಾದ ಶ್ರೀ ಸುಬ್ಬು ಹೊಲೆಯಾರ್ ಈ ಗೋಷ್ಠಿಯ ಆಶಯ ನುಡಿಗಳನ್ನು ಆಡಿದರು.

ಅಂದು ಸಂಜೆ ನಡೆದ 'ಸನ್ಮಾನ ಹಾಗೂ ಸಮಾರೋಪ ಸಮಾರಂಭವು ಡಾ. ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಖ್ಯಾತ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಸಮಾರೋಪ ಭಾಷಣ ಮಾಡಿದರು. ಇದೇ ಸಂದರ್ಭದಲ್ಲಿ ಡಾ. ಸತೀಶ್ ಕುಮಾರ್ ಹೊಸಮನಿ ಅವರು ವಿವಿಧ ಲೇಖಕರ ಕೃತಿಗಳನ್ನು ಬಿಡುಗಡೆ ಮಾಡಿ ಮಾತನಾಡಿದರು. ಈ ಕಾರ್ಯಕ್ರಮದ ಭಾಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಈ ಕೆಳಕಂಡ ಗಣ್ಯರನ್ನು ಗೌರವಿಸಲಾಯಿತು :

ಶ್ರೀ ಮಾವಳ್ಳಿ ಶಂಕರ್, ಪ್ರೊ ಶಾಂತನಾಯಕ್, ಶ್ರೀ ಸಿ. ಮುನಿಯಪ್ಪ ಡಾ. ವಿ. ಮುನಿವೆಂಕಟಪ್ಪ, ಶ್ರೀ ಕುಂದೂರು ತಿಮ್ಮಯ್ಯ, ಡಾ. ಬಾನಂದೂರು ಕೆಂಪಯ್ಯ, ಡಾ. ಎಚ್.ಟಿ. ಪೋತೆ, ಡಾ. ಜಯದೇವಿ ಗಾಯಕವಾಡ, ಶ್ರೀ ಟಿ. ವಿಜಯಕುಮಾರ್, ಶ್ರೀ ಬಾಲಾಜಿ ಚನ್ನಯ್ಯ, ಶ್ರೀ ಬಂಗವಾದಿ ನಾರಾಯಣಪ್ಪ ಡಾ. ಡಿ.ಜಿ. ಸಾಗರ್, ಡಾ. ಎಂ. ವೆಂಕಟಸ್ವಾಮಿ (ಆರ್.ಪಿ.ಐ.),ಪ್ರೊ. ಬಿ. ಸುಕನ್ಯಾ, ಶ್ರೀ ಮದನ್ ಪಟೇಲ್.

ಅದೇ ದಿನ ಸಂಜೆ ಶ್ರೀ ಚಂದ್ರಶೇಖರ ವಸ್ತದ ಅವರ 'ನುಲಿಯ ಚಂದಯ್ಯ' ಹಾಗೂ ಮರುದಿನ ಕೋಟಗಾನಹಳ್ಳಿ ರಾಮಯ್ಯ ಅವರ “ಸುಮ್ ಸುಮ್ಕೇ' ನಾಟಕಗಳ ಪ್ರದರ್ಶನವಿತ್ತು.

ಎರಡೂ ದಿನ ನಡೆದ ಕಾರ್ಯಕ್ರಮಗಳು, ವಿದ್ವತ್ ಗೋಷ್ಠಿಗಳು, ಜನಮೆಚ್ಚುಗೆಗೆ ಪಾತ್ರವಾಗಿ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ನಾಡಿನ ವಿವಿಧ ಪ್ರದೇಶಗಳಿಂದ ಬಂದಿದ್ದ ಸಾಹಿತಿಗಳು, ಹೋರಾಟಗಾರರು, ಕಲಾವಿದರು, ಸಂಸ್ಕೃತಿ ಚಿಂತಕರು, ಜನ ಸಾಮಾನ್ಯರು ಎಲ್ಲರಿಗೂ ಊಟ-ವಸತಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಗಿತ್ತು ಎಂದು ಮಾಧ್ಯಮಗಳು ಶ್ಲಾಘಿಸಿದ್ದು ಸಂಘಟಕರಿಗೆ ಸಂತೋಷ ತಂದಿದೆ.

- **ನೆರೆಸಂತ್ರಸ್ತರ ಸಹಾಯಾರ್ಥವಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ರೂ. ೩೪ ಲಕ್ಷಗಳ ದೇಣಿಗೆ**

ಜಲಪ್ರಳಯದಿಂದಾಗಿ ರಾಜ್ಯಾದ್ಯಂತ ಅಪಾರ ನಷ್ಟವುಂಟಾಗಿದ್ದು, ನೆರೆಸಂತ್ರಸ್ತರ ಸಹಾಯಾರ್ಥವಾಗಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಂಪನ್ಮೂಲದಿಂದ, ಸಿಬ್ಬಂದಿಗಳ ಒಂದು ದಿನದ ವೇತನದಿಂದ, ಜಿಲ್ಲಾ ಕ.ಸಾ.ಪ. ಘಟಕಗಳ ಅಧ್ಯಕ್ಷರುಗಳ ವತಿಯಿಂದ ಹಾಗೂ ಕ.ಸಾ.ಪ. ಅಧ್ಯಕ್ಷರು, ಪದಾಧಿಕಾರಿಗಳಿಂದ ದೇಣಿಗೆ ರೂಪದಲ್ಲಿ "ಮುಖ್ಯಮಂತ್ರಿಗಳ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ" ರೂ. ೩೪.೦೦ (ಮೂವತ್ನಾಲ್ಕು ಲಕ್ಷ ರೂಪಾಯಿ)ಗಳ ಚೆಕ್ ಅನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮನು ಬಳಿಗಾರ್ ಅವರ ನೇತೃತ್ವದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ (೦೪-೦೯-೨೦೧೯) ವಿಧಾನ ಸೌಧದಲ್ಲಿ ನೀಡಲಾಯಿತು. ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ರೂ. ೧೫,೦೦೦-೦೦ಗಳನ್ನು ವೈಯಕ್ತಿಕವಾಗಿ ನೀಡಿದ್ದರು. ಗೌರವ ಕೋಶಾಧ್ಯಕ್ಷರಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕಾರ್ಯದರ್ಶಿ ಡಾ. ರಾಜಶೇಖರ ಹತಗುಂದಿ, ಜಿಲ್ಲಾ ಕ.ಸಾ.ಪ. ಅಧ್ಯಕ್ಷರುಗಳಾದ ಶ್ರೀ ನೀಲಾವರ ಸುರೇಂದ್ರ ಅಡಿಗ, ಶ್ರೀ ಲಿಂಗಯ್ಯ ಹಿರೇಮಠ, ಶ್ರೀ ಶ್ರೀಶೈಲ ಕರಿಶಂಕರಿ, ಶ್ರೀ ಬಿ.ಎಸ್. ವಿನಯ್, ಶ್ರೀ ಸಿದ್ದಪ್ಪ ಹೊಟ್ಟಿ, ಶ್ರೀ ರಾಜಶೇಖರ ಅಂಗಡಿ, ಶ್ರೀ ಸುರೇಶ ಚನಶೆಟ್ಟಿ, ಶ್ರೀ ಶರಣು ಗೋಗೇರಿ ಅವರುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

- **ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಬೆಂಗಳೂರು ಮಹಾನಗರಸಾರಿಗೆ ಸಂಸ್ಥೆ ಜಂಟಿಯಾಗಿ ಸ್ಥಾಪಿಸಿರುವ “ನೃಪತುಂಗ ಸಾಹಿತ್ಯ ಪ್ರಶಸ್ತಿ”**

ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ದಾಖಲಾದ ಅತ್ಯಂತ ಶ್ರೇಷ್ಠ ಹಾಗೂ ಮೌಲಿಕ ಸಾಹಿತ್ಯ ಪ್ರಶಸ್ತಿ 'ಬೆಂ.ಮ.ಸಾ.ಸಂ. ನೃಪತುಂಗ ಸಾಹಿತ್ಯ ಪ್ರಶಸ್ತಿ'. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ಈ ಸಾರಿಗೆ ಸಂಸ್ಥೆಯ ಕನ್ನಡ ಕ್ರಿಯಾ ಸಮಿತಿಯ ಆಸಕ್ತಿಯ ಫಲವಾಗಿ ಕಳೆದ ಹನ್ನೆರಡು ವರ್ಷಗಳ ಹಿಂದೆ ಸ್ಥಾಪಿಸಲಾಗಿರುವ ಒಂದೂವರೆ ಕೋಟಿ ರೂಪಾಯಿಗಳ ಸ್ಥಾಯಿನಿಧಿ ಈ ಪ್ರಶಸ್ತಿಯ ಮೂಲಧನ. ಇದರ ಬಡ್ಡಿ ಹಣದಲ್ಲಿ ಬರುವ ಆದಾಯದಿಂದ ಏಳು ಲಕ್ಷದ ಒಂದು ರೂಪಾಯಿ ಮೊತ್ತದ ಈ ಪ್ರಶಸ್ತಿಯನ್ನು ಕನ್ನಡದ ಶ್ರೇಷ್ಠ ಸಾಹಿತಿಯೊಬ್ಬರಿಗೆ ಪ್ರತಿವರ್ಷ ನೀಡಲಾಗುತ್ತದೆ. ಕ.ಸಾ.ಪ. ಅಧ್ಯಕ್ಷರೇ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದು, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು, ಹಾಗೂ ಗಣ್ಯ ಸಾಹಿತಿಗಳನ್ನೊಳಗೊಂಡ ಐದು ಮಂದಿಯ ಸಮಿತಿಯು ಈ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುತ್ತದೆ. ಮನು ಬಳಿಗಾರ್ ಅವರ ಅವಧಿಯಲ್ಲಿ ಆಯ್ಕೆ ಮಾಡಲಾದ 'ನೃಪತುಂಗ ಪ್ರಶಸ್ತಿ ಪುರಸ್ಕೃತರ ಪಟ್ಟಿ ಈ ಕೆಳಗಿನಂತಿದೆ.

೧. ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ - ೨೦೦೫

೨. ಡಾ. ಎಂ. ಚಿದಾನಂದಮೂರ್ತಿ - ೨೦೦೬

೩. ಡಾ. ಎಸ್.ಎಲ್. ಭೈರಪ್ಪ - ೨೦೦೭

೪. ಡಾ. ಸಿದ್ದಲಿಂಗಯ್ಯ - ೨೦೦೮

೫, ಡಾ ಚೆನ್ನವೀರ ಕಣವಿ - ೨೦೦೯

ಮುಂದುವರಿದಂತೆ....

- **ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆ ಹಾಡಲು ಕಾಲಾವಧಿ ನಿಗದಿಪಡಿಸುವ ಬಗ್ಗೆ ಸರ್ಕಾರಕ್ಕೆ ಮನವಿ.**

ಕರ್ನಾಟಕ ಸರ್ಕಾರವು ಕುವೆಂಪು ಅವರ "ಜಯಭಾರತ ಜನನಿಯ ತನುಜಾತೆ" ಗೀತೆಗೆ ನಾಡಗೀತೆಯ ಸ್ಥಾನಮಾನ ಕೊಟ್ಟು ಹಲವು ವರ್ಷಗಳು ಸಂದಿವೆ. ಆದರೆ, ಈ ಗೀತೆಯನ್ನು ಹಾಡಲು ಒಂದು ಕಾಲಮಿತಿಯನ್ನು ಇದುವರೆಗೆ ನಿಗದಿಪಡಿಸಿಲ್ಲವಾದ್ದರಿಂದ ಜನರು ನಾನಾ ರೀತಿಯಲ್ಲಿ ಹಾಗೂ ಯಾವ ಕಾಲಮಿತಿಯಿಲ್ಲದೇ ಅದನ್ನು ಹಾಡುತ್ತಿದ್ದಾರೆ. ಈಗ ಕನಿಷ್ಠ ನಾಲ್ಕು ನಿಮಿಷದಿಂದ ಒಂಬತ್ತು ನಿಮಿಷದವರೆಗೆ ಅಥವಾ ಅವರವರ ಇಷ್ಟಾನುಸಾರ ಆಲಾಪ ಸಹಿತ,

ಹಿನ್ನೆಲೆ ಸಂಗೀತಕ್ಕಾಗಿ ನಡು ನಡುವೆ ಬಿಡುವು ಕೊಟ್ಟು ಹಾಗೂ ಸಾಲುಗಳನ್ನು ಪುನರಾವರ್ತನೆ ಮಾಡಿ ಹಾಡುತ್ತಿರುವುದು ಸಾರ್ವಜನಿಕರಲ್ಲಿ ಅಸಮಾಧಾನ ಮೂಡಿಸಿದೆ.

ಇಷ್ಟು ದೀರ್ಘ ಅವಧಿಗೆ ನಾಡಗೀತೆಯನ್ನು ಹಾಡುವುದರಿಂದ ಸಭೆ ಸಮಾರಂಭಗಳಲ್ಲಿ ವಯೋವೃದ್ಧರಿಗೆ, ಗರ್ಭಿಣಿಯರಿಗೆ, ದೈಹಿಕ ಸಮಸ್ಯೆಗಳು ಇರುವಂಥವರಿಗೆ ಅಷ್ಟು ಕಾಲ ನಿಂತುಕೊಳ್ಳುವುದು ಕಷ್ಟವಾಗುತ್ತಿದೆ. ನಮ್ಮ ದೇಶದ ರಾಷ್ಟ್ರಗೀತೆಯನ್ನು ೫೨ ಸೆಕೆಂಡುಗಳಿಗೆ ಮೀರದಂತೆ ಹಾಡುತ್ತಾರೆ. ಅದರಲ್ಲಿ ನಡು ನಡುವೆ ಯಾವುದೇ ಆಲಾಪ ಇರುವುದಿಲ್ಲ, ಹಿನ್ನೆಲೆ ಸಂಗೀತಕ್ಕೆ ಮಧ್ಯದಲ್ಲಿ ಬಿಡುವು ಇರುವುದಿಲ್ಲ ಹಾಗೂ ಸಾಲುಗಳ ಪುನರಾವರ್ತನೆ ಇರುವುದಿಲ್ಲ. ರಾಷ್ಟ್ರಗೀತೆಗಳು ಹಾಗೂ ನಾಡಗೀತೆಗಳು ಕಡಿಮೆ ಅವಧಿಯವೇ ಆಗಿರಬೇಕು ಹಾಗೂ ಆಗಿರುತ್ತವೆ.

ಈ ಎಲ್ಲ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಾಡಿನ ಗಣ್ಯ ಸಾಹಿತಿಗಳ, ಪ್ರಸಿದ್ಧ ಗಾಯಕರ ಹಾಗೂ ಕನ್ನಡಪರ ಹೋರಾಟಗಾರರ, ಚಿಂತಕರ ಸಭೆಯನ್ನು ನವೆಂಬರ್ ೧೪ರಂದು ಡಾ. ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ನಡೆಸಿ ನಾಡಗೀತೆ ಹಾಡುವ ಅವಧಿಯನ್ನು ಎಷ್ಟು ಕಡಿಮೆ ಮಾಡಬಹುದು ಎಂದು ವಿವರವಾಗಿ ಚರ್ಚಿಸಲಾಯಿತು. ಸಭೆಯಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಚಂದ್ರಶೇಖರ ಕಂಬಾರ, ಡಾ. ಕಮಲಾ ಹಂಪನಾ, ಪ್ರೊ. ಚಂದ್ರಶೇಖರ ಪಾಟೀಲ, ಡಾ. ದೊಡ್ಡರಂಗೇಗೌಡ, ಡಾ. ಬಿ.ಟಿ. ಲಲಿತಾ ನಾಯಕ, ಡಾ. ಸಿದ್ದಲಿಂಗಯ್ಯ ಅವರಂಥ ಹಿರಿಯ ಸಾಹಿತಿಗಳು ಮಾತ್ರವಲ್ಲದೇ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾಗಿ ನಿವೃತ್ತರಾದ ಶ್ರೀ ಚಿರಂಜೀವಿ ಸಿಂಗ್, ನಿವೃತ್ತ ಅಧಿಕಾರಿಗಳಾದ ಹಾಗೂ ಗಾಯಕರೂ ಆದ ಡಾ. ಮುದ್ದುಮೋಹನ್ ಶ್ರೀ ವೈ.ಕೆ. ಮುದ್ದುಕೃಷ್ಣ ಮುಂತಾದವರೂ ಭಾಗವಹಿಸಿದ್ದರು. ಈ ಎಲ್ಲರೂ ಒಕ್ಕೊರಲಿನಿಂದ ನಾಡಗೀತೆ ಹಾಡುವ ಅವಧಿಯನ್ನು ಕಡಿಮೆ ಮಾಡಬೇಕು ಎಂದು ಆಗ್ರಹಿಸಿದರು. ಖ್ಯಾತ ಕವಿ ಡಾ. ಕೆ.ಎಸ್. ನಿಸಾರ್ ಅಹ್ಮದ್‌ರವರು ಅಧ್ಯಕ್ಷರಿಗೆ ಪತ್ರ ಬರೆದು ಹಾಗೂ ಡಾ. ಎಂ. ಚಿದಾನಂದ ಮೂರ್ತಿಗಳು ಫೋನ್ ಮಾಡಿ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಈ ಸಭೆಯಲ್ಲಿ ಎರಡು ನಿಮಿಷ ಇಪತ್ತು ಸೆಕೆಂಡುಗಳಿಗೆ ಮೀರದಂತೆ (೨ ನಿಮಿಷ ೨೦ ಸೆಕೆಂಡ್) ಗಾಯಕರಾದ ಮೃತ್ಯುಂಜಯ ದೊಡ್ಡವಾಡ, ಆನಂದ ಮಾದಲಗೆರೆ ಅವರು ನಾಡಗೀತೆಯನ್ನು ಹಾಡಿ ತೋರಿಸಿದರು. ಶ್ರೀ ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ಎಚ್, ಫಲ್ಗುಣ ಅವರು ಇಷ್ಟೇ ಅವಧಿಯ ಧ್ವನಿಮುದ್ರಿತ ನಾಡಗೀತೆಯನ್ನು ನುಡಿಸಿ ತೋರಿಸಿದರು.

ಇಲ್ಲಿ ಒತ್ತಿ ಹೇಳಬೇಕಾದ ಒಂದು ವಿಚಾರ ಎಂದರೆ ಈ ಗಾಯಕರು ೧ ನಿಮಿಷ ೩೦ ಸೆಕೆಂಡುಗಳಿಗೆ ಮೀರದಂತೆ ನಾಡಗೀತೆಯನ್ನು ಹಾಡಿದರೂ ಅದರ ಭಾವ ಹಾಗೂ ಪಠ್ಯಕ್ಕೆ ಯಾವುದೇ ಕುಂದು ಬರಲಿಲ್ಲ. ಈ ಅಂಶವನ್ನು ಗಮನಿಸಿದ ಸಭೆ ಪೂರ್ಣಪಠ್ಯದ ನಾಡಗೀತೆ ಹಾಡುವ ಅವಧಿಯನ್ನು ಗರಿಷ್ಠ ೧ ನಿಮಿಷ ೩೦ ಸೆಕೆಂಡುಗಳಿಗೆ ನಿಗದಿಗೊಳಿಸಬೇಕು ಎಂದು ಸರ್ಕಾರಕ್ಕೆ ಸರ್ವಾನುಮತದಿಂದ ಆಗ್ರಹಿಸಲು ನಿರ್ಣಯಿಸಿ, ದಿನಾಂಕ ೧೫-೧೧-೨೦೧೮ ರಂದು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಟಿ.ಎಂ. ವಿಜಯಭಾಸ್ಕರ್ ಅವರನ್ನು ಅಧ್ಯಕ್ಷರು ಖುದ್ದು ಭೇಟಿ ಮಾಡಿ ಈ ಬಗ್ಗೆ ಕ.ಸಾ.ಪ. ಅಧ್ಯಕ್ಷರು ಮನವರಿಕೆ ಮಾಡಿಕೊಟ್ಟಿರುತ್ತಾರೆ. ಅಲ್ಲದೆ ಸಭೆ-ಸಮಾರಂಭಗಳಲ್ಲಿ ಗಾಯಕರಿಗೆ, ಸಂಗೀತಗಾರರಿಗೆ ನಾಡಗೀತೆ ಹಾಡುವ ಕ್ರಮ ಮತ್ತು ಕಾಲಾವಧಿ ಬಗ್ಗೆ ಪರಿಷತ್ತು ಮನವರಿಕೆ ಮಾಡಿಕೊಡುತ್ತಿದೆ.

- **ಪ್ರಾಥಮಿಕ ಹಂತದಲ್ಲಿ ಒಂದು ಸಾವಿರ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯದಿರುವಂತೆ ಕೋರಿ ಸರ್ಕಾರಕ್ಕೆ ಮನವಿ:**

ಸರ್ಕಾರವು ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ತೆರೆಯಲಿದೆ ಎಂಬ ವಿಷಯ ತಿಳಿದು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ತೀವ್ರ ಕಳವಳ ವ್ಯಕ್ತಪಡಿಸಿ, ಡಿಸೆಂಬರ್ ೧೯ರಂದು ಬುಧವಾರ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಸಾಹಿತಿಗಳ, ಶಿಕ್ಷಣ ತಜ್ಞರ ಸಭೆಯನ್ನು ಡಾ. ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ಸಭೆಯಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಚಂದ್ರಶೇಖರ ಕಂಬಾರ, ಖ್ಯಾತ ಕಾದಂಬರಿಕಾರ ಡಾ. ಎಸ್.ಎಲ್.ಭೈರಪ್ಪ, ಪ್ರೊ. ಚಂದ್ರಶೇಖರ ಪಾಟೀಲ, ಪ್ರೊ.ಹಂಪನಾ, ಡಾ.ದೊಡ್ಡರಂಗೇಗೌಡ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್, ಡಾ. ಸಿದ್ದಲಿಂಗಯ್ಯ, ಕನ್ನಡ ಹೋರಾಟಗಾರ ಟಿ.ಎ.ನಾರಾಯಣಗೌಡ ಅವರು ಸೇರಿದಂತೆ ೩೨ ಜನ ಸಾಹಿತಿಗಳು, ಶಿಕ್ಷಣ ತಜ್ಞರು ಹಾಗೂ ಕನ್ನಡ ಹೋರಾಟಗಾರರು ಭಾಗವಹಿಸಿದ್ದರು.

ಸುಮಾರು ನಾಲ್ಕು ಗಂಟೆಗಳ ಕಾಲ ನಡೆದ ಈ ಸುದೀರ್ಘ ಸಭೆಯಲ್ಲಿ ಸರ್ಕಾರದ ನಿರ್ಣಯದ ಬಗೆಗೆ ತೀವ್ರ ಆತಂಕ ವ್ಯಕ್ತವಾಯಿತು. "ಇಂಗ್ಲಿಷ್ ಮಾಧ್ಯಮದ ಶಾಲೆಗಳು ಕನ್ನಡದ

ಬೆಳವಣಿಗೆಗೆ ಕುಠಾರ ಪ್ರಾಯವಾಗಿ ಪರಿಣಮಿಸಲಿವೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ನಿರ್ಣಯವನ್ನು ಕೈ ಬಿಡಬೇಕು ಎಂದು ಆಗ್ರಹಿಸಲು ಒಂದು ನಿಯೋಗ ತೆಗೆದುಕೊಂಡು ಹೋಗಬೇಕು" ಎಂದು ಸಭೆಯಲ್ಲಿ ಒಕ್ಕೊರಲಿನಿಂದ ತೀರ್ಮಾನಿಸಲಾಯಿತು. ಅದರಂತೆ ೨೦೧೮ರ ಡಿಸೆಂಬರ್ ೨೧ ರಂದು ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯದಿರುವಂತೆ ಕೋರಿ ಪತ್ರ ಬರೆಯಲಾಗಿತ್ತು; ಅಲ್ಲದೆ ಮುಂದೆ ನಿಯೋಗದಲ್ಲಿ ಹೋಗಿ ಒತ್ತಾಯಿಸಲಾಗಿತ್ತು. 'ಕನ್ನಡ ನುಡಿ'ಯಲ್ಲೂ ಇದನ್ನು ಪ್ರಕಟಿಸಲಾಗಿದೆ.

### ♦ ಹೊರರಾಷ್ಟ್ರ ಬಹರೇನ್ ಕನ್ನಡ ಸಂಘದ ಭವನದಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು ವೇದಿಕೆ'

ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಹೊರದೇಶದಲ್ಲಿ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸುವ ಮೂಲಕ ವಿಶ್ವದಾದ್ಯಂತ ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ವಿಸ್ತರಿಸುವ ಕಾರ್ಯ ನಡೆಯಿತು. ನಾಡಿನ ಸಾಹಿತ್ಯ, ಸಂಸ್ಕೃತಿಯನ್ನು ಅನಾವರಣ ಗೊಳಿಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಬಹರೇನ್‌ನ ಕನ್ನಡ ಸಂಘದ ಸಂಯುಕ್ತ ಆಶ್ರಯದಲ್ಲಿ ಬಹರೇನ್‌ನಲ್ಲಿ ೨೦೧೮ ರ ಅಕ್ಟೋಬರ್ ೫ ಹಾಗೂ ೬ ರಂದು "ಪ್ರಪ್ರಥಮ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನ'ವನ್ನು ಏರ್ಪಡಿಸಿತ್ತು. ಈ ಸಮ್ಮೇಳನದ ಸಂದರ್ಭದಲ್ಲಿ ಬಹರೇನ್ ಕನ್ನಡ ಸಂಘದವರು ಬಹರೇನ್‌ನಲ್ಲಿ ಕನ್ನಡ ಕಾರ್ಯಚಟುವಟಿಕೆಗಳನ್ನು ನಡೆಸಲು ಸ್ವಂತ ಕಟ್ಟಡ ವೊಂದನ್ನು ನಿರ್ಮಿಸುತ್ತಿದ್ದು, ಕನ್ನಡ ಸಾಹಿತ್ಯ ಪರಿಷತ್ತು ಆರ್ಥಿಕ ಸಹಾಯ ನೀಡಬೇಕೆಂದು ಮನವಿ ಸಲ್ಲಿಸಿದ್ದರು. ಈ ವಿಚಾರವನ್ನು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಿ ಧನ ಸಹಾಯ ನೀಡುವುದಾಗಿ ಡಾ. ಮನು ಬಳಿಗಾರ್ ಅವರು ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ್ದರು. ಬಹರೇನ್‌ನಲ್ಲಿ ನಡೆದ ಅಭೂತಪೂರ್ವ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಹರೇನ್ ಕನ್ನಡ ಸಂಘದವರು ಊಟ, ಉಪಚಾರ, ವಸತಿ, ಸಾರಿಗೆ ಇತ್ಯಾದಿ ಬಾಬತ್ತುಗಳಿಗೆ ಸಾಕಷ್ಟು ಖರ್ಚು-ವೆಚ್ಚ ಭರಿಸಿದ್ದರು.

ಹೊರರಾಷ್ಟ್ರದಲ್ಲಿ ಕನ್ನಡದ ಕಾರ್ಯಕ್ರಮಗಳನ್ನು ನಡೆಸಿ ಕನ್ನಡ ಭಾಷೆ, ಸಂಸ್ಕೃತಿಯನ್ನು ವಿಶ್ವಾದ್ಯಂತ ಪರಿಚಯಿಸುವ ಕೆಲಸ ಮಾಡುತ್ತಿರುವ ಬಹರೇನ್ ಕನ್ನಡ ಸಂಘದ ಕಟ್ಟಡ ನಿರ್ಮಾಣಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಧನ ಸಹಾಯ ಮಾಡುವುದು ಉಚಿತವಾಗಿರುತ್ತದೆ. ಆದ್ದರಿಂದ ಭವನ ನಿರ್ಮಾಣಕ್ಕೆ ಅನುದಾನ ನೀಡಲು ದಿನಾಂಕ ೧೮-೦೮-೨೦೧೯ರಂದು ಕೋಲಾರದ ಶ್ರೀ ಟಿ. ಚನ್ನಯ್ಯ ರಂಗಮಂದಿರದಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯು ಸರ್ವಾನುಮತದಿಂದ ನಿರ್ಣಯಕೈಗೊಂಡು, ಭವನ ನಿರ್ಮಾಣಕ್ಕೆ ರೂ.೨೫.೦೦ ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಪರಿಷತ್ತು ನೀಡಿದ ಈ ಧನ ಸಹಾಯಕ್ಕೆ ಪ್ರತಿಯಾಗಿ, ಬಹರೇನ್ ಕನ್ನಡ ಸಂಘವು ತನ್ನ ಹೊಸ ಕನ್ನಡ ಭವನದಲ್ಲಿನ ವೇದಿಕೆಗೆ "ಕನ್ನಡ ಸಾಹಿತ್ಯ ಪರಿಷತ್ತು ವೇದಿಕೆ" ಎಂದು ಹೆಸರಿಟ್ಟು ಗೌರವ ಸೂಚಿಸಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರನ್ನು ಹೊರದೇಶದ ಸಭಾಂಗಣವೊಂದಕ್ಕೆ ನಾಮಕರಣ ಮಾಡುವ ಮೂಲಕ ಹೊರರಾಷ್ಟ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರನ್ನು ಚಿರಸ್ಥಾಯಿಗೊಳಿಸಿರುವುದು ಐತಿಹಾಸಿಕ ದಾಖಲೆಯಾಗಿದೆ.

### ♦ ಕನ್ನಡದಲ್ಲಿ ಬ್ಯಾಂಕಿಂಗ್ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯ :

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗದಲ್ಲಿ ಡಾ. ಎಲ್. ಹನುಮಂತಯ್ಯ ಹಾಗೂ ಪ್ರೊಎಸ್. ಜಿ. ಸಿದ್ದರಾಮಯ್ಯ ಅಧ್ಯಕ್ಷರಾಗಿದ್ದಾಗ, ಹಿರಿಯ ಹೋರಾಟಗಾರರು, ಸಾಹಿತಿಗಳು ಹಾಗೂ ಇತರೆ ಸಂಘ ಸಂಸ್ಥೆಗಳೊಡನೆ ಕಳೆದ ಮೂರು ವರ್ಷಗಳಿಂದ ಹಲವಾರು ಬಾರಿ ದೆಹಲಿಗೆ ಹೋಗಿ ಕೇಂದ್ರ ಸಚಿವರುಗಳಿಗೆ ಕನ್ನಡದಲ್ಲಿ ಬ್ಯಾಂಕಿಂಗ್ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವಂತೆ ಮನವಿ ಸಲ್ಲಿಸಲಾಗಿತ್ತು. ಪ್ರಾದೇಶಿಕ ಭಾಷೆಗಳಲ್ಲಿ ಬ್ಯಾಂಕಿಂಗ್ ನೇಮಕಾತಿ ಪರೀಕ್ಷೆ ನಡೆಸಬೇಕೆಂಬ ಮೂರು ವರ್ಷಗಳ ಒತ್ತಾಯಕ್ಕೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ. ಇದರಿಂದಾಗಿ ಪ್ರಾದೇಶಿಕ ಬ್ಯಾಂಕುಗಳ ನೇಮಕಾತಿಗೆ ನಡೆಸುವ ಪರೀಕ್ಷೆಯನ್ನು ಇನ್ನು ಮುಂದೆ ಕನ್ನಡ ಸೇರಿದಂತೆ ೧೩ ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ಕಲ್ಪಿಸಿ ಕೊಟ್ಟಂತಾಗಿದೆ. ಕೇಂದ್ರ ಸರ್ಕಾರದ ಈ ಕ್ರಮದಿಂದಾಗಿ ಗ್ರಾಮೀಣ ಭಾಗದ ಹಾಗೂ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚು ಅನುಕೂಲವಾಗಲಿದೆ.

## ♦ ಸಾಧಕರೊಡನೆ ಸಂವಾದದಲ್ಲಿ ಭಾಗವಹಿಸಿದ್ದ ಅತಿಥಿ ಸಾಧಕರು

೨೦೧೬ ರಿಂದ ಹೊಸದಾಗಿ ಪ್ರಾರಂಭಿಸಲಾದ ಈ ವಿನೂತನ ಕಾರ್ಯಕ್ರಮದಲ್ಲಿ ಈ ಕೆಳಗೆ ತೋರಿಸಿದ ಗಣ್ಯ ಮಾನ್ಯರು ಭಾಗವಹಿಸಿ ಬಹು ಉಪಯುಕ್ತ ಸಂವಾದ ನಡೆಸಿದ್ದಾರೆ.

**೨೦೧೭ನೇ ಸಾಲಿನಲ್ಲಿ**

೧. ಡಾ. ಬಿ. ಜಯಶ್ರೀ ಡಿಸೆಂಬರ್

**೨೦೧೮ನೇ ಸಾಲಿನಲ್ಲಿ**

೧. ಡಾ. ಎಲ್. ಹನುಮಂತಯ್ಯ ಜನವರಿ

೨. ಡಾ. ಬಿ.ಟಿ. ಲಲಿತಾ ನಾಯಕ್ ಫೆಬ್ರವರಿ

೩. ಪ್ರೊ. ರಾಘವೇಂದ್ರ ಪಾಟೀಲ ಮಾರ್ಚ್

೪. ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಏಪ್ರಿಲ್

೫. ಡಾ. ಕೆ. ಚಿದಾನಂದಗೌಡ ಮೇ

೬ ಡಾ. ಎ.ಎಸ್. ಕಿರಣ್ ಕುಮಾರ್ ಜುಲೈ

೭. ನ್ಯಾಮೂ.ಡಾ. ಎಂ.ಎನ್.ವೆಂಕಟಾಚಲಯ್ಯ ಆಗಸ್ಟ್

೮. ಡಾ. ದೊಡ್ಡರಂಗೇಗೌಡ ಸೆಪ್ಟೆಂಬರ್

೯. ಶ್ರೀ ಶ್ರೀನಿವಾಸ, ಜಿ. ಕಪ್ಪಣ್ಣ ಅಕ್ಟೋಬರ್

೧೦. ಡಾ. ನಾ. ಮೊಗಸಾಲೆ ನವೆಂಬರ್

೧೧. ನ್ಯಾ.ಮೂ. ಡಾ.ಶಿವರಾಜ್ ವಿ. ಪಾಟೀಲ್ ಡಿಸೆಂಬರ್

**೨೦೧೯ನೇ ಸಾಲಿನಲ್ಲಿ**

೧. ಡಾ. ಸಂಧ್ಯಾ ಎಸ್. ಪೈ ಫೆಬ್ರವರಿ

